ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 23 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 215 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಅಧಿಕಾರ ಹಸ್ತಾಂತರ ವಿಚಾರ; ಎರಡ್ಮೂರು ದಿನದಲ್ಲಿ

ಕ್ಲೈಮ್ಯಾಕ್ಸ್ ನಿರೀಕ್ಷೆ

- ಮೂಲಗಳ ಪ್ರಕಾರ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ವರಿಷ್ಠರ ಸಂದೇಶ
- ಪಕ್ಷ, ಸರ್ಕಾರಕ್ಕೆ ಯಾವ ಧಕ್ಕೆ ಆಗದಂತೆ ಸೂಕ್ತ ತೀರ್ಮಾನಕ್ಕೆ ನಿರ್ಧಾರ



ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ರಾತ್ರಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ಭೇಟಿ ಮಾಡಿದರು.

ಬೆಂಗಳೂರು,ನ.22(ಕೆಎಂಶಿ)– ಅಧಿಕಾರ ಹಸ್ತಾಂತರ ಕುರಿತು ಪಕ್ಷ ಮತ್ತು ಸರ್ಕಾರಕ್ಕೆ ಧಕ್ಕೆ ಆಗದಂತೆ ಎರಡು–ಮೂರು ದಿನದಲ್ಲಿ ನಿರ್ಣಯ ಕೈಗೊಳ್ಳುವಂತೆ ದೆಹಲಿ ವರಿಷ್ಠರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಂದೇಶ ರವಾನಿಸಿದ್ದಾರೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರದ ಆಡಳಿತ ಎರಡೂವರೆ ವರ್ಷ ಪೂರ್ಣಗೊಳ್ಳುತ್ತಿದ್ದಂತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬೆಂಬಲಿಗರು ಅಧಿಕಾರ ಹಸ್ತಾಂತರಿಸಬೇಕೆಂಬ ಕೂಗು ಎಬ್ಬಿಸಿದ್ದಾರೆ.

ಇದರ ಜೊತೆಯಲ್ಲೇ ಶಾಸಕಾಂಗ ಪಕ್ಷದ ಸಭೆ ಕರೆಯುವಂತೆಯೂ ಮುಖ್ಯಮಂತ್ರಿ ಮೇಲೆ ಒತ್ತಡ ತರಲು ಶಿವಕುಮಾರ್ ಬೆಂಬಲಿಗರು ಮುಂದಾಗಿದ್ದಾರೆ. ಇನ್ನೊಂದೆಡೆ ಉಪಮುಖ್ಯಮಂತ್ರಿ ಪರ ಸಹಿ ಸಂಗ್ರಹವೂ ನಡೆಯುತ್ತಿದ್ದು, ಒಂದು ಹಂತಕ್ಕೆ ತಲುಪುತ್ತಿದ್ದಂತೆ ಬಹಿರಂಗವಾಗಿಯೇ ಶಾಸಕಾಂಗ ಪಕ್ಷ ಸಭೆ ಕರೆಯುವಂತೆ ಸಿದ್ದರಾಮಯ್ಯ ಹಾಗೂ ವರಿಷ್ಠರನ್ನು ಒತ್ತಾಯಿಸಲಿದ್ದಾರೆ. ಮತ್ತೊಂದೆಡೆ ಡಿ.ಕೆ.ಶಿವಕುಮಾರ್ ಪಕ್ಷದ ಶಾಸಕರನ್ನು ಕರೆದು ಮುಖಾಮುಖಿ ಚರ್ಚಿಸಿ,

▶ 6ನೇ ಪುಟಕ್ಕೆ

> "ವಿದೇಶ ಪ್ರವಾಸದಲ್ಲಿರುವ ರಾಹುಲ್ ಬರುವುದಕ್ಕೂ ಮುನ್ನ ಒಂದು ಸೂತ್ರ ಸಿದ್ಧಪಡಿಸಲು ಖರ್ಗೆ ಕಸರತ್ತು ನಡೆಸಿದ್ದಾರೆ. ಸೋನಿಯಾ, ಪ್ರಿಯಾಂಕಾ ಹಾಗೂ ರಾಜ್ಯ ಉಸ್ತುವಾರಿ ಸುರ್ಜೇವಾಲ ನೀಡಿರುವ ಮಾಹಿತಿಯನ್ನು ಸಿದ್ದರಾಮಯ್ಯ ಅವರಿಗೆ ತಲುಪಿಸಿರುವ ಖರ್ಗೆ ಇನ್ನೆರಡು–ಮೂರು ದಿನದಲ್ಲಿ ಈ ಬಗ್ಗೆ ನಿಮ್ಮ ನಿಲುವನ್ನು ಪಕ್ಷಕ್ಕೆ ತಿಳಿಸಿ ಎಂಬ ಸಂದೇಶ ರವಾನಿಸಿದ್ದಾರೆ.

ಹೈಕಮಾಂಡ್ ನಿರ್ಧಾರವೇ ಅಂತಿಮ: ಸಿದ್ದರಾಮಯ್ಯ

ಬೆಂಗಳೂರು: ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಸ್ಥಾನಕ್ಕಾಗಿ ಶಾಸಕರ ಬಲಾಬಲ ಪ್ರದರ್ಶನ ನಡೆಯುತ್ತಿರುವ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ರಾತ್ರಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಬೆಂಗಳೂರಿನ ಅವರ ಸದಾಶಿವನಗರದ ನಿವಾಸದಲ್ಲಿ ಭೇಟಿಯಾಗಿ ಮಹತ್ವದ ಚರ್ಚೆ ನಡೆಸಿದ್ದಾರೆ.

ಸುಮಾರು ಒಂದೂವರೆ ಗಂಟೆ ಕಾಲ ಖರ್ಗೆಯವರೊಂದಿಗೆ ಚರ್ಚೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ನಾಯಕತ್ವ ಬದಲಾವಣೆ ಆಗಿರಬಹುದು ಇಲ್ಲವೇ ಯಾವುದೇ ವಿಷಯವಾಗಿರಬಹುದು ಹೈಕಮಾಂಡ್ ನಿರ್ಧಾರವೇ ಅಂತಿಮವಾಗಿದ್ದು, ಅದನ್ನು ನಾನೂ ಸೇರಿದಂತೆ ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಎಲ್ಲಾ ಕಾಂಗ್ರೆಸ್ ನಾಯಕರು ಒಪ್ಪಿಕೊಳ್ಳಲೇಬೇಕಾಗುತ್ತದೆ ಎಂದರು.

ನನ್ನನ್ನು ಯಾವಾಗ ದೆಹಲಿಗೆ ಕರೆಯುತ್ತಾರೋ ಆಗ ನಾನು ಹೋಗುತ್ತೇನೆ ಎಂದ ಅವರು, ಸಪ್ಪಗಿದ್ದೀರಾ ಎಂಬ ಪತ್ರಕರ್ತರ ಪ್ರಶ್ನೆಗೆ, ನಾನು ಡಲ್ ಆಗುವ ಪ್ರಶ್ನೆಯೇ ಇಲ್ಲ. ಯಾವುದೇ ಪರಿಸ್ಥಿತಿಯಲ್ಲೂ ನಾನು ಡಲ್ ಆಗುವುದೂ ಇಲ್ಲ, ಅತಿಯಾಗಿ ಸಂತೋಷಪಡುವುದೂ ಇಲ್ಲ ಎಂದರು.

ಇಂದು ಮಲ್ಲಿಕಾರ್ಜುನ ಖರ್ಗೆ ಅವರೊಂದಿಗಿನ ಭೇಟಿ ಸೌಹಾರ್ದ ಭೇಟಿಯಾಗಿದ್ದು, ನಾನು ಮತ್ತು ಅವರು ಪಕ್ಷ ಸಂಘಟನೆ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ಬಗ್ಗೆ ಸುದೀರ್ಘ ಒಂದೂವರೆ ಗಂಟೆ ಕಾಲ ಚರ್ಚೆ ನಡೆಸಿದ್ದೇವೆ ಎಂದರು.

ಡಿ.ಕೆ.ಶಿವಕುಮಾರ್‌ರವರು ಪರಪ್ಪನ ಅಗ್ರಹಾರ ಜೈಲಿಗೆ ತೆರಳಿ ಶಾಸಕರಾದ ವಿನಯ್ ಕುಲಕರ್ಣಿ ಮತ್ತು ರಾಜೇಂದ್ರ ಪಪ್ಪಿ ಅವರನ್ನು ಭೇಟಿ ಮಾಡಿದ ಕುರಿತು ಉತ್ತರಿಸಿದ ಸಿಎಂ, ಇಂಟೆಲಿಜೆನ್ಸಿ ಮೂಲಕ ಅದನ್ನು ತಿಳಿದುಕೊಂಡಿದ್ದೇನೆ ಎಂದರು. ಖರ್ಗೆ ಭೇಟಿಗೂ ಮುನ್ನ ತಮ್ಮ ನಿವಾಸದಲ್ಲಿ ಆಪ್ತ ಸಚಿವರು, ಶಾಸಕರೊಂದಿಗೆ ಸುದೀರ್ಘ ಚರ್ಚೆ ನಡೆಸಿದರು.


ಮೈಸೂರು–ಹುಬ್ಬಳ್ಳಿ ಹಂಪಿ ಎಕ್ಸ್‌ಪ್ರೆಸ್ ಹಳಿ ತಪ್ಪಿಸುವ ಸಂಚು!

ಪುಟ 7

ಮೈಸೂರು ಮಿತ್ರ ಭಾನುವಾರ 23 ನವೆಂಬರ್ 2025

ರಸ್ತೆ ಸಾರಿಗೆ ಸುರಕ್ಷತೆ ಸಂಬಂಧ ವೈಜ್ಞಾನಿಕ ಮಾದರಿ ಆವಿಷ್ಕಾರ

ರಾಷ್ಟ್ರೀಯ ಬಾಲ ವೈಜ್ಞಾನಿಕ ಪ್ರದರ್ಶನಿಯಲ್ಲಿ ವಿದ್ಯಾ ಭಾಗಿ





ಹೆಚ್.ಎಸ್.ವಿದ್ಯಾ ಅವರು ಆವಿಷ್ಕರಿಸಿರುವ ವೈಜ್ಞಾನಿಕ ಮಾದರಿಗಳಾದ ಸ್ಮಾರ್ಟ್ ಹೆಲ್ಮೆಟ್ ಹಾಗೂ ಕನ್ನಡಕ. ಮತ್ತೊಂದು ಚಿತ್ರದಲ್ಲಿ ಮಧ್ಯಪ್ರದೇಶದ ಭೋಪಾಲದ ಶ್ಯಾಮಲಾ ಹಿಲ್ಸ್‌ನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾ ಮತ್ತು ಅವರ ಶಿಕ್ಷಕ ವೆಂಕಟೇಶ ವೈಜ್ಞಾನಿಕ ಮಾದರಿಗಳನ್ನು ಪ್ರದರ್ಶಿಸಿರುವುದನ್ನು ಕಾಣಬಹುದು.

ಮಹಾರಾಣಿ ಪಿಯು ಕಾಲೇಜಲ್ಲಿ ವ್ಯಾಸಂಗ ಮಾಡುತ್ತಿರುವ ಹೆಚ್.ಎಸ್.ವಿದ್ಯಾ

ಮೈಸೂರು,ನ.22(ಪಿಎಂ)– ಮದ್ಯಪಾನ ಮಾಡಿ ಧರಿಸಿದರೆ ಹೆಲ್ಮೆಟ್‌ನಲ್ಲಿ ಮಿನುಗುವ (ಬ್ಲಿಂಕ್) ದೀಪ ಹಾಗೂ ವಾಹನ ಚಾಲನೆ ವೇಳೆ ನಿದ್ದೆಗೆ ಜಾರಿದರೆ ಎಚ್ಚರಿಸುವ ಕನ್ನಡಕ ಆವಿಷ್ಕರಿಸಿರುವ ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿ ಹೆಚ್.ಎಸ್.ವಿದ್ಯಾ, ರಾಜ್ಯ ಮಟ್ಟದಿಂದ ಆಯ್ಕೆಯಾಗುವ ಮೂಲಕ ರಾಷ್ಟ್ರೀಯ ಬಾಲ ವೈಜ್ಞಾನಿಕ ಪ್ರದರ್ಶನಿ (ಆರ್‌ಬಿವಿಪಿ) 2025ರಲ್ಲಿ ಪಾಲ್ಗೊಂಡಿದ್ದಾರೆ.

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ವತಿಯಿಂದ ನ.18ರಿಂದ 23ರವರೆಗೆ ಮಧ್ಯಪ್ರದೇಶದ ಭೋಪಾಲದ ಶ್ಯಾಮಲಾ ಹಿಲ್ಸ್‌ನ ಪ್ರಾದೇಶಿಕ ಶಿಕ್ಷಣ ಸಂಸ್ಥೆ (ಆರ್‌ಐಇ) ಯಲ್ಲಿ ನಡೆಯಲಿರುವ ರಾಷ್ಟ್ರೀಯ ಬಾಲ ವೈಜ್ಞಾನಿಕ ಪ್ರದರ್ಶನಿಯಲ್ಲಿ ವಿದ್ಯಾ, ತಮ್ಮ ವೈಜ್ಞಾನಿಕ ಪ್ರದರ್ಶನ ಅನಾವರಣ ಮಾಡಿದ್ದಾರೆ.

ಪ್ರಸ್ತುತ ಮೈಸೂರಿನ ಮಹಾರಾಣಿ ಪದವಿಪೂರ್ವ ಕಾಲೇಜಿನ ಪ್ರಥಮ ಪಿಯುಸಿ ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ಹೆಚ್.ಎಸ್.ವಿದ್ಯಾ, ಈ ಹಿಂದೆ ವ್ಯಾಸಂಗ ಮಾಡಿದ ಪ್ರೌಢಶಾಲೆಯಿಂದ ರಾಷ್ಟ್ರೀಯ ಬಾಲ ವೈಜ್ಞಾನಿಕ್ ಪ್ರದರ್ಶನಿಗೆ ಆಯ್ಕೆ ಆಗಿದ್ದಾರೆ.

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಹುಂಡಿಪುರ ಸರ್ಕಾರಿ ಪ್ರೌಢಶಾಲೆ ಯಿಂದ ಈ ವಿದ್ಯಾರ್ಥಿನಿ ಸದರಿ ರಾಷ್ಟ್ರ ಮಟ್ಟದ ಪ್ರದ ರ್ಶನದಲ್ಲಿ ಪಾಲ್ಗೊಂಡಿದ್ದಾರೆ. ರಾಜ್ಯ ದಿಂದ ವಿದ್ಯಾ ಸೇರಿದಂತೆ ಕೇವ'ಲ ಇಬ್ಬರು ವಿದ್ಯಾರ್ಥಿಗಳು ಆಯ್ಕೆಯಾಗಿರುವುದು ಗಮನಾರ್ಹ. ಅದರಲ್ಲೂ ಕರ್ನಾಟಕ ರಾಜ್ಯದ ಪ್ರೌಢಶಾಲಾ ವಿಭಾಗದಿಂದ ಆಯ್ಕೆಯಾಗಿರುವ ಇಬ್ಬರು ಸಹ ವಿದ್ಯಾರ್ಥಿನಿಯರೇ ಆಗಿರುವುದು ವಿಶೇಷ. ಹುಂಡಿಪುರ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ವೆಂಕಟೇಶ ಅವರ ಮಾರ್ಗದರ್ಶನದಲ್ಲಿ ವಿದ್ಯಾ, ಈ ಆವಿಷ್ಕಾರ ಮಾಡಿದ್ದು, ಅವರೊಂದಿಗೆ ರಾಷ್ಟ್ರ ಮಟ್ಟದ ಪ್ರದರ್ಶನದಲ್ಲಿ ಭಾಗಿಯಾಗಿದ್ದಾರೆ. ಕಾಡಂಚಿನ ಗ್ರಾಮವಾದ ಹುಂಡಿಪುರದ ಸದಾಶಿವಪ್ಪ ಹಾಗೂ ನಾಗಮಣಿ ದಂಪತಿ ಪುತ್ರಿಯಾದ ವಿದ್ಯಾ, ಎಸ್‌ಎಸ್‌ಎಲ್‌ಸಿಯಲ್ಲಿ (ಕನ್ನಡ ಮಾಧ್ಯಮ) ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ವಿದ್ಯಾ, ನಾನು ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ಮಹಾರಾಣಿ ಪಿಯು ಕಾಲೇಜಿನಲ್ಲಿ ಪ್ರಾಂಶುಪಾಲರು ಹಾಗೂ ಅಧ್ಯಾಪಕರು ನನ್ನ ವೈಜ್ಞಾನಿಕ ಮಾದರಿ ಕುರಿತಂತೆ ಸಾಕಷ್ಟು ಮಾರ್ಗದರ್ಶನ ನೀಡಿದ್ದಾರೆ. ಅಲ್ಲದೇ ಕಾಲೇಜಿನ ವತಿಯಿಂದ ಪ್ರೋತ್ಸಾಹಧನ ನೀಡಿ ಉತ್ತೇಜಿಸಿದ್ದಾರೆ ಎಂದು ಹೇಳಿದರು.

> “ನಮ್ಮ ತಂದೆ ವ್ಯವಸಾಯ ಮಾಡುತ್ತಾರೆ. ತಾಯಿ ಗೃಹಿಣಿಯಾಗಿದ್ದು, ನಾನೇ ಹಿರಿಯ ಪುತ್ರಿ. ಒಬ್ಬ ಕಿರಿಯ ಸಹೋದರ ಇದ್ದಾನೆ. ನನ್ನ ಪ್ರೌಢಶಾಲಾ ಶಿಕ್ಷಕರಾದ ವೆಂಕಟೇಶ ಅವರು ನನ್ನ ಈ ವೈಜ್ಞಾನಿಕ ಮಾದರಿ ಆವಿಷ್ಕಾರಕ್ಕೆ ಉತ್ತೇಜನ ನೀಡಿದ್ದಾರೆ. ಕಳೆದ ತಿಂಗಳು ನಡೆದ ರಾಜ್ಯ ಮಟ್ಟದ ಬಾಲ ಪ್ರದರ್ಶಿನಿಯಲ್ಲಿ ಪಾಲ್ಗೊಂಡು ದ್ವಿತೀಯ ಸ್ಥಾನಗಳಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದೇನೆ. 5 ವಿಷಯಗಳಿಗೆ ಸಂಬಂಧಿಸಿದಂತೆ 26 ವಿದ್ಯಾರ್ಥಿಗಳ ವೈಜ್ಞಾನಿಕ ಮಾದರಿಗಳ ಬಗ್ಗೆ ವೀಡಿಯೊಮಾಡಿ ಕಳುಹಿಸಲಾಗಿತ್ತು. ಅದರಲ್ಲಿ ನನ್ನ ಮಾದರಿಯನ್ನು ಆಯ್ಕೆ ಮಾಡಲಾಗಿದೆ. **–ಹೆಚ್.ಎಸ್.ವಿದ್ಯಾ.**

ವಿದ್ಯಾ ಅವರ ಮಾರ್ಗದರ್ಶಕ ಶಿಕ್ಷಕ ವೆಂಕಟೇಶ ಅವರು 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿ, ಎನ್‌ಸಿಇಆರ್‌ಟಿ ವತಿಯಿಂದ ತಾಲೂಕು ಹಂತ, ಜಿಲ್ಲಾ ಹಂತ, ವಿಭಾಗ ಹಂತ ಮತ್ತು ರಾಜ್ಯ ಹಂತ ಸೇರಿದಂತೆ ನಾಲ್ಕು ಹಂತಗಳಲ್ಲಿ ಬಾಲ ವೈಜ್ಞಾನಿಕ್ ಪ್ರದರ್ಶನಿ ನಡೆಯಿತು. ರಾಜ್ಯ ಮಟ್ಟದಿಂದ ರಾಷ್ಟ್ರ ಮಟ್ಟಕ್ಕೆ ಆಯ್ಕೆ ಪ್ರಕ್ರಿಯೆಯು ಬೆಂಗಳೂರಿನ ಡಿಎಸ್‌ಇಆರ್‌ಟಿಯಲ್ಲಿ ನಡೆಯಿತು. ಈ ಹಂತದಲ್ಲಿ ರಾಜ್ಯದ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪ್ರೌಢಶಾಲಾ ವಿಭಾಗದಿಂದ ವಿದ್ಯಾ ಹಾಗೂ ಚಿಕ್ಕಬಳ್ಳಾಪುರದ ವಿದ್ಯಾರ್ಥಿನಿಯೊಬ್ಬರು ಆಯ್ಕೆಯಾಗಿದ್ದಾರೆ ಎಂದು ತಿಳಿಸಿದರು.

ಮೈಸೂರಲ್ಲಿ ಓಟ್ ಚೋರಿ ಸಹಿ ಸಂಗ್ರಹ ಅಭಿಯಾನ

ಕಾಂಗ್ರೆಸ್ ಓಟ್ ಚೋರಿ ಬಗ್ಗೆ ದಾಖಲೆ ನೀಡಿದರೂ ಓಟ್ ಚೋರಿ ನಿಂತಿಲ್ಲ



ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಮತ್ತು ಸಾಹುಕಾರ್ ಚೆನ್ನಯ್ಯ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಓಟ್ ಚೋರಿ ಸಹಿ ಸಂಗ್ರಹ ಅಭಿಯಾನ ನಡೆಸಲಾಯಿತು.

ಮೈಸೂರು,ನ.22(ಜಿಎ)–ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಮತ್ತು ಸಾಹುಕಾರ್ ಚೆನ್ನಯ್ಯ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಮೈಸೂರಲ್ಲಿ ಓಟ್ ಚೋರಿ ಸಹಿ ಸಂಗ್ರಹ ಅಭಿಯಾನ ನಡೆಸಲಾಯಿತು.

ಮೈಸೂರಿನ ಬನ್ನೂರು ರಸ್ತೆಯಲ್ಲಿರುವ ವಿದ್ಯಾನಗರದ ಅಪ್ಪು ಸರ್ಕಲ್ ಬಳಿ ಏರ್ಪಡಿಸಿದ್ದ ಸಹಿ ಸಂಗ್ರಹ ಅಭಿಯಾನಕ್ಕೆ ಕೆಪಿಸಿಸಿ ಕಾರ್ಯಾಧ್ಯಕ್ಷ ಮತ್ತು ಶಾಸಕರೂ ಆದ ತನ್ವೀರ್ ಸೇಠ್ ಸಹಿ ಮಾಡುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು. ಈ ವೇಳೆ ನೂರಾರು ಕಾಂಗ್ರೆಸ್ ಕಾರ್ಯಕರ್ತರು, ಸಾರ್ವಜನಿಕರು ಅಭಿಯಾನದಲ್ಲಿ ಪಾಲ್ಗೊಂಡಿದ್ದರು.

ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಶಾಸಕ ತನ್ವೀರ್ ಸೇಠ್, ಹರಿಯಾಣ ಮತ್ತು ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಆದ ಮತಗಳ್ಳತನವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ದಾಖಲೆ ಸಮೇತ ಚುನಾವಣಾ ಆಯೋಗಕ್ಕೆ ಮಾಹಿತಿ ನೀಡಿದ್ದಾರೆ. ಈ ನಡುವೆ ಮತಗಳ್ಳತನ ಮುಂದುವರೆದಿದ್ದು, ಬಿಹಾರ್‌ನಲ್ಲಿ ಮತ್ತೆ ಅದು ಸಾಬೀತಾಗಿದೆ ಎಂದರು.

ಬಿಹಾರ್ ಚುನಾವಣೆಗೂ ಮುನ್ನ ಮತ ಪರಿಷ್ಕರಣೆ ಎಂದು 64 ಲಕ್ಷ ಮತದಾರರನ್ನು ಕೈ ಬಿಡಲಾಗಿದೆ. ಅದಕ್ಕೆ ಈವರೆಗೂ ಯಾವುದೇ ಸ್ಪಷ್ಟನೆ ನೀಡಿಲ್ಲ. ಚುನಾವಣಾ ಆಯೋಗದ ಪ್ರಕಾರ 7 ಕೋಟಿ ಮತದಾರರಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ. ಮತದಾನದ ಏಣಿಕೆಯಲ್ಲಿ ಮಾತ್ರ 7 ಕೋಟಿಗೂ ಅಧಿಕ ಮತದಾನವಾಗಿದೆ. ಇದು ಹೇಗೆ ಸಾಧ್ಯವಾಗಿದೆ. ಮತಗಳ್ಳತನಕ್ಕೆ ಇದು ಪುಷ್ಟಿ ನೀಡಿದೆ. ಮತ್ತೊಂದೆಡೆ ಚುನಾವಣೆಗೂ ಮುನ್ನ ದಿನ ಬಿಜೆಪಿ ಅಲ್ಲಿ ಮತದಾರರಿಗೆ 10 ಸಾವಿರ ರೂ. ಗಳನ್ನು ಮತದಾರರ ಖಾತೆಗೆ ಹಾಕಿರುವುದು ಮತ್ತೊಂದು ರೀತಿಯ ಮತಗಳ್ಳತನವಾಗಿದೆ ಎಂದು ಕಿಡಿಕಾರಿದರು.

ಬಿಜೆಪಿ ಮತ್ತು ಅದರ ಅಂಗ ಸಂಸ್ಥೆಗಳು ಪ್ರಜಾಪ್ರಭುತ್ವದ ದಿಕ್ಕೂ ತಪ್ಪಿಸುತ್ತಿವೆ. ಈ ಹಿನ್ನೆಲೆಯಲ್ಲಿ ರಾಜ್ಯದಿಂದ 1 ಕೋಟಿ 12 ಲಕ್ಷ ಸಹಿ ಸಂಗ್ರಹವಾಗಿದ್ದು, ನರಸಿಂಹರಾಜ ಕ್ಷೇತ್ರದಲ್ಲಿ 79 ಸಾವಿರ ಸಹಿ ಸಂಗ್ರಹ ಮಾಡಲಾಗಿದೆ. ಕೇವಲ ಸಹಿ ಸಂಗ್ರಹ ಮಾಡುತ್ತಿಲ್ಲ. ಜೊತೆಗೆ ಮತದಾನದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದರು.

ಮತಗಳ್ಳತನ ಆರೋಪಕ್ಕೆ ವಿಪಕ್ಷಗಳ ಟೀಕೆಗಳಿಗೆ ಪ್ರತಿಕ್ರಿಯಿಸಿದ ಅವರು, ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಲೋಪವಿದ್ದರೆ ಸುಧಾರಣೆ ಇರಬೇಕು. ಎಷ್ಟು ಮತದಾನ ಆಗಿದೆ ಅಷ್ಟು ಮತ ಲೆಕ್ಕ ಇರಬೇಕು. ಯಾವುದೇ ವ್ಯತ್ಯಾಸ ಆಗಬಾರದು. ಆರೋಪ ಮಾಡಲು ಎಲ್ಲರಿಗೂ ಅವಕಾಶ ವಿದೆ. 7.40 ಕೋಟಿ ಮತದಾರರು ಇದ್ದರೂ ಅದಕ್ಕೂ ಹೆಚ್ಚಾಗಿ ಮತ ಬಂದಾಗ ಅನುಮಾನ ಉದ್ಭವವಾಗುತ್ತದೆ. ಮತದಾನದ ಬಗ್ಗೆ ವಿಶೇಷ ಕಾನೂನು ನಿರ್ಮಾಣವಾಗಬೇಕು. ಈಗ ಮೊದಲಿನಂತೆ ಎಲ್ಲರನ್ನು ದಾರಿ ತಪ್ಪಿಸುವ ಕೆಲಸ ಈಗ ಆಗುವುದಿಲ್ಲ. ಮತದಾರ ಬಹಳ ಜಾಗೃತನಾಗಿದ್ದಾನೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಅಯೂಬ್ ಖಾನ್, ಮಾಜಿ ಸಚಿವ ಕೋಟೆ ಶಿವಣ್ಣ, ಸಾಹುಕಾರ್ ಚೆನ್ನಯ್ಯ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಎನ್.ಮಂಜುನಾಥ್, ನಗರ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ರಘು ರಾಜೇ ಅರಸ್, ಸಾಹುಕಾರ್ ಚೆನ್ನಯ್ಯ ಬ್ಲಾಕ್ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಕ್ಷಯ್, ಪಾಲಿಕೆ ಸದಸ್ಯರಾದ ಶ್ರೀಧರ್, ಶೌಕತ್ ಪಾಷ, ರಜಿನಿ ಅಣ್ಣಯ್ಯ, ಸತ್ಯರಾಜ್, ಬಿ.ಎಂ.ನಟರಾಜು, ಲತಾರಂಗನಾಥ್, ಶ್ರೀನಿವಾಸ ಯಾದವ್, ಮಹೇಂದ್ರ ಕಾಗಿನಲೆ, ರಾಕೇಶ್ ಕುಮಾರ, ರಂಗಸ್ವಾಮಿ, ಜಪ್ರುಲಾ, ಅರುಣ್, ಮುಂಚೂಣಿ ಘಟಕದ ಅಧ್ಯಕ್ಷರುಗಳು ಕೈಸರ್ ಅಹಮ್ಮದ್, ರಮೇಶ್, ಸಂತೋಷ ಕುಮಾರ, ಕಾಂಗ್ರೆಸ್ ಮುಖಂಡರಾದ ಮಹಮದ್ ಅದ್ನನ್, ರಾಜೇಶ್ ಗೌಡ ಮತ್ತಿತರರು ಪಾಲ್ಗೊಂಡಿದ್ದರು.

“ವರಿಷ್ಠರ ಮಾತೇ ಅಂತಿಮ

ಮುಖ್ಯಮಂತ್ರಿ ಬದಲಾವಣೆ ಮತ್ತು ಸಂಪುಟ ವಿಸ್ತರಣೆ ಬಗ್ಗೆ ಪ್ರತಿಕ್ರಿಯಿಸಿ, ಕಾಂಗ್ರೆಸ್ ಪಕ್ಷ ಗಟ್ಟಿಯಾಗಿದೆ. ಎಲ್ಲಾ ಶಾಸಕರು ಒಂದಾಗಿದ್ದೇವೆ. ಪಕ್ಷ ರಾಜ್ಯದಲ್ಲಿ ಸರ್ಕಾರ ನಡೆಸುತ್ತಿದೆ. ನಾನು ಯಾರನ್ನು ಭೇಟಿಯಾಗಿಲ್ಲ. ವರಿಷ್ಠರು, ಮುಖ್ಯಮಂತ್ರಿಗಳು, ಕೆಪಿಸಿಸಿ ಅಧ್ಯಕ್ಷರು ಅಧಿಕಾರ ಹಂಚಿ, ಸಂಪುಟ ವಿಸ್ತರಣೆ ಬಗ್ಗೆ ಸ್ಪಷ್ಟ ನಿರ್ದೇಶನ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಮಾತು ಅಂತಿಮ. ಅದನ್ನು ನಾವು ಪಾಲಿಸುತ್ತೇವೆ. ಪಕ್ಷದಲ್ಲಿ ಯಾವುದೇ ವ್ಯಕ್ತಿ ಪೂಜೆ ಇಲ್ಲ. ಈಗಾಗಲೇ ಹೇಳಿರುವಂತೆ ಡಿ.ಕೆ.ಶಿವಕುಮಾರ್ ಅವರು ರಾಜಕೀಯವಾಗಿ ರೂಪುಗೊಳ್ಳಲು ಸಹಾಯ ಮಾಡಿದ್ದಾರೆ. ಅವರ ಋಣವಿದೆ. ಹಾಗೇ ಮತ್ತೊಂದೆಡೆ ಸಿಎಂ ಸಿದ್ದರಾಮಯ್ಯ ನನಗೆ ಸಾಕಷ್ಟು ಸಹಾಯ ಮಾಡಿದ್ದಾರೆ. ಅವರ ಋಣವೂ ಇದೆ. ಅವಕಾಶ ಸಿಕ್ಕಾಗ ಯಾರು ಏನು ಬೇಕಾದರೂ ಆಗಬಹುದು. ಸಂಪುಟದ ನಿಯಮದ ಪ್ರಕಾರ 34 ಮಂದಿಗೆ ಸಚಿವ ಸ್ಥಾನ ನೀಡಲಾಗಿದೆ. 2.5 ವರ್ಷ ಅವಧಿ ಪೂರ್ಣಗೊಳಿಸಿದ್ದಾರೆ. ಪಕ್ಷದ ಹಿರಿಯರಿಗೆ ಅವಕಾಶ ನೀಡಬೇಕು. ಎಲ್ಲರಿಗೂ ಆಸೆ ಇದೆ. **–ತನ್ವೀರ್ ಸೇಠ್, ಶಾಸಕ**



ಶುಭಾಶಯ...

ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಅವರಿಗೆ ಜನಪರ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಡಾ.ಎಂ. ಮಹೇಶ ಚಿಕ್ಕಲ್ಲೂರು, ಕಾರ್ಯದರ್ಶಿ ಡಾ.ವಿ.ಯೋಗಿಂದ್ರ, ಮೈಸೂರು ಜಿಲ್ಲಾಧ್ಯಕ್ಷ ಡಾ.ಬಸವರಾಜ್, ಕೆಇಎಸ್ ತಮ್ಮಯ್ಯ ಮತ್ತು ಇತರರು ಹುಟ್ಟು ಹಬ್ಬದ ಶುಭಾಶಯ ಕೋರಿದರು.

ಬ್ರಾಹ್ಮಣ ಮಹಾಸಭಾಗೆ ನೇಮಕ



ಮೈಸೂರು, ನ.22–ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯಾಧ್ಯಕ್ಷರಾದ ಎಸ್.ರಘುನಾಥ್ ಅವರು ಮೈಸೂರಿನ ಸಮಾಜ ಸೇವಕ ಹಾಗೂ ಅಂಕಣಕಾರರಾದ ನಂ.ಶ್ರೀಕಂಠಕುಮಾರ್ ಅವರನ್ನು ಮಹಾಸಭಾದ ರಾಜ್ಯ ಸಂಘಟನಾ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಚೆಲುವಾಂಬ ಪಾರ್ಕ್ ವಾಯುವಿಹಾರಿಗಳ ಕ್ಷೇಮಾಭಿವೃದ್ಧಿ ಸಂಘ:** ಕನ್ನಡ ರಾಜ್ಯೋತ್ಸವದ ಅಂಗವಾಗಿ ಧ್ವಜಾರೋಹಣ, ಬಹುಮಾನ ವಿತರಣೆ, ಸಾಂಸ್ಕೃತಿಕ ಕಾರ್ಯಕ್ರಮ, ಬೆಳಗ್ಗೆ 8.30ಕ್ಕೆ ಧ್ವಜಾರೋಹಣ: ಆರಕ್ಷಕ ನಿರೀಕ್ಷಕ ವಿವೇಕಾನಂದ, ಅಧ್ಯಕ್ಷತೆ: ಸದ್ವಿದ್ಯಾ ವಿದ್ಯಾಸಂಸ್ಥೆ ಅಧ್ಯಕ್ಷ ಪ್ರೊ.ಎಂ.ಎಸ್.ಕೆ.ನರಹರಿಬಾಬು, ಸಂಜೆ 7ಕ್ಕೆ ಸನ್ಮಾನ ಸಮಾರಂಭ, ಸನ್ಮಾನಿತರು: ಶಾಸಕ ಕೆ.ಹರೀಶ್‌ಗೌಡ, ಡಾ.ರಮೇಶ್, ಶ್ರೀಮತಿ ಭಾಗ್ಯ ಮಾದೇಶ್, ಎಸ್.ಜಯಪ್ರಕಾಶ್, ಎಸ್.ಬಿ.ಎಂ.ಮಂಜು, ಡಾ.ಸುಶ್ರುತ್ ಗೌಡ, ಶ್ರೀಮತಿ ನಂದಿನಿ, ಸ್ಥಳ: ಚೆಲುವಾಂಬ ಪಾರ್ಕ್ ಆವರಣ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :** ಬ್ರೈಡಲ್ ಜ್ಯೂವೆಲ್ಲರಿ ಶೋ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ಬಿ.ಎನ್. ರಸ್ತೆ, ಬೆಳಗ್ಗೆ 10 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

■ **ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ :** ವಸುಂಧರೋತ್ಸವ, ಸಂಜೆ 6 ರಿಂದ ವಿದುಷಿ ವಾಣಿ ರಮೇಶ್ ಅವರ ಶಿಷ್ಯೆ ವಿದುಷಿ ಪ್ರೀತಿ ರಾಮಸ್ವಾಮಿ (ಯುಎಸ್‌ಎ) ಅವರಿಂದ ಭರತನಾಟ್ಯ, ಸಂಜೆ 6.45ರಿಂದ ಜರ್ಮನ್ ಜಾನಪದ ಕಥೆ ಆಧಾರಿತ, ವಿಪಿಎಸಿ ವಿದ್ಯಾರ್ಥಿಗಳಿಂದ ನೃತ್ಯ ರೂಪಕ 'ವಿಧಿ' (Destiny), ನೃತ್ಯ ನಿರ್ದೇಶನ : ಡಾ. ವಸುಂಧರಾ ದೊರೆಸ್ವಾಮಿ, ಕಥಾ ನಿರೂಪಣೆ : ಶ್ರೀಮತಿ ಶುಭದ ಚೇತನ್, ಸಂಗೀತ: ಪ್ರವೀಣ್ ಡಿ.ರಾವ್, ಕಲಾವಿದರು : ಶ್ರೀಮತಿ ವಸುಂಧರ ದೊರೆಸ್ವಾಮಿ, ವಿದ್ವಾನ್ ಸಂದೇಶ್ ಭಾರ್ಗವ್, ಸುಜನ್ ಶಾನ್‌ಬೋಗ್, ನುಗೆನ್ ಮಾನ್‌ಥುಂಗ್, ವಿದುಷಿ ಡಾ.ಪಿ.ಕೆ.ನಾಗಲಕ್ಷ್ಮಿ, ಶ್ರೀಮತಿ ಶಶಿ ಆರ್., ವಿದುಷಿ ಮೈತ್ರೇಯಿ ಜಿ., ವಿದುಷಿ ವಿಭಾ ಡಿ., ಡಾ. ಪದ್ಮಶ್ರೀ ಕೆ., ವಿದುಷಿ ಸೌಂದರ್ಯ ಎಸ್.ಪಿ., ವಿದುಷಿ ಪ್ರಕೃತಿ ಮಂಜುನಾಥ್, ವಿದುಷಿ ನಮ್ರತಾ ಕೆ.ಜೋಯಿಸ್, ವಿದುಷಿ ಸನ್ನಿಧಿ, ಕು. ರಕ್ಷಿತಾ ಎಂ. ಭಾರದ್ವಾಜ್, ಕು. ಪ್ರಜ್ಞಾ ಎಸ್.ಆರ್., ಕು. ಚೈತನ್ಯ ಷಡಕ್ಷರಿ, ಕು. ಸಾನ್ವಿ ಯು., ಶ್ರೀಮತಿ ಅಶ್ವಿನಿ ಗೌರೀಶ್, ಕು. ತನಿಷ್ಕಾ ಜಿ., ಕು. ಜನ್ಯಾ ಕುಶಾಲ್, ಕು. ಪ್ರಾಯುಷಿ, ಗೌರವ ಸಮರ್ಪಣೆ : ಇತಿಹಾಸಕಾರ ಡಾ. ವಸುಂಧರಾ ಫಿಲಿಯೋಜಿತ್, ಸ್ಥಳ: ವಸುಂಧರ ಭವನ, ಸರಸ್ವತಿಪುರಂ.

■ **ಶ್ರೀ ವಾಸಿ ಪ್ರಕಾಶನ, ಮೈಸೂರು, ಮಿತ್ರಕೂಟ, ತಿಪ್ಪೂರು :** ಖ್ಯಾತ ಕವಿ ಶ್ರೀ ಕೃಷ್ಣ ತಿಪ್ಪೂರುರವರ ಅಮೃತ ರಾಮಾಯಣ ಎರಡು ಸಂಪುಟಗಳ ಮಹಾಕಾವ್ಯ ಬಿಡುಗಡೆ ಸಮಾರಂಭ, ಸಾನ್ನಿಧ್ಯ: ಬೇಬಿ ಮಠದ ಶ್ರೀನೇತ್ರ ಮಹಂತಯೋಗಿ ಸ್ವಾಮೀಜಿ, ಅಧ್ಯಕ್ಷತೆ : ಶಾಸಕ ಡಿ.ರವಿಶಂಕರ್, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ಆಶಯ ನುಡಿ: ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್, ಕೃತಿ ಬಿಡುಗಡೆ : ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಡಾ. ಬಿ.ವಿ. ವಸಂತಕುಮಾರ್, ಕೃತಿ ಕುರಿತು : ಪ್ರೊ. ಕವಿತಾ ರೈ, ಮುಖ್ಯ ಅತಿಥಿಗಳು : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಡಾ. ಬಿ.ಸಿ. ಚಿಲ್ಕರಾಗಿ, ಶ್ರೀ ವಾಸವಿ ಯುವಜನ ಸಂಘದ ಅಧ್ಯಕ್ಷ ಬಿ. ನಾಗೇಶ್, ಉಪಸ್ಥಿತರು : ಕೃತಿಯ ಕರ್ತೃ ಕೃಷ್ಣ ತಿಪ್ಪೂರು, ಶ್ರೀ ವಾಸವಿ ಪ್ರಕಾಶನದ ಎಂ.ಆರ್. ಮಂಜುನಾಥ ಗುಪ್ತಾ, ಮಿತ್ರಕೂಟ ತಿಪ್ಪೂರು ದೊರೆಸ್ವಾಮಿ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಹುಣಸೂರು ರಸ್ತೆ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಶತಮಾನೋತ್ಸವ, ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸುವರ್ಣ ಮಹೋತ್ಸವ, ಬೆಳಗ್ಗೆ 6.15 ರಿಂದ ಅಧಿವೇಶನ–1 : ಸ್ವಾಮಿ ರಘುರಾಮಾನಂದಜಿ ಮತ್ತು ಸ್ವಾಮಿ ಸರ್ವದರ್ಶನಾನಂದಜಿ ಅವರಿಂದ ಉಷಾಕೀರ್ತನೆ, ಸ್ಥಳ: ಶ್ರೀ ರಾಮಕೃಷ್ಣ ಪರಮಹಂಸ ವೃತ್ತ, ರಾಮಕೃಷ್ಣನಗರ, ಸ್ವಾಮೀಜಿಗಳು ಮತ್ತು ಭಕ್ತರ ಆಗಮನ, ವೇದಘೋಷ, ಶ್ರೀ ರಾಮಕೃಷ್ಣ ಮಂಗಳಾಶಾಸನ, ಪ್ರಸ್ತಾವನೆ, ಭಜನೆ, ಶ್ರೀ ರಾಮಕೃಷ್ಣರಿಗೆ ಆರತಿ, ಧ್ಯಾನ, ಸ್ವಾಮೀಜಿಗಳಿಂದ ಭಕ್ತಿಗಾಯನ ದೊಂದಿಗೆ ಶ್ರೀ ರಾಮಕೃಷ್ಣರ ಸುತ್ತ ಪ್ರದಕ್ಷಿಣಾ ವಂದನೆ, ಜೈಕಾರ, ಪ್ರಸಾದ ವಿತರಣೆ; ಬೆಳಗ್ಗೆ 9ರಿಂದ ಅಧಿವೇಶನ–2, ಸಂತ ಸಮಾಗಮ, ಸಾನ್ನಿಧ್ಯ : ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್, ಬೇಲೂರು ಮಠದ ಪರಮಾಧ್ಯಕ್ಷ ಸ್ವಾಮಿ ಗೌತಮಾನಂದಜಿ ಮಹಾರಾಜ್, ಶ್ರೀ ಉದಾಸೀನ್ ಕಾರ್ಷ್ಣಿ ಆಶ್ರಮ, ರಮಣ ರೇತಿ, ಬೃಂದಾವನ, ಮಥುರಾ ಪೀಠಾಧೀಶ ಸ್ವಾಮಿ ಗುರುಶರಣಾನಂದಜಿ ಮಹಾರಾಜ್, ಬೆಳಗ್ಗೆ 9ರಿಂದ ವಿಶೇಷ ಉಪನ್ಯಾಸಗಳು, ವಿಷಯ : ಮಾನವನ ದೈವೀಕರಣವೇ ಧರ್ಮದ ಉದ್ದೇಶ ಮತ್ತು ಶಕ್ತಿ, ಅವಧೂತ ದತ್ತ ಪೀಠ ಶ್ರೀ ದತ್ತವಿಜಯಾನಂದ ತೀರ್ಥ, ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ, ರಾಮಕೃಷ್ಣ ಮಿಷನ್, ಅರುಣಾಚಲ ಪ್ರದೇಶದ ಕಾರ್ಯದರ್ಶಿ ಸ್ವಾಮಿ ಅಚ್ಯುತೇಶಾನಂದಜಿ, ಬೆಳಗ್ಗೆ 11 ರಿಂದ ಉಪನ್ಯಾಸ, ವಿಷಯ: ಸನಾತನ ಧರ್ಮ ಆಧ್ಯಾತ್ಮಿಕ ಶಕ್ತಿಯ ಆವಿರ್ಭಾವವಾಗಿ ಶ್ರೀರಾಮಕೃಷ್ಣರು, ಶ್ರೀ ಆದಿಶಂಕರಾಚಾರ್ಯ ಶಾರದಾ ಲಕ್ಷ್ಮೀನರಸಿಂಹ ಪೀಠ, ಹರಿಹರಪುರದ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ರಾಮಕೃಷ್ಣ–ವಿವೇಕಾನಂದ ಆಶ್ರಮ, ತುಮಕೂರು ಅಧ್ಯಕ್ಷ ಸ್ವಾಮಿ ವೀರೇಶಾನಂದ ಸರಸ್ವತಿ, ರಾಮಕೃಷ್ಣ ಮಿಷನ್, ನವದೆಹಲಿ ಕಾರ್ಯದರ್ಶಿ ಸ್ವಾಮಿ ಸರ್ವಲೋಕಾನಂದಜಿ, ರಾಮಕೃಷ್ಣ ಮಠ, ಪುಣೆ ಅಧ್ಯಕ್ಷ ಸ್ವಾಮಿ ಶ್ರೀಕಾಂತಾನಂದಜಿ; ಮಧ್ಯಾಹ್ನ 3 ರಿಂದ ಅಧಿವೇಶನ–3, ಸಾಹಿತ್ಯ ಸೇವೆ, ಶ್ರೀ ರಾಮಕೃಷ್ಣ ಆಶ್ರಮದ ಕನ್ನಡ ಪ್ರಕಟಣೆಗಳು ಮತ್ತು ವಿವೇಕಪ್ರಭ ಮಾಸ ಪತ್ರಿಕೆಯ ಬೆಳ್ಳಿ ಹಬ್ಬ, ಸಾನ್ನಿಧ್ಯ: ರಾಮಕೃಷ್ಣ ಮಠ, ಬಸವನಗುಡಿ ಅಧ್ಯಕ್ಷ ಸ್ವಾಮಿ ನಿತ್ಯಸ್ಥಾನಂದಜಿ, ಮುಖ್ಯ ಅತಿಥಿಗಳು: ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, ಅತಿಥಿಗಳು: ಸ್ವಾಮಿ ಆತ್ಮಜ್ಞಾನಂದಜಿ, ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್, ಡಾ. ಲೀಲಾಪ್ರಕಾಶ್, ಡಾ. ಚಿದಾನಂದಗೌಡ, ನಾಡೋಜ ಹಂಪ ನಾಗರಾಜಯ್ಯ, ಗೌರವಾರ್ಪಣೆ: ಸಾಹಿತಿ ಹೆಚ್. ಲಕ್ಷ್ಮೀನರಸಿಂಹ ಶಾಸ್ತ್ರಿ, ಲೇಖಕಿ ಶ್ರೀಮತಿ ಸಿ.ಎಸ್.ಮಂಗಳಮ್ಮ, ಡಾ. ಕೆ.ಎಲ್. ಪ್ರಸನ್ನಾಕ್ಷಿ, ಡಾ. ಕೆ.ಅನಂತರಾಮು, ಡಾ. ಹೆಚ್.ಎನ್.ಮುರಳೀಧರ, ಪಾರ್ಥಸಾರಥಿ, ವಿಶೇಷ ಆಹ್ವಾನಿತರು: ಶ್ರೀಮತಿ ತಾರಿಣಿ ಚಿದಾನಂದಗೌಡ, ಮಡ್ಡೀಕೆರೆ ಗೋಪಾಲ್; ಸಂಜೆ 6ರಿಂದ ಅಧಿವೇಶನ–4, ಶ್ರೀ ರಾಮಕೃಷ್ಣ, ಶ್ರೀ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರನ್ನು ಕುರಿತು ವಿಚಾರ ಸಂಕಿರಣ, ವಿಷಯ : ಶ್ರೀ ರಾಮಕೃಷ್ಣ ಮಹಿಮಾ, ರಾಮಕೃಷ್ಣ ಮಠ, ರಾಜ್‌ಕೋಟ್ ಅಧ್ಯಕ್ಷ ಸ್ವಾಮಿ ನಿಖಿಲೇಶ್ವರಾನಂದಜಿ, ರಾಮಕೃಷ್ಣ ಮಿಷನ್, ದಾವಣಗೆರೆ ಕಾರ್ಯದರ್ಶಿ ಸ್ವಾಮಿ ತ್ಯಾಗೀಶ್ವರನಾನಂದಜಿ, ರಾಮಕೃಷ್ಣ–ವಿವೇಕಾನಂದ ಆಶ್ರಮ, ಗದಗದ ಅಧ್ಯಕ್ಷ ಸ್ವಾಮಿ ನಿರ್ಭಯಾನಂದ ಸರಸ್ವತಿ; ಸಂಜೆ 7ರಿಂದ ವಿಷಯ : ಶಾರದಾದೇವಿ ಮಹಿಮಾ– ಶಾರದಾ ಮಠ ಮತ್ತು ರಾಮಕೃಷ್ಣ ಶಾರದಾ ಮಿಷನ್, ದಕ್ಷಿಣೇಶ್ವರ ಪ್ರಧಾನ ಕಾರ್ಯದರ್ಶಿ ಅತಂದ್ರಪ್ರಾಣಾ ಮಾತಾಜಿ, ಶಾರದಾ ಮಠ, ಗುಂಟೂರು ಅಧ್ಯಕ್ಷ ಭವಾನಿಪ್ರಾಣಾ ಮಾತಾಜಿ, ಭವತಾರಿಣಿ ಆಶ್ರಮ, ಬೆಂಗಳೂರು ಅಧ್ಯಕ್ಷ ಮಾತಾ ವಿವೇಕಮಯೀ; ಸಂಜೆ 8ರಿಂದ ವಿಷಯ: ಸ್ವಾಮಿ ವಿವೇಕಾನಂದ ಮಹಿಮಾ –ಬೇಲೂರು ಮಠದ ಮುಖ್ಯಸ್ಥ ಸ್ವಾಮಿ ಆತ್ಮಪ್ರಿಯಾನಂದಜಿ, ರಾಮಕೃಷ್ಣ–ವಿವೇಕಾನಂದ ಆಶ್ರಮ, ರಾಣೆಬೆನ್ನೂರು ಅಧ್ಯಕ್ಷ ಸ್ವಾಮಿ ಪ್ರಕಾಶಾನಂದಜಿ, ಅಂಕಣಕಾರ ಚಕ್ರವರ್ತಿ ಸೂಲಿಬೆಲೆ. ಸ್ಥಳ: ರಾಮಕೃಷ್ಣ ಆಶ್ರಮ, ಯಾದವಗಿರಿ.



ಇಂದಿನ ಪಂಚಾಂಗ

23.11.2025 ಭಾನುವಾರ, ಮಳೆ ನಕ್ಷತ್ರ: ಅನೂರಾಧ, 20.11.2025 ರಿಂದ 02.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಮೂಲ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ಕಲಾವಿದರಿಂದ ವಾಟ್ ಇಫ್! ನಾಟಕ ಪ್ರದರ್ಶನ, ನಿರ್ದೇಶನ : ವಿ. ಶೃತಿ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ಕರ್ನಾಟಕ ರಾಜ್ಯ ನಾಯಕ ಜನಾಂಗದ ಹಿತರಕ್ಷಣಾ ವೇದಿಕೆ:** ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ, ಕನ್ನಡ ರಾಜ್ಯೋತ್ಸವ, ವಾಲ್ಮೀಕಿ ಸೇವಾರತ್ನ ಪ್ರಶಸ್ತಿ ಕಾರ್ಯಕ್ರಮ, ಉದ್ಘಾಟನೆ: ಶಾಸಕ ಅನಿಲ್ ಚಿಕ್ಕಮಾದು, ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಶಾಸಕ ಜಿ.ಟಿ.ದೇವೇಗೌಡ, ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಶಾಸಕ ಟಿ.ಎಸ್.ಶ್ರೀವತ್ಸ, ಅಧ್ಯಕ್ಷತೆ : ವೇದಿಕೆ ಗೌರವಾಧ್ಯಕ್ಷ ದ್ಯಾವಪ್ಪನಾಯಕ, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಶತಾವಧಾನಿ ಡಾ.ಆರ್.ಗಣೇಶ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನಿಮಾ ಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಡಾ.ಪಿ.ಎಸ್.ಮುರಳೀಧರ್, ವ್ಯಾಖ್ಯಾನ: ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಮಧುಲಿಕ ಶ್ರೀನಿವಾಸ್, 8.30 ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ, ಪಿ.ಸಿ.ಓ.ಎಸ್ ಸಮಸ್ಯೆ ಲಕ್ಷಣಗಳು ಮತ್ತು ಪರಿಹಾರ ಕುರಿತು ತಿಳಿಸಿಕೊಡುತ್ತಾರೆ ಮೈಸೂರಿನ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಸೀನಿಯರ್ ಕನ್ಸಲ್ಟೆಂಟ್ ಗೈನಕಾಲಜಿಸ್ಟ್ ಡಾ.ಸವಿತಾ ರಾಥೋಡ್ ನಾಯಕ್. ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 10.00 ಕೇಳಿ ಗಿಳಿಗಳೇ–ಬೋಗಾದಿಯ ಅಮೃತ ವಿದ್ಯಾಲಯಂ ಶಾಲೆಯ ಪುಟ್ಟ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 KRISH TRISH and Balty boy ನಾವು ಭಾರತೀಯರು–ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ, ಚೈತನ್ಯ ಚಿಲುಮೆ ಮಾಲಿಕೆಯಲ್ಲಿ ಉದಯೋನ್ಮುಖ ವೈಯೋಲಿನ್ ವಾದಕಿ ಮಾಳವಿ ಮಂಜುನಾಥ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬಿ.ದಿಗ್ವಿಜಯ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ: ಚಾಮರಾಜನಗರ ಜಿಲ್ಲೆ ಜ್ಯೋತಿಗೌಡನಪುರದ ರಾಜಮ್ಮ ಮತ್ತು ಸಂಗಡಿಗರು, ಮುಡುಕುತೊರೆ ಮಲ್ಲಯ್ಯನ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಕ್ವಾಮಿ ಏಕತಾ ಸಪ್ತಾಹ–ಸಾಂಸ್ಕೃತಿಕ ಏಕತಾ ದಿನಾಚರಣೆ ಕುರಿತು ಕಾರ್ಯಕ್ರಮ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ನಕ್ಷತ್ರಲೋಕ–ಖ್ಯಾತ ನಿರ್ದೇಶಕ ದಿನೇಶ್ ಬಾಬು ಸಂದರ್ಶನ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರ ಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ, ಆರ್.ಕೆ.ಪದ್ಮನಾಭ–ವೀಣಾವಾದನ, 6.51 ಕೃಷಿರಂಗ : ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ, ವಾರದ ಕೃಷಿರಂಗ–ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್.ಲೋಕೇಶ್ವರಿ, 7.45 ಮಣಿಪಾಲದ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್‌ನ 33ನೇ ಘಟಿಕೋತ್ಸವದ ಬಾನುಲಿ ವರದಿ. ಪ್ರಾಯೋಜಕರು–ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್, ಮಣಿಪಾಲ, 8.00–ಪ್ರಸಾರ ಭಾರತಿ ಸಂಸ್ಥಾಪನಾ ದಿನದ ಸಂದರ್ಭದಲ್ಲಿ ಕನ್ನಡ ಉಪನ್ಯಾಸಕರಾದ ಪ್ರತಿಮಾ ಹರೀಶ್ ರೈ ಅವರಿಂದ ಭಾಷಣ, 8.15 ಫಸ್ಟ್ ಫಿಲ್ಮ್, ಪ್ರಸ್ತುತಿ–ಶ್ರೀವಮಾನ್ ಎಸ್., 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಬಿ. ಎಸ್. ಸ್ವಾಮಿಗೌಡ, 9.30 ರಾಷ್ಟ್ರೀಯ ವಿಜ್ಞಾನ ಸಂಚಿಕೆ Radio Scope, 10.00 ರವಿವಾರದ ಅಖಿಲ ಭಾರತದ ಸಂಗೀತ ಸಭಾ – ರವಿವಾರದ ಅಖಿಲ ಭಾರತದ ಸಂಗೀತ ಸಭಾ ರಾಹುಲ್ ಚಟರ್ಜಿ – ಸಿತಾರ್ ವಾದನ

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ಬೆಳಗ್ಗೆ 9.30 ರಿಂದ ಮಕ್ಕಳ ಮತ್ತು ಯುವ ದಿನಾಚರಣೆ, ಉದ್ಘಾಟನೆ: ರೋಟರಿ ಕ್ಲಬ್ ಆಫ್ ಮೈಸೂರು (ಪಶ್ಚಿಮ) ಅಧ್ಯಕ್ಷ ಎಂ.ದೇವರಾಜ್, ಅಧ್ಯಕ್ಷತೆ: ಶ್ರೀ ತ್ಯಾಗರಾಜ ಸಂಗೀತ ಸಭಾ ಅಧ್ಯಕ್ಷ ಡಾ.ಪಿ.ಮೋಹನದಾಸ್ ಭಟ್, ಬೆಳಗ್ಗೆ 10 ರಿಂದ ವಿವಿಧ ಸಂಗೀತ ಗುರುಗಳ ಶಿಷ್ಯರಿಂದ ಕರ್ನಾಟಕ ಸಂಗೀತ ಗಾಯನ–ವಾದನಗಳ ಪ್ರಸ್ತುತಿ ಪ್ರದರ್ಶನ, ಸ್ಥಳ: ರೋಟರಿ ಸಭಾಂಗಣ, ಸರಸ್ವತಿಪುರಂ.

■ **ವ್ಯವಸ್ಥಾಪಕರು :** ಅವಿನಾಶ್ ಟಿಜಿಎಸ್ ಅವರ ಬನವಾಸಿ ತೋಟದಲ್ಲಿ ಬೆಳಕಿನ ಬೇಸಾಯ, ಸ್ಥಳ: ಬನವಾಸಿ ತೋಟ, ಬೋಗಾದಿ–ಗದ್ದಿಗೆ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಕರ್ನಾಟಕ ರಾಜ್ಯ ಒಕ್ಕಲಿಗ ಮಹಿಳಾ ಸಂಘ, ಮೈಸೂರು ಜಿಲ್ಲಾ ಘಟಕ:** ಪದಗ್ರಹಣ ಕಾರ್ಯಕ್ರಮ, ಸಾನ್ನಿಧ್ಯ: ವಿಶ್ವ ಒಕ್ಕಲಿಗರ ಸಂಸ್ಥಾನ ಮಠದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಮಾಹಿತಿ ಹಕ್ಕು ಆಯೋಗದ ಆಯುಕ್ತೆ ಡಾ.ಮಮತಾ, ಲೋಗೋ ಬಿಡುಗಡೆ: ಡಾ.ಎಚ್.ಎಂ.ವೆಂಕಟಪ್ಪ, ಸ್ಥಳ: ವಿವೇಕಾನಂದ ಸಭಾಂಗಣ, ಮಹಾಜನ ಕಾಲೇಜು, ಬೆಳಗ್ಗೆ 11.30ಕ್ಕೆ.

■ **ಮೈಸೂರು ಸಾಹಿತ್ಯ ದಾಸೋಹ :** ದಶಮಾನೋತ್ಸವ ಸಂಭ್ರಮ, ಉದ್ಘಾಟನೆ : ಹಿರಿಯ ವಕೀಲೆ ಶ್ರೀಮತಿ ಮಂಜುಳಾ ಮಾನಸ, ಅಧ್ಯಕ್ಷತೆ : ಮೈಸೂರು ಸಾಹಿತ್ಯ ದಾಸೋಹ ಸಂಸ್ಥಾಪಕ ಎಂ.ಆರ್. ಆನಂದ್, ಉಪಸ್ಥಿತರು : ಥಟ್ ಅಂತ ಹೇಳಿ ಖ್ಯಾತಿಯ ಡಾ. ನಾ. ಸೋಮೇಶ್ವರ, ಬೆಂ. ರವೀಂದ್ರ, ಶ್ರೀಮತಿ ಪದ್ಮಾ ಆನಂದ್, ಸ್ಥಳ: ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಭವನ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ, ಚೈಲ್ಡ್ ಫಂಡ್ ಇಂಟರ್‌ನ್ಯಾಷನಲ್ :** ಮಕ್ಕಳ ದಿನಾಚರಣೆ ಅಂಗವಾಗಿ ಚಿಣ್ಣರ ಚಿಲಿಪಿಲಿ ಕಾರ್ಯಕ್ರಮ, ಉದ್ಘಾಟನೆ : ರಂಗಾಯಣ ಮಾಜಿ ನಿರ್ದೇಶಕ ಜನಾರ್ಧನ್, ಅಧ್ಯಕ್ಷತೆ : ರಂಗಕರ್ಮಿ ಶ್ರೀಮತಿ ಕೆ.ಆರ್. ಸುಮತಿ, ಮುಖ್ಯ ಅತಿಥಿಗಳು : ರಂಗಕರ್ಮಿ ಶ್ರೀಮತಿ ರಾಮೇಶ್ವರಿ ವರ್ಮ, ಸ್ಥಳ: ವನರಂಗ ಬಯಲು ರಂಗಮಂದಿರ, ಬೆಳಗ್ಗೆ 11ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಉಷಾ ಪ್ರಕಾಶನ :** ಪ್ರೊ.ಸಿ.ಪಿ. ಸಿದ್ದಾಶ್ರಮ ಅವರ ನೆಲದ ನಕ್ಷತ್ರಗಳು, ಅರಿವಿನ ದೀವಿಗೆ ಪುಸ್ತಕ ಬಿಡುಗಡೆ ಸಮಾರಂಭ, ಕೃತಿಗಳ ಬಿಡುಗಡೆ : ವಿದ್ವಾಂಸರಾದ ಪ್ರೊ. ರಾಮೇಗೌಡ, ಅಧ್ಯಕ್ಷತೆ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿಗಳ ಕುರಿತು: ಸಾಹಿತಿ ಪ್ರೊ.ಕೆ.ತಿಮ್ಮಯ್ಯ, ಉಪನ್ಯಾಸಕಿ ಡಾ. ಎಚ್.ಎಲ್. ಶೈಲಾ, ಪ್ರಾಸ್ತಾವಿಕ ನುಡಿ: ಡಾ.ಆರ್.ಗುರುಸ್ವಾಮಿ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 4ಕ್ಕೆ.

■ **ವಿಜಯನಗರ 3ನೇ ಹಂತ, ಇ ಮತ್ತು ಡಿ ಬ್ಲಾಕ್, ಉದ್ಯಾನವನದ ವಾಯುವಿಹಾರಿಗಳ ಸಂಘ:** ಕನ್ನಡ ರಾಜ್ಯೋತ್ಸವ, ಮುಖ್ಯ ಅತಿಥಿಗಳು: ಶಾಸಕ ಜಿ.ಟಿ.ದೇವೇಗೌಡ, ಉದ್ಘಾಟನೆ: ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಚಂದ್ರಶೇಖರ್, ಉಪಸ್ಥಿತರು :ಮರಿಯಪ್ಪ, ಹೆಚ್.ಈ. ಗುರುಸ್ವಾಮಿ, ಕೃಷ್ಣಯ್ಯ, ಸ್ಥಳ: ವಿಜಯನಗರ 3ನೇ ಹಂತದ ಉದ್ಯಾನವನ, ಸಂಜೆ 5ಕ್ಕೆ.

■ **ರುದ್ರ ನೃತ್ಯಯೋಗಶಾಲಾ:** ಒಡಿಸ್ಸಿ ಉತ್ಸವ, ಒಡಿಸ್ಸಿ ಶ್ರೇಷ್ಠ ಪರಂಪರೆಯ ಅನಾವರಣ, ಮುಖ್ಯ ಅತಿಥಿಗಳು: ಶ್ರೀ ಕೃಷ್ಣಗಾನ ಸಭಾದ ಅಧ್ಯಕ್ಷ ಶ್ರೀಧರರಾಜ್ ಅರಸ್, ಮೈಸೂರಿನ ಪುರಿ ಜಗನ್ನಾಥ ಸಾಂಸ್ಕೃತಿಕ ಮತ್ತು ಕಲ್ಯಾಣ ಸಮಿತಿ ಅಧ್ಯಕ್ಷ ಘನಶ್ಯಾಮ್, ಮೈಸೂರು ಯೋಗ ಒಕ್ಕೂಟದ ಕಾರ್ಯಾಧ್ಯಕ್ಷ ಡಾ. ಬಿ.ಪಿ. ಮೂರ್ತಿ, ಆರಿಯಾಧನಾ ಫೌಂಡೇಷನ್ ನಿರ್ದೇಶಕಿ ಕೆ. ಜ್ಯೋತಿರ್ಮಯಿ ಪಟ್ನಾಯಕ್, ಕಲಾವಿದ ಬದರಿ ದಿವ್ಯಭೂಷಣ, ಸ್ಥಳ: ಜಗನ್ನಾಥ್ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ, ಸಂಜೆ 5.30ಕ್ಕೆ

■ **ಗಾನ ಲಹರಿ:** ಡಾ.ರಾಜಕುಮಾರ್ ಮತ್ತು ಅವರ ಪುತ್ರರು ಅಭಿನಯಿಸಿದ ಸಿನಿಮಾಗಳ ಅಚಲ ಹಿಟ್ ಹಾಡುಗಳಿಂದ ಕೂಡಿದ ವಿಶೇಷ ಸಂಗೀತ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಸಂಜೆ 5.30ಕ್ಕೆ

■ **ಆಕಾಶವಾಣಿ, ಪ್ರಸಾರ ಭಾರತಿ ಮತ್ತು ಸಂಸ್ಕೃತಿ ಸಚಿವಾಲಯ, ಸಂಗೀತ ವಿಶ್ವವಿದ್ಯಾನಿಲಯ:** ಆಕಾಶವಾಣಿ ಸಂಗೀತ ಸಮ್ಮೇಳನ, ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ ಅವರಿಂದ ಶಾಸ್ತ್ರೀಯ ಸಂಗೀತ, ಸಮೀರ್ ರಾವ್–ಕೊಳಲು, ಜ್ಯೋತ್ಸ್ನಾ ಶ್ರೀಕಾಂತ್–ಪಿಟೀಲು, ಸಂಗೀತ್ ಥಾಮಸ್–ಕೀಬೋರ್ಡ್, ಆದರ್ಶ ಶೆಣೈ ಕೆ.–ತಬಲಾ, ಅನುಷ್ ಶೆಟ್ಟಿ–ತಾಳವಾದ್ಯ, ಡಾ.ಎಸ್.ವಿ.ಸಹನಾ ಅವರಿಂದ ವೀಣಾವಾದನ, ಅರ್ಜುನ್ ಕುಮಾರ್–ಮೃದಂಗ, ರಾಮಾನುಜನ್–ಘಟಂ, ಸ್ಥಳ: ಗಾನಭಾರತಿ ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್:** ಕವಿತಾ ಕಲಾ ತಂಡದಿಂದ ಕೌದಿ ನಾಟಕ ನಾಟಕ ಪ್ರದರ್ಶನ, ನಿರ್ದೇಶನ: ಜಗದೀಶ್ ಆರ್.ಜಾಣಿ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ, ಸಂಜೆ 7ಕ್ಕೆ.

ಕೆ.ಆರ್. ನಗರದಲ್ಲಿಂದು

■ **ಪತಂಜಲಿ ಯೋಗಾಶ್ರಮ ಟ್ರಸ್ಟ್:** ಸರಳ ಸಮೃದ್ಧಿ ಯೋಗ, ಉದ್ಘಾಟನೆ: ಶಾಸಕ ಡಿ.ರವಿಶಂಕರ್, ಸಾನ್ನಿಧ್ಯ: ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಪ್ರಕಾಶ್ ಯೋಗಿ, ಪ್ರಾಸ್ತಾವಿಕ ನುಡಿ: ಪ್ರಸಾದ್ ಗುರೂಜಿ, ಅಧ್ಯಕ್ಷತೆ: ಟ್ರಸ್ಟ್ ಅಧ್ಯಕ್ಷ ವಿಶ್ವನಾಥಶೆಟ್ಟಿ, ಸ್ಥಳ: ವಾಸವಿ ಮಹಲ್, ಕೆ.ಆರ್.ನಗರ, ಸಂಜೆ 5ಕ್ಕೆ.

ಯಾವುದೇ ಕಾರಣಕ್ಕೂ ನಾವು ಎನ್‌ಡಿಎ ಮೈತ್ರಿ ತೊರೆಯಲ್ಲ

• ಮಾಜಿ ಪ್ರಧಾನಿ, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ. ದೇವೇಗೌಡರ ಸ್ಪಷ್ಟೋಕ್ತಿ • ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ವಿಶ್ವಾಸ ಇಟ್ಟಿದ್ದೇವೆ • ಸಿಎಂ ಸಿದ್ದರಾಮಯ್ಯ ವಿರುದ್ಧ ಪರೋಕ್ಷ ವಾಗ್ದಾಳಿ; ಈ ವ್ಯಕ್ತಿಯನ್ನು ಹಣಕಾಸು ಮಂತ್ರಿ ಮಾಡಿದ್ದು ನಾನು • ಆತ ಏನ್ ಆಕ್ಸ್‌ಫರ್ಡ್ ಪದವೀಧರನಾ? ಸುಪ್ರೀಂಕೋರ್ಟ್ ಲಾಯರಾ? ಹೈಕೋರ್ಟ್ ಲಾಯರಾ?

ಬೆಂಗಳೂರು, ನ.22– ಯಾವುದೇ ಕಾರಣಕ್ಕೂ ನಾವು ಎನ್‌ಡಿಎ ಮೈತ್ರಿ ಕಡಿದುಕೊಳ್ಳುವುದಿಲ್ಲ. ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮಿತ್ ಶಾ ಅವರ ನಾಯಕತ್ವದಲ್ಲಿ ವಿಶ್ವಾಸ ಇರಿಸಿದ್ದೇವೆ ಎಂದು ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರಾದ ಹೆಚ್.ಡಿ.ದೇವೇಗೌಡರು ಹೇಳಿದರು.



ಜೆಡಿಎಸ್ 25 ವರ್ಷಗಳ ರಜತ ಮಹೋತ್ಸವ ಸಂಭ್ರಮಾಚರಣೆ ಕಾರ್ಯಕ್ರಮವನ್ನು ಹೆಚ್.ಡಿ. ದೇವೇಗೌಡರು ಉದ್ಘಾಟಿಸಿದರು

ಜೆಡಿಎಸ್ ಬೆಳ್ಳಿಹಬ್ಬ ಕಾರ್ಯಕ್ರಮವನ್ನು ಉದ್ಘಾಟಿಸಿ, ಕಾರ್ಯಕರ್ತರು, ಮುಖಂಡರನ್ನು ಉದ್ದೇಶಿಸಿ ಭಾಷಣ ಮಾಡಿದ ಅವರು, ನಾವು ಎನ್‌ಡಿಎ ಜತೆ ಇದ್ದೇವೆ. ಮೋದಿ ಅವರ ನೇತೃತ್ವದಲ್ಲಿ ವಿಶ್ವಾಸ ಇಟ್ಟಿದ್ದೇವೆ. ಅವರ ನೇತೃತ್ವದಲ್ಲಿ ಬಲಿಷ್ಠ ಸರ್ಕಾರ ಇದೆ. ಇದನ್ನು ನಮ್ಮ ಕಾರ್ಯಕರ್ತರು, ಮುಖಂಡರು ಯಾರೂ ಮರೆಯಬಾರದು ಎಂದರು.

ತುರ್ತು ಪರಿಸ್ಥಿತಿ ಹೇರಿದಾಗ ಎರಡನೇ ಸ್ವಾತಂತ್ರ್ಯ ಹೋರಾಟ ನಡೆಸಿದ ಜಯ ಪ್ರಕಾಶ ನಾರಾಯಣ ಅವರ ಜತೆಯಲ್ಲಿ ನಾವು, ಅವತ್ತಿನ ಬಿಜೆಪಿಯವರು ಒಟ್ಟಿಗೆ ಕೆಲಸ ಮಾಡಿದ್ದೇವೆ. ಹೀಗಾಗಿ ನಾವು ರಾಷ್ಟ್ರದ ಹಿತ ದೃಷ್ಟಿಯಿಂದ ಒಟ್ಟಾಗಿ ಕೆಲಸ ಮಾಡಬೇಕಿದೆ. ಕಾಂಗ್ರೆಸ್ ಪಕ್ಷದ ಕೆಟ್ಟ ಆಡಳಿತಕ್ಕೆ ಪಾಠ ಕಲಿಸಬೇಕಾಗಿದೆ ಎಂದು ಗುಡುಗಿದರು.

ಸಿದ್ದರಾಮಯ್ಯ ವಿರುದ್ಧ ತೀವ್ರ ವಾಗ್ದಾಳಿ: ಜೆಡಿಎಸ್ ಪಕ್ಷದಲ್ಲೇ ಇದ್ದಿದ್ದರೆ ನಾನು ಸಿಎಂ ಆಗುತ್ತಿರಲಿಲ್ಲ ಎಂದು ಸಿದ್ದರಾಮಯ್ಯ ಅವರು ಚಾಮರಾಜನಗರದಲ್ಲಿ ಹೇಳಿರುವ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ ದೇವೇಗೌಡರು; ಅವರನ್ನು ನಾನು ಸಿಎಂ ಮಾಡಲು ತಯಾರಿದ್ದೆ. ಆದರೆ ಸೋನಿಯಾ ಗಾಂಧಿ ಅವರು ಧರ್ಮಸಿಂಗ್ ಅವರನ್ನು ಸಿಎಂ ಮಾಡಲು ಪಟ್ಟು ಹಿಡಿದರು. ಕಾಶ್ಮೀರದಲ್ಲಿ ಗುಲಾಮ್ ನಬಿ ಆಜಾದ್ ಅವರನ್ನು ಡಿಸಿಎಂ ಮಾಡಿದ್ದೀರಿ, ಮುಫ್ತಿ ಮೊಹಮ್ಮದ್ ಸಯ್ಯಿದ್ ಅವರನ್ನು ಸಿಎಂ ಮಾಡಿದ್ದೀರಿ. ಅದೇ ರೀತಿ ಕರ್ನಾಟಕದಲ್ಲಿ ಸಿದ್ದರಾಮಯ್ಯ ಅವರನ್ನು ಸಿಎಂ ಮಾಡಿ ಎಂದು ಮೂರು ಬಾರಿ ಸೋನಿಯಾ ಗಾಂಧಿ ಮನೆ ಬಾಗಿಲಿಗೆ ಹೋಗಿ ಕೇಳಿದೆ. ಸಿದ್ಧರಾಮಯ್ಯ ಬೇಕಿದ್ದರೆ ಸೋನಿಯಾ ಗಾಂಧಿ ಅವರನ್ನು ಕೇಳಲಿ, ಅವರು ಇನ್ನೂ ಬದುಕಿದ್ದಾರೆ ಎಂದು ಹೇಳಿದರು.

ಸೋನಿಯಾ ಗಾಂಧಿ ಕೇಳಲಿ: ಸೋನಿಯಾ ಗಾಂಧಿ ಅವರಿಗೆ ಸತ್ಯ ಗೊತ್ತಿದೆ. ಅಹಮದ್ ಪಟೇಲ್ ಅವರಿಗೆ ತಿಳಿದಿತ್ತು. ಸಿದ್ಧರಾಮಯ್ಯ ಅವರನ್ನು ಸಿಎಂ ಮಾಡಲು ಸೋನಿಯಾ ಗಾಂಧಿ ಸುತಾರಾಂ ಒಪ್ಪಲಿಲ್ಲ. ನೀವು ನಮ್ಮ ಸಿಎಂ ಅಭ್ಯರ್ಥಿಯನ್ನಾಗಿ ಒಪ್ಪಿಕೊಳ್ಳಬೇಕು, ಇಲ್ಲವಾದರೆ ನಾವು ಚುನಾವಣೆಗೆ ಹೋಗುತ್ತೇವೆ ಎಂದರು. ನಾವು ವಿಧಿ ಇಲ್ಲದೆ ಒಪ್ಪಿಕೊಂಡೆವು ಎಂದು ದೇವೇಗೌಡರು ಹಳೆಯ ವಿಷಯವನ್ನು ಮೆಲುಕು ಹಾಕಿದರು.

ಆ ಚುನಾವಣೆಯಲ್ಲಿ ಜೆಡಿಎಸ್ 58 ಸೀಟು ಗೆಲ್ಲೋಕೆ ಚನ್ನಪ್ಪ ಎನ್ನುವ ಲೇವಾದೇವಿದಾರರೊಬ್ಬರ ಮನೆಗೆ ರಾತ್ರಿ ಹನ್ನೆರಡು ಗಂಟೆ ಹೊತ್ತಿನಲ್ಲಿ ಹೋಗಿ ಎರಡು ಚೆಕ್ ಕೊಟ್ಟು ಎರಡು ಕೋಟಿ ಸಾಲ ತಂದೆ. ಆಗ ಈ ಸಿದ್ಧರಾಮಯ್ಯ ಏನು ಮಾಡುತ್ತಿದ್ದರು. ಮಾತಾಡುವಾಗ ಕನಿಷ್ಠ ಪ್ರಮಾಣದ ಕ್ರಿಯೆ ಇರಬೇಕು, ಪ್ರಾಮಾಣಿಕತೆ ಇರಬೇಕು. ಸುಳ್ಳು ಹೇಳಬಾರದು ಎಂದು ದೇವೇಗೌಡರು ಕಿಡಿಕಾರಿದರು.

ನೀವೇನು ಆಕ್ಸ್‌ಫರ್ಡ್ ಪಡೆದವರಾ: ರಾಮಕೃಷ್ಣ ಹೆಗಡೆ ಅವರು ಎಂಟು ವರ್ಷ ಸಿಎಂ ಆಗಿದ್ದರು. ಅವರು ನಿಮ್ಮನ್ನು ಹಣಕಾಸು ಸಚಿವರನ್ನಾಗಿ ಮಾಡಿದ್ದರಾ, ನಿಮ್ಮನ್ನು ಹಣಕಾಸು ಸಚಿವರನ್ನಾಗಿ ಮಾಡಿದ್ದು ಈ ದೇವೇಗೌಡ. ಹೆಗಡೆ

> **ಉತ್ತರದಲ್ಲಿ ಜೆಡಿಯು, ದಕ್ಷಿಣದಲ್ಲಿ ಜೆಡಿಎಸ್ ಎಂದು ಘೋಷಣೆ ಮೊಳಗಿಸಿದ ದೇವೇಗೌಡರು; ಅಲ್ಲಿ ನಿತೀಶ್ ಕುಮಾರ್, ಇಲ್ಲಿ ಕುಮಾರಸ್ವಾಮಿ ಎಂದು ಒತ್ತಿ ಹೇಳಿದರು. ನಿತೀಶ್ ಅವರು ಮೂವತ್ತು ವರ್ಷದಿಂದಲೂ ರಾಜಕಾರಣದಲ್ಲಿ ಇದ್ದಾರೆ. ಹತ್ತನೇ ಬಾರಿಗೆ ಪ್ರಮಾಣ ಮಾಡಿದ್ದಾರೆ. ಅವರು ಬಹಳ ಸೂಕ್ಷ್ಮವಾಗಿ ರಾಜಕಾರಣ ಮಾಡಿಕೊಂಡು ಬಂದಿದ್ದಾರೆ. ಇದನ್ನು ನಾವು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು ಎಂದರು.**

ಅಗಲೀ, ಬೊಮ್ಮಾಯಿ ಆಗಲೀ, ನಿಮ್ಮನ್ನು ಹಣಕಾಸು ಮಂತ್ರಿ ಮಾಡಲಿಲ್ಲ. ನೀವೇನೂ ಮಹಾ ಮೇಧಾವಿ ಆಗಿದ್ದೀರಾ, ಆಕ್ಸ್‌ಫರ್ಡ್ ವಿವಿಯಲ್ಲಿ ಹಣಕಾಸು ಪದವಿ ಪಡೆದಿದ್ರಾ. ನೀವು ಸುಪ್ರೀಂಕೋರ್ಟ್ ಲಾಯರ್ ಏನೂ ಅಲ್ಲ, ಹೈಕೋರ್ಟ್‌ನಲ್ಲಿಯೂ ಲಾಯರ್ ಅಲ್ಲ. ಮೈಸೂರಿನಲ್ಲಿ ಎಲ್ಲೋ ಒಂದೆರಡು ಕೇಸು ವಾದ ಮಾಡಿಕೊಂಡು ಇದ್ದವರು. ನಾನು ಬದುಕಿದ್ದೇನೆ, ಸೋನಿಯಾ ಗಾಂಧಿ ಕೂಡ ಬದುಕಿದ್ದಾರೆ. ಸುಳ್ಳು ಹೇಳಬೇಡಿ. ಜೆಡಿಎಸ್ ಪಕ್ಷಕ್ಕೆ ನಿಮ್ಮ ದೇಣಿಗೆ ಹೇಳಿ ಎಂದು ದೇವೇಗೌಡರು ಸಿದ್ಧರಾಮಯ್ಯ ಅವರನ್ನು ಪ್ರಶ್ನಿಸಿದರು.

ಹೆಗಡೆ, ನಿಮ್ಮನು ಕನ್ನಡ ಕಾವಲು ಸಮಿತಿ ಅಧ್ಯಕ್ಷರನ್ನಾಗಿ ಮಾಡಿದ್ದರು. ಆಮೇಲೆ ಇನ್ನೊಮ್ಮೆ ಯಾವುದೋ ಪಶು ಸಂಗೋಪನೆ ಅಥವಾ ಇನ್ನೂ ಯಾವುದೋ ಖಾತೆ ನಿರ್ವಹಿಸಿದಿರಿ. ವೀರಪ್ಪ ಮೊಯಿಲಿ ಸಿಎಂ ಆಗಿದ್ದಾಗ ಸರಕಾರಿ ನೌಕರರ ಸಂಬಳ ಕೊಡೋಕೆ ದುಡ್ಡು ಇಲ್ಲ ಎಂದು ಪಿಯರ್‌ಲೆಸ್ ಕಂಪನಿಯಿಂದ 200 ಕೋಟಿ ಸಾಲ ತಂದರು. ಅದಾದ ಮೇಲೆ ಬಂದ ಸರ್ಕಾರದಲ್ಲಿ ನಿಮ್ಮನ್ನು ಹಣಕಾಸು ಮಂತ್ರಿ ಮಾಡಿದೆ. ಆಗ ರಾಜ್ಯದಲ್ಲಿ ಹಣಕಾಸು ಸ್ಥಿತಿ ಹದಗೆಟ್ಟು ಹೋಗಿತ್ತು. ನಿಮಗೆ ಗೊತ್ತಿಲ್ಲವೇ. ರಾಜ್ಯದ ಹಣಕಾಸು ಸ್ಥಿತಿ ಸರಿ ಮಾಡಲೇಬೇಕು ಎಂದು ನಾನು ನಿರ್ಧಾರ ಕೈಗೊಂಡು ಈ ವ್ಯಕ್ತಿಯನ್ನು ಹಣಕಾಸು ಮಂತ್ರಿಯನ್ನಾಗಿ ಮಾಡಿದೆ. ಅದೇ ನಾನು ಮಾಡಿದ ತಪ್ಪು ಎಂದು ದೇವೇಗೌಡರು ಬೇಸರ ವ್ಯಕ್ತಪಡಿಸಿದರು.

ಅನೇಕ ಸಲ ಕಣ್ಣೀರಿಟ್ಟೆ: ಅನೇಕ ಸಂದರ್ಭಗಳಲ್ಲಿ ನಾನು ಈ ವ್ಯಕ್ತಿಯನ್ನು ಉಪ ಮುಖ್ಯಮಂತ್ರಿ ಮಾಡಿದ್ದಕ್ಕೆ ಕಣ್ಣೀರು ಇಟ್ಟೆ, ಅವರನ್ನು ಹಣಕಾಸು ಮಂತ್ರಿ ಮಾಡಿದ್ದು ಹೆಗಡೆ ಅಲ್ಲ, ನಾನು. ಅದನ್ನು ಆ ಮನುಷ್ಯ ನೆನಪು ಇಟ್ಟುಕೊಳ್ಳಬೇಕು ಎಂದು ಗುಡುಗಿದ ಗೌಡರು; ಸಿದ್ಧರಾಮಯ್ಯ ನಮ್ಮ ಪಕ್ಷಕ್ಕೆ ಏನು ಕೊಡುಗೆ ನೀಡಿಲ್ಲ. ನಾನು ಆ ವ್ಯಕ್ತಿಯನ್ನು ಪಕ್ಷದ ರಾಜ್ಯದ ಅಧ್ಯಕ್ಷ ಮಾಡಬೇಕು ಎಂದು ಹೊರಟಾಗ ಹೆಗಡೆ ಅವರು ತಮ್ಮ ಕೋಣೆಯಲ್ಲಿ ನನ್ನ ಕೈ ಹಿಡಿದು ಯಾರನ್ನಾದರೂ ಮಾಡು, ಆತನನ್ನು ಮಾತ್ರ ಮಾಡಬೇಡ ಎಂದು ಹೇಳಿದರು. ನಾನು ಹೆಗಡೆ ಅವರ ಮಾತು ಕೇಳಲಿಲ್ಲ ಎಂದು ಹೇಳಿದರು.

ನಾನು ಜಾಲಪ್ಪ ಅವರಿಂದ ರಾಜಕೀಯವಾಗಿ ಬೆಳೆದೆ ಅಂತಾರೆ. ಆ ಸಮುದಾಯಕ್ಕೆ ಒಂದು ಮೆಡಿಕಲ್ ಕಾಲೇಜು ಇರಲಿ ಎಂದು ನಾನು ಮಂಜೂರು ಮಾಡಿದೆ. ದೇವರಾಜು ಅರಸು ಹೆಸರಿನಲ್ಲಿ ಸ್ಥಾಪನೆ ಆಗಲಿ ಎಂದು ಕೊಟ್ಟೆ, ಇವತ್ತು ಅದು ಜಾಲಪ್ಪ ಮೆಡಿಕಲ್ ಕಾಲೇಜು ಆಗಿದೆ. ಸಮುದಾಯದ ಆಸ್ತಿ ಆಗಬೇಕಿದ್ದ ಮೆಡಿಕಲ್ ಕಾಲೇಜು ಅವರ ಕುಟುಂಬದ ಆಸ್ತಿಯಾಗಿ ಬದಲಾಗಿದೆ. ಇದು ಇವರ ಸಾಮಾಜಿಕ ನ್ಯಾಯ! ಎಂದು ದೇವೇಗೌಡರು ಲೇವಡಿ ಮಾಡಿದರು.

ಅಹಿಂದ ಸಮಾವೇಶ ಮಾಡಲು ಹೊರಟಾಗ ಅದನ್ನು ಪಕ್ಷದ ವೇದಿಕೆಯಲ್ಲಿ ಮಾಡಿ ಎಂದು ಸೂಚಿಸಿದೆ. ಅದಕ್ಕೆ ಅವರು ಕೇಳಲಿಲ್ಲ. ಪ್ರತ್ಯೇಕವಾಗಿ ಹುಬ್ಬಳ್ಳಿಯಲ್ಲಿ ಸಮಾವೇಶ ಮಾಡುವುದಾಗಿ ಹೊರಟರು. ಕೊನೆಗೆ ಬೇರೆ ದಾರಿ ಇರಲಿಲ್ಲ. ಹೀಗಾಗಿ ನಾನು ಅವರನ್ನು ಪಕ್ಷದಿಂದ ಹೊರ ಹಾಕಲು ನಿರ್ಧಾರ ತೆಗೆದುಕೊಂಡೆ. ಈ ಬಗ್ಗೆ ನನಗೆ ಯಾವ ಪಶ್ಚಾತ್ತಾಪವು ಇಲ್ಲ. ಇಂತಹವರು ಅನೇಕರು ಬಂದಿದ್ದಾರೆ, ಹೋಗಿದ್ದಾರೆ. ಹೆದರುವುದಿಲ್ಲ, ನಾನು ಈಗಲೂ ಪಕ್ಷ ಕಟ್ಟುತ್ತೇನೆ. ಎಲ್ಲಿ ಕರೆದರೂ ಹೋಗುತ್ತೇನೆ. ದೇವೇಗೌಡ ಸುಮ್ಮನೆ ಕೂರುವ ವ್ಯಕ್ತಿಯಲ್ಲ ಎಂದರು ಅವರು.

ಮುಖ್ಯಮಂತ್ರಿ ಸಿದ್ದರಾಮಯ್ಯ ತಾವು ನಡೆದು ಬಂದ ದಾರಿ ಮರೆತಿದ್ದಾರೆ

• ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ವಿಷಾದ • ದೇವೇಗೌಡರಿಂದ ಅನುಕೂಲ ಪಡೆದು ಅವರ ಬಗ್ಗೆಯೇ ಲಘುವಾಗಿ ಮಾತನಾಡುತ್ತಿರುವುದಕ್ಕೆ ಬೇಸರ

ಬೆಂಗಳೂರು, ನ.22(ಕೆಎಂಶಿ) – ಮುಖ್ಯಮಂತ್ರಿ ಸಿದ್ದರಾಮಯ್ಯ ನಡೆದು ಬಂದ ದಾರಿ ಮರೆತಿರುವುದು, ತಮಗೆ ತಾವೇ ಮಾಡಿಕೊಳ್ಳುತ್ತಿರುವ ಅನ್ಯಾಯ ಎಂದು ಜಾತ್ಯತೀತ ಯುವಜನತಾ ದಳ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ವ್ಯಂಗ್ಯವಾಡಿದ್ದಾರೆ.



ಜೆಡಿಎಸ್ 25 ವರ್ಷ ರಜತ ಮಹೋತ್ಸವ ಸಂಭ್ರಮಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಮಹಾ ಅಧಿವೇಶನ ಉದ್ಘಾಟಿಸಿ ಮಾತನಾಡಿದ ಅವರು, ಜನತಾ ಪರಿವಾರದಲ್ಲಿ ದೊಡ್ಡ ದೊಡ್ಡ ನಾಯಕರಿದ್ದರೂ ಸಿದ್ದರಾಮಯ್ಯರಿಗೆ ಬಜೆಟ್ ಮಂಡನೆಗೆ ಅವಕಾಶ ಮಾಡಿಕೊಟ್ಟಿದ್ದು, ಉಪಮುಖ್ಯಮಂತ್ರಿ ಮಾಡಿದ್ದೂ ಹೆಚ್.ಡಿ.ದೇವೇಗೌಡರು. ಆದರೆ ಈಗ ಅದೆಲ್ಲವನ್ನೂ ಮರೆತಿದ್ದಾರೆ. ಜೆಡಿಎಸ್ ಬಗ್ಗೆ ಲಘುವಾಗಿ ಮಾತನಾಡುತ್ತಾರೆ. ಅವರಿಗೆ ದೇವರು ಒಳ್ಳೆಯದು ಮಾಡಲಿ ಎಂದರು.

ದೇವೇಗೌಡರು ಈ ವಯಸ್ಸಿನಲ್ಲೂ ಸಾರ್ವಜನಿಕ ಸೇವೆಗೆ ಬದುಕು ಮುಡಿಪಾಗಿಟ್ಟಿದ್ದಾರೆ. ನಮ್ಮಂತ ಯುವಜನರಿಗೆ ಸ್ಫೂರ್ತಿ, ಪಕ್ಷಾತೀತವಾಗಿ ಎಲ್ಲರೂ ಅವರನ್ನ ಆರಾಧಿಸುತ್ತಾರೆ.

ಜೆ.ಪಿ.ಭವನ ನಮಗೆಲ್ಲಾ ದೇವಾಲಯ ಇದ್ದಂತೆ. ಇಲ್ಲಿ ರಜತ ಮಹೋತ್ಸವ ಆಚರಣೆ ಮಾಡಬೇಕು ಎಂಬುದಾಗಿ ಎಚ್.ಡಿ.ಕುಮಾರಸ್ವಾಮಿ ನಿರ್ಧರಿಸಿದರು.

ಜೆಡಿಎಸ್ ಪಕ್ಷದಲ್ಲಿರುವಂತಹ ನಿಷ್ಠಾವಂತ ಕಾರ್ಯಕರ್ತರು ಯಾವ ಪಕ್ಷದಲ್ಲೂ ಇಲ್ಲ. ಜೆಡಿಎಸ್ ಸ್ವಂತ ಬಲದೊಂದಿಗೆ ಅಧಿಕಾರಕ್ಕೆ ತರಬೇಕೆಂಬುದು ದೇವೇಗೌಡರ ಆಸೆ, ಅದಕ್ಕಾಗಿ ನಾವೆಲ್ಲ ಹೋರಾಡೋಣ.

ಜನತಾದಳ ಸದಸ್ಯತ್ವದ ಅಭಿಯಾನ ಶೇ.30 ರಿಂದ 40ರಷ್ಟು ಗುರಿ ಮುಟ್ಟಿದ್ದು, ಮತ್ತಷ್ಟು ಚುರುಕಾಗಿ ಕಾರ್ಯನಿರ್ವಹಿಸಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

ಪ್ರಾದೇಶಿಕ ಪಕ್ಷವೊಂದು 25ನೇ ವರ್ಷಾಚರಣೆ ಮಾಡುತ್ತಿರುವುದು ರಾಜ್ಯದ ರಾಜಕೀಯ ಇತಿಹಾಸದಲ್ಲಿ ಇದೇ ಮೊದಲು, ಪಕ್ಷದ ಬೆಳವಣಿಗೆಗೆ ತನು, ಮನ, ಧನ ಎಲ್ಲವನ್ನೂ ಅರ್ಪಿಸಿ, ಹೋರಾಟ ಮಾಡಿದ ಕಾರ್ಯಕರ್ತರಿಂದ ಇದು ಸಾಧ್ಯವಾಗಿದೆ.

ನೆಲ, ಜಲ, ಭಾಷೆಗಾಗಿ ಮಾಜಿ ಪ್ರಧಾನಿ ದೇವೇಗೌಡರು ಹಾಗೂ ಮುಖ್ಯಮಂತ್ರಿಯಾಗಿ ಕುಮಾರಸ್ವಾಮಿ ಕೊಡುಗೆ ಸ್ಮರಿಸುವಂತಹುದು.

ಜೆಡಿಎಸ್ ರಜತ ಮಹೋತ್ಸವ ನಾಡಿನೆಲ್ಲೆಡೆ ಆಚರಿಸೋಣ. ಈವರೆಗೆ 52 ವಿಧಾನಸಭಾ ಕ್ಷೇತ್ರದಲ್ಲಿ ಜನರೊಂದಿಗೆ ಜನತಾದಳ ಕಾರ್ಯಕ್ರಮ ಮಾಡಿದ್ದು, ಮುಂಬರುವ ದಿನಗಳಲ್ಲಿ ಎರಡನೇ ಹಂತದ ಪ್ರವಾಸದ ಮೂಲಕ ಎಲ್ಲ ವಿಧಾನಸಭಾ ಕ್ಷೇತ್ರಗಳಿಗೆ ಭೇಟಿ ನೀಡುವುದಾಗಿ ತಿಳಿಸಿದರು.

ಮುಂಬರುವ 2028ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಈ ಹಿಂದೆ ಗೆದ್ದ ಗರಿಷ್ಠ 58 ಸ್ಥಾನಗಳನ್ನು ಮೀರಿ ಗೆಲ್ಲಬೇಕಾಗಿದೆ, ಅದಕ್ಕಾಗಿ ನಾವೆಲ್ಲರೂ ಬಲಿಷ್ಠ ಪಕ್ಷ ಕಟ್ಟೋಣ, ಮತ್ತೊಮ್ಮೆ ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡೋಣ ಎಂದರು.

ಆರೇಳು ತಿಂಗಳಲ್ಲಿ ರಾಜ್ಯ ರಾಜಕಾರಣದ ಚಿತ್ರಣವೇ ಬದಲು

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಭವಿಷ್ಯ

ಬೆಂಗಳೂರು, ನ.22(ಕೆಎಂಶಿ) –ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಒಳಜಗಳದಿಂದ ಅಧಃಪತನವಾಗಲಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಭವಿಷ್ಯ ನುಡಿದಿದ್ದಾರೆ.

ಮುಂದಿನ ಆರೇಳು ತಿಂಗಳಲ್ಲಿ ಕರ್ನಾಟಕದ ರಾಜಕೀಯ ಚಿತ್ರಣವೇ ಬದಲಾಗಲಿದೆ, ಅದು ಯಾವ ರೀತಿ, ಹೇಗೆ ಎಂಬುದನ್ನು ಹೇಳಲು ಮತ್ತು ಊಹಿಸಲೂ ಸಾಧ್ಯವಿಲ್ಲ.

ಕಳೆದ ಎರಡು ದಿನಗಳಿಂದ ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಕಾಂಗ್ರೆಸ್‌ನಲ್ಲಿ ಬಹಿರಂಗ ಕಚ್ಚಾಟ ಆರಂಭಗೊಂಡಿದೆ. ಈ ವಾತಾವರಣ ಎಲ್ಲಿಗೆ ಮುಟ್ಟುತ್ತದೆ ಎಂಬುದು ತಿಳಿಯದು, ಸರ್ಕಾರ ಅಧಃಪತನಗೊಂಡು ಮಧ್ಯಂತರ ಚುನಾವಣೆ ಎದುರಾದರೂ ಆಶ್ಚರ್ಯವಿಲ್ಲ ಎಂದರು.

ನನಗೆ ತಿಳಿದಿರುವುದನ್ನು ಇಲ್ಲಿ ಬಹಿರಂಗಪಡಿಸಲು ಸಾಧ್ಯವಿಲ್ಲ. ಆದರೆ, ಇಂದಿನಿಂದಲೇ ಕಾರ್ಯಕರ್ತರು ತಮ್ಮ ತಮ್ಮ ಕ್ಷೇತ್ರಗಳ ಜನರಿಗೆ ಈ ಸರ್ಕಾರದ ದುರಾಡಳಿತದ ಬಗ್ಗೆ ಮನದಟ್ಟು ಮಾಡುವ ಕೆಲಸ ಮಾಡಿ. ಅಲ್ಲದೆ, ಪಕ್ಷ ಸಂಘಟನೆ ಜೊತೆಗೆ ಸದಸ್ಯತ್ವ ನೋಂದಣಿ ಚುರುಕುಗೊಳಿಸಿ, ನಾವು ಮತ್ತೆ ಅಧಿಕಾರಕ್ಕೆ ಬರಲು ಇಂದಿನಿಂದಲೇ ಭೂಮಿಕೆ ಸಿದ್ಧ ಮಾಡಿ ಎಂದರು.

ಜೆಡಿಎಸ್ 25 ವರ್ಷ ರಜತ ಮಹೋತ್ಸವ ಸಂಭ್ರಮಾಚರಣೆಯ ರಾಷ್ಟ್ರೀಯ ಮಹಾ ಅಧಿವೇಶನದಲ್ಲಿ ಮಾತನಾಡಿದ ಅವರು, ಎನ್‌ಡಿಎ ಮೈತ್ರಿಕೂಟದಲ್ಲೇ ಮುಂಬರುವ ಚುನಾವಣೆಯನ್ನೂ ಎದುರಿಸುತ್ತೇವೆ.

ಬಿಜೆಪಿ ಜೊತೆ ಸೀಟು ಹೊಂದಾಣಿಕೆಯಲ್ಲಿ 85ರಿಂದ 90 ಸ್ಥಾನಗಳನ್ನು ಪಡೆಯುವ ವಿಶ್ವಾಸವಿದೆ, ಆದರೆ, ನಾವು ಈ ಕ್ಷೇತ್ರಗಳಲ್ಲಿ ಸ್ಪರ್ಧಿಸಲು, ನಮ್ಮ ಬಲವನ್ನು ತೋರಿಸಬೇಕಿದೆ.

ಇದನ್ನು ಅರಿತು ನೀವು ಈಗಿನಿಂದಲೇ ಕ್ಷೇತ್ರದಲ್ಲಿ ಸಂಘಟನೆ ಮಾಡಿ, ನಮಗೆ ನೀಡುವ ಎಲ್ಲಾ ಕ್ಷೇತ್ರಗಳಲ್ಲೂ ಗೆಲ್ಲುವ ಭರವಸೆ ಇದೆ, ಕರ್ನಾಟಕದ ರಾಜಕೀಯ ಚಿತ್ರಣ ಏನಾದರೂ ಆಗಬಹುದು, ನಾವು ಚುನಾವಣೆಗೆ ಸಿದ್ಧರಾಗಬೇಕು.

ಈಗಾಗಲೇ ನಿಖಿಲ್ ಕುಮಾರಸ್ವಾಮಿ 60ರಿಂದ 65 ಕ್ಷೇತ್ರಗಳಲ್ಲಿ ಪ್ರವಾಸ ಮಾಡಿ ಸಂಘಟನೆ ಮತ್ತು ಸದಸ್ಯತ್ವ ನೋಂದಣಿ ಕಾರ್ಯ ಮಾಡಿದ್ದಾರೆ. ಇದು ಮತ್ತಷ್ಟು ಚುರುಕುಗೊಳ್ಳಬೇಕು. ಮುಂಬರುವ ಚುನಾವಣೆ ಬಿಹಾರ ಮಾದರಿಯಲ್ಲಿ ಆಗಲಿದೆ ನಮ್ಮನ್ನು ನಾಲ್ಕು ಸ್ಥಾನಕ್ಕೆ ತಳ್ಳುವುದಾಗಿ ಹೇಳುವ ಕಾಂಗ್ರೆಸ್ಸನ್ನೇ ಆ ಸ್ಥಾನದಲ್ಲಿ ಕೂರಿಸೋಣ. ನಾವು ಒಗ್ಗಟ್ಟಿನಿಂದ ಶ್ರಮಿಸಿದರೆ ಎಲ್ಲವೂ ಸಾಧ್ಯವಿದೆ ಎಂದರು.

ಜೆಡಿಎಸ್ ಪಕ್ಷಕ್ಕೆ ರಜತ ಸಂಭ್ರಮ: ಬೆಳ್ಳಿನಾಣ್ಯ, ವಾಟ್ಸಪ್ ಲೈನ್ ನಂಬರ್ ಲೋಕಾರ್ಪಣೆ

• ರೈತರಿಗೆ ಬೆಂಬಲ ಬೆಲೆ; ನ್ಯಾಯ ಸಮ್ಮತ ಸೌಲಭ್ಯ ನೀಡುವಂತೆ ಸಭೆಯಲ್ಲಿ ಒತ್ತಾಯ
• ರಾಜ್ಯದ ಎಲ್ಲಾ ತಾಲೂಕುಗಳಲ್ಲಿ ಜೆಡಿಎಸ್ ಪಕ್ಷದ ರಜತ ಮಹೋತ್ಸವ ಕಾರ್ಯಕ್ರಮ ಆಚರಣೆ • ಮೂರು ತಿಂಗಳ ಕಾಲ ಜಿಲ್ಲೆ, ತಾಲೂಕು ಮಟ್ಟದಲ್ಲಿ ಬೆಳ್ಳಿ ಸಂಭ್ರಮ



ಪಕ್ಷದ ಚಿಹ್ನೆ ತೆನೆ ಹೊತ್ತ ರೈತ ಮಹಿಳೆ, ಹೆಚ್.ಡಿ. ದೇವೇಗೌಡರು ಮತ್ತು ಕುಮಾರಸ್ವಾಮಿ ಅವರ ಚಿತ್ರಗಳು ಇರುವ ಬೆಳ್ಳಿ ನಾಣ್ಯವನ್ನು ಲೋಕಾರ್ಪಣೆ ಮಾಡಲಾಯಿತು.

ಬೆಂಗಳೂರು, ನ.22– ಜೆಡಿಎಸ್ 25 ವರ್ಷಗಳ ರಜತ ಮಹೋತ್ಸವ ಸಂಭ್ರಮಾಚರಣೆ ಅಂಗವಾಗಿ ಪಕ್ಷದ ರಾಜ್ಯ ಕಚೇರಿ ಜೆ.ಪಿ. ಭವನದಲ್ಲಿ ಬೆಳ್ಳಿನಾಣ್ಯ ವಾಟ್ಸಪ್ ಲೈನ್ ನಂಬರ್ ಅನ್ನು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಲೋಕಾರ್ಪಣೆ ಮಾಡಿದರು.

ರಾಷ್ಟ್ರೀಯ ಮಂಡಳಿ ಸಭೆ ಹಾಗೂ ರಾಷ್ಟ್ರೀಯ ಕಾರ್ಯಕಾರಿಣಿ ನಂತರ ಶನಿವಾರ ನಡೆದ ಬೆಳ್ಳಿ ಹಬ್ಬದ ಕಾರ್ಯಕ್ರಮದಲ್ಲಿ ಹೆಚ್.ಡಿ. ದೇವೇಗೌಡರ ಜತೆಗೆ ಪಕ್ಷದ ರಾಜ್ಯಾಧ್ಯಕ್ಷರು ಹಾಗೂ ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಪಕ್ಷದ ಎಲ್ಲಾ ನಾಯಕರು, ಜಿಲ್ಲಾಧ್ಯಕ್ಷರು, ವಿವಿಧ ರಾಜ್ಯ ಘಟಕಗಳ ಅಧ್ಯಕ್ಷರು ಸಭೆಯಲ್ಲಿ ಭಾಗಿಯಾಗಿದ್ದರು.

ಇದೇ ವೇಳೆ ರಜತ ಮಹೋತ್ಸವದ ಮುಖ್ಯ ಆಕರ್ಷಣೆಯಾಗಿ ಪಕ್ಷದ ಚಿಹ್ನೆ ತೆನೆ ಹೊತ್ತ ರೈತ ಮಹಿಳೆ, ಹೆಚ್.ಡಿ. ದೇವೇಗೌಡರು ಮತ್ತು ಕುಮಾರಸ್ವಾಮಿ ಅವರ ಚಿತ್ರಗಳು ಇರುವ ಬೆಳ್ಳಿ ನಾಣ್ಯವನ್ನು ಲೋಕಾರ್ಪಣೆ ಮಾಡಲಾಯಿತು. ಬಳಿಕ ಮಾಜಿ ಪ್ರಧಾನಿಗಳು ವಾಟ್ಸಪ್ ಲೈನ್ ನಂಬರ್ 9964002028 ಬಿಡುಗಡೆ ಮಾಡಿದರು.

ಎರಡು ನಿರ್ಣಯಗಳ ಅಂಗೀಕಾರ: ಜೆಡಿಎಸ್ ರಾಷ್ಟ್ರೀಯ ಮಂಡಳಿ ಸಭೆಯಲ್ಲಿ ರೈತರ ಪರವಾಗಿ ಹಾಗೂ ಪಕ್ಷ ಸಂಘಟನೆ ಮಾಡುವ ಬಗ್ಗೆ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಮುಖ್ಯವಾಗಿ ಪ್ರಾಕೃತಿಕ ವಿಕೋಪಗಳಿಂದ ತತ್ತರಿಸಿರುವ ಸಾರ್ವಜನಿಕರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೆರವಾಗಬೇಕು. ನೆರೆಯಿಂದ ಆಸ್ತಿ, ಬೆಳೆ ಕಳೆದುಕೊಂಡಿರುವವರಿಗೆ ಸೂಕ್ತ ಪರಿಹಾರ ಕೊಡಬೇಕು. ರೈತ ಬೆಳೆಗಳನ್ನು ಕನಿಷ್ಠ ಬೆಂಬಲ ಬೆಲೆ ನೀಡುವ ಮೂಲಕ ಖರೀದಿ ಮಾಡಬೇಕು ಎಂಬ ನಿರ್ಣಯವನ್ನು ಅಂಗಿಕರಿಸಲಾಯಿತು.

ಜತೆಗೆ ರಾಷ್ಟ್ರ ಮತ್ತು ರಾಜ್ಯದಲ್ಲಿ ಪಕ್ಷವನ್ನು ಬಲಿಷ್ಠವಾಗಿ ತಳಮಟ್ಟದಿಂದ ಕಟ್ಟುವ ಬಗ್ಗೆ ಕೂಡ ನಿರ್ಣಯ ಕೈಗೊಳ್ಳಲಾಯಿತು.

ಸಂಭ್ರಮಾಚರಣೆಯಲ್ಲಿ ಶಾಸಕಾಂಗ ಪಕ್ಷದ ನಾಯಕರಾದ ಸುರೇಶ್ ಬಾಬು ರವರು, ಕೋರ್ ಕಮಿಟಿ ಅಧ್ಯಕ್ಷ ಎಂ. ಕೃಷ್ಣಾರೆಡ್ಡಿ, ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಸಂಸದ ಮಲ್ಲೇಶ್ ಬಾಬು, ಎಲ್ಲಾ ಶಾಸಕರು, ವಿಧಾನ ಪರಿಷತ್ ಸದಸ್ಯರು, ಪಕ್ಷದ ರಾಜ್ಯ ಮತ್ತು ರಾಷ್ಟ್ರಮಟ್ಟದ ಆಹ್ವಾನಿತರು, ಮಾಜಿ ಸಚಿವರು, ಮಾಜಿ ಶಾಸಕರು, ಜಿಲ್ಲಾ ಘಟಕಗಳ ಅಧ್ಯಕ್ಷರು ಹಾಗೂ ಆಹ್ವಾನಿತ ನಾಯಕರು ಪಾಲ್ಗೊಂಡಿದ್ದರು.

ಆತ ಮೆಂಟಲ್, ರಣಹೇಡಿ: ಹೆಚ್‌ಡಿಕೆ ವಿರುದ್ಧ ಏಕವಚನದಲ್ಲೇ ಡಿಕೆಶಿ ವಾಗ್ದಾಳಿ

ಬೆಂಗಳೂರು, ನ.22– ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ನಡುವಿನ ವಾಕ್ಸಮರ ಮತ್ತೆ ಮುಂದುವರೆದಿದೆ. ರಾಜ್ಯ ಕಾಂಗ್ರೆಸ್‌ನೊಳಗಿನ ಬಣ ಬಡಿದಾಟದ ಕುರಿತಂತೆ ಪ್ರತಿಕ್ರಿಯೆ ನೀಡಿದ್ದ ಹೆಚ್‌ಡಿಕೆ, ಇನ್ನು 6 ತಿಂಗಳಲ್ಲಿ ನಿರೀಕ್ಷೆ ಮೀರಿದ ಬೆಳವಣಿಗೆ ನಡೆಯಲಿದೆ ಅಂತ ಹೇಳಿದ್ದರು. ಇತ್ತ ಹೆಚ್‌ಡಿಕೆ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಡಿಕೆಶಿ, ಏಕವಚನದಲ್ಲೇ ಕಿಡಿಕಾರಿದ್ದಾರೆ. 'ಆತ ಹಗಲು ಕನಸು ಕಾಣುತ್ತಿದ್ದಾನೆ. ಇಟ್ಸ್ ಎ ಡೇ ಡ್ರೀಮ್ ಎಂದಿದ್ದಾರೆ. ಮುಂದುವರೆದು ಕುಮಾರಸ್ವಾಮಿ ಮೆಂಟಲ್ ಇರಬೇಕು' ಎಂದು ಕಿಡಿಕಾರಿದ್ದಾರೆ.



ಡಿ.ಕೆ.ಶಿವಕುಮಾರ್

ಕುಮಾರಸ್ವಾಮಿ ರಣಹೇಡಿ: ಬೆಂಗಳೂರಿನಲ್ಲಿ ಮಾತನಾಡಿದ ಡಿಕೆ ಶಿವಕುಮಾರ್, ನೀರಾವರಿ ಮತ್ತು ಬಿಡಿಎ ವಿಚಾರದಲ್ಲಿ ಕೋರ್ಟ್ ವಿಚಾರ ಹಾಗೂ ಪೆಂಡಿಂಗ್ ವಿಚಾರದ ಬಗ್ಗೆ ಚರ್ಚೆ ಮಾಡಿದ್ದೇನೆ. ಕುಮಾರಸ್ವಾಮಿ ಒಬ್ಬ ಮೆಂಟಲ್, ರಣಹೇಡಿ ಎಂದು ಏಕವಚನದಲ್ಲೇ ಡಿ.ಕೆ.ಶಿವಕುಮಾರ್ ವಾಗ್ದಾಳಿ ನಡೆಸಿದ್ದಾರೆ. ನಾನು ರಣರಂಗಕ್ಕೆ ಬಾ ಅಂತ ಕರೆಯುತ್ತಿದ್ದೇನೆ. ಆದರೆ ಬರ್ತಿಲ್ಲ ಎಂದು ವ್ಯಂಗ್ಯವಾಡಿದರು.

ನಕ್ಕರೆ ಅದೇ ಸ್ವರ್ಗ

ತಿಮ್ಮ ಸೆಕ್ಯೂರಿಟಿ ಕೆಲಸಕ್ಕೆ ಸೇರಿದ. ಮೊದಲ ದಿನವೇ ಕಂಠಪೂರ್ತಿ ಕುಡಿದು ಕೆಲಸಕ್ಕೆ ಹಾಜರಾದ.

ಮಾಲೀಕ : ಯಾಕೋ ಕುಡಿದು ಬಂದಿದ್ದೀಯಾ?

ತಿಮ್ಮ : ನೀವೇ ಹೇಳಿದ್ರಲ್ಲಾ ಸಾರ್, ಸೆಕ್ಯೂರಿಟಿ ಫುಲ್ ಟೈಟ್ ಆಗಿರಬೇಕು ಅಂತಾ.

ಮೈಸೂರು ಮಿತ್ರ
ಭಾನುವಾರ, 23 ನವೆಂಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಜೀವನವು ನಾವು ಆರ್ಡರ್ ಮಾಡಿದ್ದನ್ನು ತಂದುಕೊಡುವ ಹೋಟೆಲ್ ಅಲ್ಲ. ದೇವಸ್ಥಾನದ ಪ್ರಸಾದದಂತೆ ಸಿಕ್ಕಷ್ಟೇ ಸವಿಯಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕೋಪದಲ್ಲಿ ಕೊಯ್ದ ಮೂಗು ಶಾಂತವಾದಾಗ ಬಂದೀತೇ?

ನಿಮ್ಮ ಪತ್ರಗಳು

ಮೈಸೂರು ನಿವೃತ್ತರ ಸ್ವರ್ಗವಾಗಿಯೇ ಉಳಿಯಲಿ

ಮಾನ್ಯರೆ,

ವಾಯು ಗುಣಮಟ್ಟ ಸೂಚ್ಯಂಕ (ವಿವಿಹೆಚ್)ಪಟ್ಟಿಯಲ್ಲಿ ರಾಜ್ಯದ ಸಾಂಸ್ಕೃತಿಕ ನಗರಿ ಮೈಸೂರು ರಾಷ್ಟ್ರ ಮಟ್ಟದಲ್ಲಿ 3ನೇ ಸ್ಥಾನವನ್ನು ಮತ್ತು ರಾಜ್ಯ ಮಟ್ಟದಲ್ಲಿ ಮೊದಲನೇ ಸ್ಥಾನದಲ್ಲಿರುವುದಾಗಿ ಕೇಂದ್ರ ವಾಯುಮಾಲಿನ್ಯ ನಿಯಂತ್ರಣ ಮಂಡಳಿ ಇತ್ತೀಚೆಗೆ ಬಿಡುಗಡೆ ಮಾಡಿರುವ ವರದಿಯಲ್ಲಿ ತಿಳಿಸಿದೆ. ಅಲ್ಲದೇ ದೇಶದ ಮೊದಲ 10 ಸ್ವಚ್ಛ ನಗರಗಳಲ್ಲಿ ಕರ್ನಾಟಕದ ಮೂರು ನಗರಗಳು, ಅಂದರೆ ಮೈಸೂರು, ಕೊಪ್ಪಳ ಮತ್ತು ಯಾದಗಿರಿ ಜಿಲ್ಲೆಗಳು ಸ್ಥಾನ ಪಡೆದಿರುವುದು ರಾಜ್ಯದ ಜನತೆಯ ಹೆಮ್ಮೆಯ ಸಂಗತಿ. ಮುಖ್ಯವಾಗಿ ಮೈಸೂರು ನಗರವು ಈಗಾಗಲೇ 'ನಿವೃತ್ತರ ಸ್ವರ್ಗ' ಎನಿಸಿದೆ. ಈ ಕಾರಣಕ್ಕಾಗಿಯೇ ಮೈಸೂರು ನಗರವು ರಾಷ್ಟ್ರದಲ್ಲೇ ವಾಸಿಸಲು ಯೋಗ್ಯವಾದ ಸ್ಥಳವೆಂದು ಇತ್ತೀಚಿನ ದಿನಗಳಲ್ಲಿ ರಾಜ್ಯದ ಅಕ್ಕ-ಪಕ್ಕದ ತಮಿಳುನಾಡು, ಆಂಧ್ರ, ಕೇರಳ ಮತ್ತು ರಾಜಸ್ಥಾನದ ಕೆಲವು ಶ್ರೀಮಂತ ವರ್ಗದ ಜನರು ಮೈಸೂರು ನಗರದಲ್ಲಿ ದುಬಾರಿ ಬೆಲೆಗೆ ನಿವೇಶನ ಖರೀದಿಸಿ ವಿಲಾಸಿ ಬಂಗಲೆಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ. ಇದು ಹೀಗೆ ಮುಂದುವರೆದರೇ, ಮೈಸೂರು ನಗರವು ಸಹ ಮುಂದೊಂದು ದಿನ ವಾಯುಮಾಲಿನ್ಯದಿಂದ ಕಲುಷಿತವಾಗಬಹುದು. ಮೈಸೂರು ಈಗಿರುವಂತೆಯೇ ಮೈಸೂರಾಗಿರಲಿ ನಿವೃತ್ತರ ಸ್ವರ್ಗವೇ ಆಗಿ ಉಳಿಯಲಿ.

-ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಸಕ್ಕರೆ ಬೆಲೆ ಏರಿಕೆ: ನಿಯಂತ್ರಣ ಅಗತ್ಯ

ಮಾನ್ಯರೆ,

ಸಕ್ಕರೆಯ ಕನಿಷ್ಠ ಮಾರಾಟ ಬೆಲೆಯನ್ನು ರೂ 31 ರಿಂದ 40ಕ್ಕೆ ಹೆಚ್ಚಿಸುವಂತೆ ಭಾರತೀಯ ಸಕ್ಕರೆ ಮತ್ತು ಜೈವಿಕ ಇಂಧನ ತಯಾರಕರ ಒಕ್ಕೂಟ ಮನವಿ ಮಾಡಿದ್ದು, ಅದನ್ನು ಪರಿಶೀಲಿಸಲಾಗುವುದು ಎಂದು ಕೇಂದ್ರ ಆಹಾರ ಮತ್ತು ಸಂಸದೀಯ ವ್ಯವಹಾರ ಸಚಿವ ಪ್ರಹ್ಲಾದ್ ಜೋಶಿ ಹೇಳಿರುವುದು ವರದಿಯಾಗಿದೆ.

ಸಕ್ಕರೆ ಬೆಲೆ ಮಾರುಕಟ್ಟೆಯಲ್ಲಿ 40-42 ರೂ. ಇದ್ದುದು ಕಳೆದ ಕೆಲ ತಿಂಗಳುಗಳಿಂದ 45-46ಕ್ಕೆ ಏರಿದೆ. ಈಗ ಸರ್ಕಾರ ಏಕಾಏಕಿ 10ರೂ. ಏರಿಕೆ ಮಾಡಿಕೊಳ್ಳಲು ಒಪ್ಪಿದರೆ, ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆ 56-60ಕ್ಕೆ ಜಿಗಿಯುವ ಸಂಭವ ಇದೆ. ಸರ್ಕಾರ ಮಾರುಕಟ್ಟೆಯ ಮೇಲೆ ನಿಗಾ ವಹಿಸಿ, ದರ ಏರಿಕೆಯ ಮೇಲೆ ಕೇಂದ್ರ, ರಾಜ್ಯ ಸರ್ಕಾರಗಳು ಕಣ್ಣಿಡಬೇಕು. ಬೆಲೆ ಏರಿಕೆ ಗ್ರಾಹಕರಿಗೆ ಹೊರೆಯಾಗದಂತೆ ಎಚ್ಚರಿಕೆ ವಹಿಸಬೇಕು.

-ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಆಹಾರ ಸುರಕ್ಷತೆ ಮರೆತ ಕೈಗಾರಿಕೆಗಳು

ಮಾನ್ಯರೆ,

ರಾಜ್ಯದಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 ಹಾಗೂ ಅದರಡಿ ರಚಿಸಲ್ಪಟ್ಟ 2011ರ ನಿಯಮಗಳು ಜಾರಿಗೆ ಬಂದಿದ್ದರೂ, ಅನೇಕ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಇಂದಿಗೂ ನೋಂದಣಿ ಮಾಡಿಸಿಕೊಳ್ಳದೆ ಕಾರ್ಯನಿರ್ವಹಿಸುತ್ತಿರುವುದು ಗಂಭೀರ ವಿಷಯವಾಗಿದೆ.

ಸಮೀಕ್ಷೆಗಳ ಪ್ರಕಾರ ರಾಜ್ಯದ ಸಣ್ಣ ಆಹಾರ ಘಟಕಗಳಲ್ಲಿನ ಸುಮಾರು ಶೇ.35ರಷ್ಟು ಘಟಕಗಳು ಎಫ್.ಎಸ್.ಎಸ್.ಐ ನೋಂದಣಿ ಇಲ್ಲದೆ ಕೆಲಸ ಮಾಡುತ್ತಿವೆ ಮತ್ತು ಸುಮಾರು ಶೇ.40 ಘಟಕಗಳಲ್ಲಿ ಸ್ವಚ್ಛತೆ ಮಾನದಂಡಗಳು ಕಾಪಾಡಲಾಗುತ್ತಿಲ್ಲ. ಇದರ ಪರಿಣಾಮವಾಗಿ ಕಳೆದ ಐದು ವರ್ಷಗಳಲ್ಲಿ ಆಹಾರದಿಂದ ಹರಡುವ ರೋಗಗಳು ಶೇ. 22 ಹೆಚ್ಚಿರುವುದು ಆರೋಗ್ಯ ಇಲಾಖೆಯ ಅಂದಾಜು. ನೋಂದಣಿಯಿಲ್ಲದ ಘಟಕಗಳು ಅಗ್ಗದ ಗುಣಮಟ್ಟದ ಎಣ್ಣೆ, ಕಲಬೆರಕೆ ಧಾನ್ಯ, ವಿಷಕಾರಿ ರಾಸಾಯನಿಕಗಳು ಮತ್ತು ಅಸುರಕ್ಷಿತ ಪ್ಲಾಸ್ಟಿಕ್ ಪ್ಯಾಕೇಜಿಂಗ್ ಬಳಸುವುದರಿಂದ ಜನರ ಆರೋಗ್ಯ ತೀವ್ರ ಅಪಾಯಕ್ಕೆ ಗುರಿಯಾಗುತ್ತಿದೆ. ಇಂತಹ ಅಸುರಕ್ಷಿತ ಆಹಾರ ಸೇವನೆ ಕಿಡ್ನಿ ಹಾಗೂ ಲಿವರ್ ಹಾನಿ, ಜೀರ್ಣಕ್ರಿಯೆ ಸಮಸ್ಯೆಗಳು, ಮಕ್ಕಳಲ್ಲಿ ವಿಕಸನ ತೊಂದರೆಗಳು ಹಾಗೂ ದೀರ್ಘಾವಧಿಯಲ್ಲಿ ಕ್ಯಾನ್ಸರ್ ಅಪಾಯವನ್ನೂ ಹೆಚ್ಚಿಸಬಹುದು ಎಂಬುದು ವೈದ್ಯರ ಅಭಿಪ್ರಾಯ. ಜನರ ಆರೋಗ್ಯವನ್ನು ರಕ್ಷಿಸಲು ಎಫ್.ಎಸ್.ಎಸ್.ಐ ನಿಯಮಗಳು ಅನಿವಾರ್ಯವಾಗಿದ್ದರೂ, ಅನೇಕ ಸಣ್ಣ ಕೈಗಾರಿಕೆಗಳು ನಿಯಮಗಳಿಂದ ನಮಗೆ ಹೆಚ್ಚಿನ ಖರ್ಚು ಎಂಬ ನೆಪದಲ್ಲಿ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಿರುವುದು ಕಾನೂನು ಉಲ್ಲಂಘನೆ ಮಾತ್ರವಲ್ಲ, ಸಮಾಜದ ಮೇಲಿನ ನೈತಿಕ ಹೊಣೆಗಾರಿಕೆಯ ನಿರ್ಲಕ್ಷ್ಯವೂ ಆಗಿದೆ. ಸರ್ಕಾರವು ಇಂತಹ ಘಟಕಗಳ ಮೇಲೆ ಕಟ್ಟುನಿಟ್ಟಿನ ಪರಿಶೀಲನೆ ನಡೆಸಿ, ನೋಂದಣಿ ಕಡ್ಡಾಯಗೊಳಿಸಿ, ನಿಯಮ ಉಲ್ಲಂಘನೆ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಜೊತೆಗೆ ಸಣ್ಣ ಕೈಗಾರಿಕೆಗಳಿಗೆ ಅಗತ್ಯವಾದ ತರಬೇತಿ ಮತ್ತು ಮಾರ್ಗದರ್ಶನವನ್ನು ಸರ್ಕಾರ ಒದಗಿಸಬೇಕು.

-ಡಾ. ಎಚ್.ಕೆ. ವಿಜಯಕುಮಾರ್, ಮೈಸೂರು.

ವಿಶ್ವವಿದ್ಯಾಲಯಗಳ ಗುಣಮಟ್ಟ ಹೆಚ್ಚಿಸುವುದರ ಕಡೆ ಗಮನಹರಿಸಿ

ಮಾನ್ಯರೆ,

ಪ್ರಸ್ತುತ ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯದಲ್ಲಿ ಹೊಸದಾಗಿ ರಚನೆಗೊಂಡಿರುವ ವಿ.ವಿಗಳು ಸೇರಿ ರಾಜ್ಯದ ಹಲವು ವಿಶ್ವವಿದ್ಯಾಲಯಗಳಿಗೆ ಹೆಸರಿಡಲು ನಿರ್ಣಯ ಕೈಗೊಳ್ಳುತ್ತಿದೆ. ಈಗಾಗಲೇ ರಾಜ್ಯದ ಮೊಟ್ಟ ಮೊದಲ ವಿಶ್ವವಿದ್ಯಾಲಯವಾದ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾಲಯ ಸೇರಿ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಬೋಧಕ ಹಾಗೂ ಸಂಶೋಧನಾ ಗುಣಮಟ್ಟ ಕುಸಿದಿದ್ದು, ರಾಜ್ಯದ ಹಲವು ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರ ಕೊರತೆ, ಸಂಶೋಧನಾ ಮಾರ್ಗದರ್ಶಿಗಳ ಕೊರತೆ ಎದ್ದು ಕಾಣಿಸುತ್ತಿದೆ. ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯಗಳು ದಾಖಲಾತಿ ಪ್ರಮಾಣ ಸಹ ಕುಸಿದಿದೆ. ವಿಶ್ವವಿದ್ಯಾಲಯಗಳಿಗೆ ಸರಿಯಾದ ಪ್ರಮಾಣದಲ್ಲಿ ಅನುದಾನ ದೊರಕದ ಕಾರಣ ಎಲ್ಲಾ ವಿಶ್ವವಿದ್ಯಾಲಯಗಳ ಅಭಿವೃದ್ಧಿ ಕುಂಠಿತಗೊಂಡಿದೆ. ಶೈಕ್ಷಣಿಕ ಗುಣಮಟ್ಟ ಕುಸಿಯುತ್ತಿದೆ. ರಾಜ್ಯ ಸರ್ಕಾರವು ವಿಶ್ವವಿದ್ಯಾಲಯಗಳ ಗುಣಮಟ್ಟ ಹೆಚ್ಚಿಸುವುದರ ಕಡೆ, ವಿಶ್ವವಿದ್ಯಾಲಯಗಳಿಗೆ ನೇಮಕಾತಿ ಮಾಡುವುದರ ಕಡೆ ಗಮನಹರಿಸಬೇಕಾಗಿದೆ. ಇದನ್ನು ಬಿಟ್ಟು ರಾಜ್ಯದ ವಿಶ್ವವಿದ್ಯಾಲಯಗಳಿಗೆ ಹೆಸರು ಬದಲಿಸಿದರೇ ಗುಣಮಟ್ಟ ಬದಲಾಗುವುದೇ? ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕ್ರಮವಹಿಸಲಿ ಎಂದು ಈ ಮೂಲಕ ಮನವಿ.

-ಲಕ್ಷ್ಮಿ ಕಿಶೋರ್ ಅರಸ್, ಮೈಸೂರು

ನಾದಲಹರಿ



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಚಿತ್ರಾಂಗದಾ

ಕನ್ನಡ ಭಾಷೆಯ ಇಂದಿನ ಸ್ಥಿತಿಗತಿಗಳನ್ನು ನೋಡಿದಾಗ ಕನ್ನಡವನ್ನು ನಮ್ಮದು ಎಂದು ಆತ್ಮೀಯವಾಗಿ ಭಾವಿಸಿ , ಪ್ರೀತಿಸುವ ಮನಸುಗಳಿಗೆ ಆತಂಕ ಉಂಟಾಗುವುದು ತೀರಾ ಸಹಜ. ಮನೋರಂಜನೆಯ ಮಾಧ್ಯಮಗಳೂ ಕೂಡ ಕನ್ನಡದ ಶುದ್ಧತೆಯನ್ನು ಉಳಿಸಿಕೊಳ್ಳುವತ್ತ ಅಷ್ಟಾಗಿ ಗಮನ ನೀಡದಿರುವುದು ನಿಜಕ್ಕೂ ದುಃಖಕರ ಸಂಗತಿಯೇ ಹೌದು. ಕನ್ನಡದ ಅಪಭ್ರಂಶಗಳನ್ನು ಹೊತ್ತ ಫಲಕಗಳು ರಸ್ತೆಯಲ್ಲಷ್ಟೇ ಅಲ್ಲದೆ, ಮಾಧ್ಯಮಗಳಲ್ಲೂ ಕಣ್ಣಿಗೆ ರಾಚುತ್ತಿರುತ್ತವೆ. ಭಾಷೆಯನ್ನು ಶುದ್ಧವಾಗಿ ಉಳಿಸಿಕೊಳ್ಳುವುದರತ್ತ ಯಾರಿಗೂ ಆಸಕ್ತಿ ಇಲ್ಲವಾದಲ್ಲಿ, ಅದು ಹೇಗೆ ಬೇಕೋ ಹಾಗೆ ಎಲ್ಲೆಲ್ಲೋ ಹಾದು, ಕಡೆಗೊಮ್ಮೆ ಮೂಲ ಭಾಷೆ ಕಣ್ಮರೆಯಾದರೂ ಅಚ್ಚರಿ ಇಲ್ಲ.

ಇಂತಹ ನಿರಾಶಾದಾಯಕ ವಾತಾವರಣದಲ್ಲಿ ಗದ್ಯವಲ್ಲ, ಹಳಗನ್ನಡ ಪದ್ಯಗಳನ್ನುಳ್ಳ ನಾಟಕ ರೂಪವನ್ನು ರಂಗದ ಮೇಲೆ ತರುವುದು ಸಾಹಸದ ಮಾತು ಎಂದು ಹೇಳಿಬಿಡಬಹುದಾದರೂ ಅಂತಹ ಒಂದು ಪ್ರಯತ್ನ ನಡೆಯಿತಲ್ಲ ಎಂಬುದೇ ಸಮಾಧಾನದ ವಿಷಯ ಖಂಡಿತಾ ಹೌದು. ಆ ಸಾಹಸವನ್ನು ಮಾಡಿದವರು, ಮೈಸೂರಿನ ಧ್ವನಿ ಫೌಂಡೇಷನ್ನಿನ ಉತ್ಸಾಹಿಗಳು. ಇದೇ ನವೆಂಬರ್ 15 ಮತ್ತು 16ರಂದು ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಈ ಪ್ರಯೋಗವು ನಡೆಯಿತು. ಇದರ ಮತ್ತೊಂದು ವಿಶೇಷತೆ ಎಂದರೆ ಇದು ಏಕವ್ಯಕ್ತಿ ಭಾವಾಭಿನಯವಾಗಿದ್ದುದು. ಇದಕ್ಕಾಗಿ ಅವರು ಆಯ್ಕೆ ಮಾಡಿಕೊಂಡದ್ದು ಕುವೆಂಪು ಅವರ ಖಂಡ ಕಾವ್ಯ ಚಿತ್ರಾಂಗದಾ. ಸರಳ ರಗಳೆಯಲ್ಲಿ 1936ರಷ್ಟು ಹಿಂದೆ ಇದನ್ನು ರಚಿಸಿದ ಕುವೆಂಪು ಅವರ ಮೂಲಕೃತಿಯನ್ನು ಒಪ್ಪ ಮಾಡಿ, ಸಂಗೀತ, ವಿನ್ಯಾಸ ಮತ್ತು ನಿರ್ದೇಶನವನ್ನು ಮಾಡಿದ್ದವರು ಶ್ರೀ ದಿಗ್ವಿಜಯ ಹೆಗ್ಗೋಡು. ಈ ಭಾವಾಭಿನಯಕ್ಕೆ ದೃಶ್ಯ ರೂಪ ಕೊಟ್ಟು, ತಮ್ಮ ಭಾವಾಭಿನಯದಿಂದ ಜೀವ ನೀಡಿ, ನ್ಯಾಯ ಒದಗಿಸಿದವರು ಡಾ. ಶ್ವೇತಾ ಮಡಪ್ಪಾಡಿ ಅವರು.

ಲೇಖಕಿ, ಗಾಯಕಿ, ಯುವ ಉದ್ಯಮಿಯಾಗಿ ಗುರುತಿಸಿಕೊಂಡಿರುವ ಶ್ವೇತಾ ಅವರು ಚೈತನ್ಯದ ಚಿಲುಮೆ ಎಂದರೆ ತಪ್ಪಾಗಲಾರದು. ಹಳಗನ್ನಡದಲ್ಲಿರುವ ಇಡೀ ರೂಪಕದ ಪದ್ಯಗಳನ್ನು ಕಂಠಪಾಠ ಮಾಡಿ, ಅಭಿನಯಿಸುವುದು ಚಿಕ್ಕ ವಿಷಯವಲ್ಲ. ಸ್ಪಷ್ಟ ಉಚ್ಚಾರಣೆ, ಭಾವ ತುಂಬಿದ ಅಭಿನಯ ಜೊತೆಗೆ ನೃತ್ಯದ ಪೂರಕ ಸಂಗತಿಗಳು ಇವೆಲ್ಲ ಸ್ವತಃ ನೃತ್ಯಗಾತಿಯಾಗಿರುವ ಈ ಸ್ಫುರದ್ರೂಪಿಯಲ್ಲಿ ಅತ್ಯಂತ ಸಹಜವಾಗಿ ಮೂಡಿಬಂದಿತು ಎನ್ನುವುದು ತೀರಾ ಸಾಮಾನ್ಯವಾದ ಹೇಳಿಕೆಯಾದೀತು. ಭಾವಾಭಿನಯದ ಈ ವಿಶಿಷ್ಟ ರಂಗ ಪ್ರದರ್ಶನದ ಕಥಾನಕವು ಮಹಾಭಾರತವೆಂಬ ಮಹಾಸಾಗರದಲ್ಲಿ ಬಿಂದು ಮಾತ್ರವಾಗಿ ಮೂಡಿರುವ ಒಂದು ಪಾತ್ರ-ಚಿತ್ರಾಂಗದೆಯನ್ನು ಕುರಿತದ್ದು. ಈಕೆಯನ್ನು ಕುರಿತು ಕವಿ ಲಕ್ಷ್ಮೀಶ, ನಂತರದಲ್ಲಿ ಗುರುದೇವ ರವೀಂದ್ರನಾಥ ಠಾಕೂರರು ಚಿತ್ರಿಸಿದ್ದಾರೆ. ಇವರಿಬ್ಬರ ಪ್ರಭಾವ ಸ್ವಲ್ಪ ಕಂಡುಬಂದರೂ , ಈಕೆ ಅವುಗಳಿಂದ ಮೂಡಿದ ಕಲಾಕೃತಿಯಾಗಿದ್ದಾಳೆ, ಗಣಿತ ಕರ್ಮವಾಗಿಲ್ಲ ಎಂದು ಕುವೆಂಪು ಅವರೇ ಹೇಳಿದ್ದಾರೆ. ಸಂಸ್ಕೃತಭೂಯಿಷ್ಠವಾದ ಹಳಗನ್ನಡದ ಪದ್ಯಗಳನ್ನು ಪ್ರದರ್ಶನದ ಪೂರ್ತಿ ಅಸ್ಖಲಿತವಾಗಿ ಹೇಳಿಸಿರುವ ನಿರ್ದೇಶಕರ ಧೈರ್ಯವನ್ನು ಮೆಚ್ಚಲೇಬೇಕು.

ಕುವೆಂಪು ಅವರ ಚಿತ್ರಾಂಗದಾ ಅನ್ನು ಓದಿದವರಿಗೆ, ರಂಗದ ಮೇಲೆ ಇದನ್ನು ತರುವ ಸವಾಲು ಎಂತಹುದೆಂಬುದರ ಅರಿವಾಗುತ್ತದೆ. ಪ್ರಕೃತಿ ವರ್ಣನೆ ಬಂತೆಂದರೆ ಕುವೆಂಪು ಮೈಮರೆಯುತ್ತಾರೆ. ಪ್ರಕೃತಿಯ ರಮಣೀಯತೆಯನ್ನು ಓದುಗ ಅನುಭವಿಸುವಂತೆ



ಮೈಸೂರಿನ ಕಲಾ ಮಂದಿರದ ಕಿರುರಂಗಮಂದಿರದಲ್ಲಿ ಗಾಯಕಿ ಡಾ.ಶ್ವೇತಾ ಮಡಪ್ಪಾಡಿ ಅವರು ಕುವೆಂಪು ವಿರಚಿತ 'ಚಿತ್ರಾಂಗದಾ' ಖಂಡ ಕಾವ್ಯವನ್ನು ಏಕವ್ಯಕ್ತಿ ಭಾವಾಭಿನಯದ ಮೂಲಕ ರಂಗದ ಮೇಲೆ ಪ್ರಸ್ತುತಪಡಿಸಿದರು.

> ಲೇಖಕಿ, ಗಾಯಕಿ, ಯುವ ಉದ್ಯಮಿಯಾಗಿ ಗುರುತಿಸಿಕೊಂಡಿರುವ ಶ್ವೇತಾ ಅವರು ಚೈತನ್ಯದ ಚಿಲುಮೆ ಎಂದರೆ ತಪ್ಪಾಗಲಾರದು. ಹಳಗನ್ನಡದಲ್ಲಿರುವ ಇಡೀ ರೂಪಕದ ಪದ್ಯಗಳನ್ನು ಕಂಠಪಾಠ ಮಾಡಿ, ಅಭಿನಯಿಸುವುದು ಚಿಕ್ಕ ವಿಷಯವಲ್ಲ. ಸ್ಪಷ್ಟ ಉಚ್ಚಾರಣೆ, ಭಾವ ತುಂಬಿದ ಅಭಿನಯ ಜೊತೆಗೆ ನೃತ್ಯದ ಪೂರಕ ಸಂಗತಿಗಳು ಇವೆಲ್ಲ ಸ್ವತಃ ನೃತ್ಯಗಾತಿಯಾಗಿರುವ ಈ ಸ್ಫುರದ್ರೂಪಿಯಲ್ಲಿ ಅತ್ಯಂತ ಸಹಜವಾಗಿ ಮೂಡಿಬಂದಿತು ಎನ್ನುವುದು ತೀರಾ ಸಾಮಾನ್ಯವಾದ ಹೇಳಿಕೆಯಾದೀತು.

ಮಾಡುವುದರಲ್ಲಿ ಅವರು ಸಿದ್ಧಹಸ್ತರು. ಅಷ್ಟೇ ಅಲ್ಲ, ಇಲ್ಲಿ ಬರುವ ಪಾತ್ರಗಳ ಮನದ ಹೊಯ್ದಾಟ, ಚಂಚಲತೆ, ದುಗುಡ ದುಮ್ಮಾನಗಳನ್ನೂ ಅವರು ಅಷ್ಟೇ ಸಮರ್ಥವಾಗಿ ಚಿತ್ರಿಸಿದ್ದಾರೆ. ಈ ಇಡೀ ಖಂಡ ಕಾವ್ಯಕ್ಕೆ ಎಲ್ಲಿಯೂ ಎರವಾಗದಂತೆ, ಅದರ ವಸ್ತು ಪೋಷಣೆಗೆ ಅಡ್ಡಿ ಬಾರದಂತೆ ಅದನ್ನು ಮಾರ್ಪಾಡು ಮಾಡಿಕೊಂಡಿರುವಲ್ಲಿ ನಿರ್ದೇಶಕರ ಜಾಣ್ಮೆ ಎದ್ದು ತೋರುತ್ತದೆ. ಈ ಪ್ರದರ್ಶನದ ಮತ್ತೊಂದು ಗಮನಿಸಲೇಬೇಕಾದ ಅಂಶ ಎಂದರೆ ಅತ್ಯಂತ ಸರಳ ಆದರೆ ಪ್ರಭಾವಿ ಆಗಿದ್ದ ರಂಗಸಜ್ಜಿಕೆ ಮತ್ತು ವೇಷಭೂಷಣ.

ಸ್ವಂತಿಕೆಯ, ಸ್ವಾಭಿಮಾನದ, ಗಂಡುಡುಗೆಯ ಹೆಣ್ಣು ಚಿತ್ರಾಂಗದೆ. ತಾಪಸಿಯ ವೇಷದಲ್ಲಿ ಕಾಡಿನಲ್ಲಿದ್ದ ಅರ್ಜುನನನ್ನು ಕಂಡು ಮೋಹಿತಳಾಗುತ್ತಾಳೆ. ಅವರೀರ್ವರ ಸಂಭಾಷಣೆ, ಅವಳನ್ನು ಮೊದಲಿಗೆ ತಿರಸ್ಕರಿಸಿದ ಪಾರ್ಥ, ಕೆರಳಿದ ಚಿತ್ರೆ, ಮದನನಿಂದ ಆಶ್ವಾಸನೆಯ ವರವನ್ನು ಪಡೆದ ಆಕೆ ಮತ್ತೆ ಫಲ್ಗುಣನ ಬಳಿಗೆ ಸಾರುವುದು, ಅವರೀರ್ವರ ಮಿಲನ, ತಿಂಗಳ ನಂತರ ಅನಿವಾರ್ಯವಾದ ಅಗಲಿಕೆ, ಆರು ಮಾಸಗಳ ನಂತರ ಬರುತ್ತೇನೆ ಎಂದು ವಾಗ್ದಾನ ನೀಡಿ ಬೆರಳಿಗೆ ಉಂಗುರ ತೊಡಿಸಿ ತೆರಳುವ ಅರ್ಜುನ, ವಿರಹದ ಬೇಗುದಿಯಲ್ಲಿ ಬೇಯುವ ಚಿತ್ರಾಂಗದೆ, ಅವಳ ಹೊಟ್ಟೆಯಲ್ಲಿ ಜನಿಸುವ ಬಭ್ರುವಾಹನ, ವಿರಾಗಿಣಿಯಂತೆ ಬದುಕು ಸಾಗಿಸಿದ ಅವಳ ಕಣ್ಣು ಬೆಳಕಾದ ಮಗನು ಅಪ್ಪನೊಡನೆ ಕಾದಾಡುವ ಪ್ರಸಂಗ ಬಂದಾಗ ಶ್ವೇತ ಬಾವುಟವನ್ನು ಹಿಡಿದು, ಶಾಂತಿಗಾಗಿ ಕೂಗುತ್ತಾ, ಅವರೀರ್ವರೂ ಅಪ್ಪ-ಮಗ ಎಂಬ ಪರಿಚಯ ಮಾಡಿಸಿ ಮತ್ತೊಮ್ಮೆ ಪ್ರಾಣಸಖನ ದರುಶನ ಮಾಡಿದ ಚಿತ್ರಾಂಗದೆ ಇಲ್ಲವಾಗುತ್ತಾಳೆ. ಹೃದಯಂಗಮವಾದ ಸನ್ನಿವೇಶ, ಸಂಭಾಷಣೆ, ಭಾವೋದ್ವೇಗ ಇವೆಲ್ಲವನ್ನೂ ಅತ್ಯಂತ ಪರಿಣಾಮಕಾರಿಯಾಗಿ ಅಭಿನಯದಲ್ಲಿ ತೋರಿದವರು ಶ್ವೇತಾ ಮಡಪ್ಪಾಡಿ. ವಿವಿಧ ಪಾತ್ರವನ್ನು ಮಾಡುತ್ತಿರುವಾಗ ಆಯಾ ಪಾತ್ರಗಳ ಒಳ ಹೊಕ್ಕು, ಒಂದರ್ಥದಲ್ಲಿ ಅವುಗಳಲ್ಲಿ ಪರಕಾಯ ಪ್ರವೇಶವನ್ನೇ ಮಾಡಬೇಕಾಗಿರುತ್ತದೆ. ಅವರ ಪ್ರತಿಭೆಯನ್ನು ಒರೆಗೆ ಹಚ್ಚುವಂತಹ ಸಂದರ್ಭದಲ್ಲಿ ಲೀಲಾಜಾಲವಾಗಿ ಭಾವಾಭಿವ್ಯಕ್ತಿಸಿ ಸೈ ಎನಿಸಿಕೊಂಡರು ಅವರು. ಕೆಲವೇ ವೇಷಭೂಷಣಗಳ ವ್ಯತ್ಯಾಸದಿಂದ (ಉದಾ-ತಲೆಯ ಧಿರಿಸು, ಮೇಲುಹೊದಿಕೆ ಇತ್ಯಾದಿ)ಸನ್ನಿವೇಶದ ಬದಲಾವಣೆಯನ್ನು ಸೊಗಸಾಗಿ ತರುತ್ತಿದ್ದ ಅವರ ಬುದ್ಧಿವಂತಿಕೆಯನ್ನು ಮೆಚ್ಚಲೇಬೇಕು. ಇದಕ್ಕಾಗಿ ಮತ್ತು ಕೆಲವು ನಡೆಗಳಿಗಾಗಿ ಅವರು ಹಲವು ನೃತ್ಯ ಪ್ರಕಾರಗಳ, ಯಕ್ಷಗಾನದ ನೆರವನ್ನು ಪಡೆದಿದ್ದರು. ಹಿನ್ನೆಲೆಯಲ್ಲಿ ಪೂರಕವಾಗಿದ್ದ ಸಂಗೀತವೂ ಸಹ ಅರ್ಥಗರ್ಭಿತವಾಗಿತ್ತು. ಚಿಕ್ಕ ರಂಗದ ತುಂಬ ಚಿತ್ರಾಂಗದೆ-ಅರ್ಜುನರೇ ತುಂಬಿ, ಪ್ರೇಕ್ಷಕರ ಮನದಾಳಕ್ಕೆ ಇಳಿಯುವಂತೆ ಮಾಡಿದ ಯಶಸ್ಸು ಶ್ವೇತಾ ಅವರಷ್ಟೇ ಅದರ ನಿರ್ದೇಶಕ ಮತ್ತು ಹಿನ್ನೆಲೆಯಲ್ಲಿ ನೆರವನ್ನು ನೀಡಿದ ಎಲ್ಲರಿಗೂ ಸಲ್ಲಬೇಕು. ನೋಟಕರ ಕಿವಿಗೆ ಇಂತಹ ಪದ್ಯಗಳ ಸಂಭಾಷಣೆಯು ಬೀಳುತ್ತಿದ್ದರೆ, ಅವುಗಳಲ್ಲಿ ಆಸಕ್ತಿ ಮೊಳೆತಾಗ, ಇಂತಹ ಪ್ರಯೋಗಗಳ ಸಾರ್ಥಕತೆ ಹೆಚ್ಚುತ್ತವೆ.

ಬೆಂಗಳೂರು 7.11 ಕೋಟಿ ದರೋಡೆ ಕೇಸ್ ಭೇದಿಸಿದ ಪೊಲೀಸರಿಗೆ 5 ಲಕ್ಷ ರೂ. ಬಹುಮಾನ ಘೋಷಣೆ



ಬೆಂಗಳೂರಲ್ಲಿ ಹಾಡಹಗಲೇ ದರೋಡೆ ಮಾಡಿದ್ದ 7.11 ಕೋಟಿಯಲ್ಲಿ 6.45 ಕೋಟಿ ಹಣವನ್ನು ಪೊಲೀಸರು ಆರೋಪಿಗಳಿಂದ ವಶಪಡಿಸಿಕೊಂಡಿರುವುದು.

ಬೆಂಗಳೂರು,ನ.22-ಸಿನಿಮೀಯ ಶೈಲಿಯಲ್ಲಿ 7.11 ಕೋಟಿ ರೂ. ದರೋಡೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ. ಆದಷ್ಟು ಬೇಗ ಈ ಪ್ರಕರಣವನ್ನು ಭೇದಿಸಿದ ಪೊಲೀಸರಿಗೆ 5 ಲಕ್ಷ ಬಹುಮಾನ ಘೋಷಣೆ ಮಾಡಲಾಗಿದೆ.

ಜೆ.ಪಿ.ನಗರದಲ್ಲಿ ಹಾಡಹಗಲೇ 7.11 ಕೋಟಿ ದರೋಡೆ ನಡೆದಿತ್ತು. ಅತ್ಯಂತ ಚುರುಕಿನಿಂದ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಸೆರೆಹಿಡಿದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯ ತಂಡಕ್ಕೆ ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ಬಹುಮಾನವನ್ನು ಘೋಷಿಸಿದ್ದಾರೆ.

ನ.19ರಂದು ಬೆಂಗಳೂರಿನ ಡೈರಿ ಸರ್ಕಲ್ ಬಳಿ ಇರುವ ಎಟಿಎಂಗಳಿಗೆ ಹಣ ತುಂಬಲು ಹೋಗುತ್ತಿದ್ದ ವಾಹನವನ್ನು ಮೊದಲಿಗೆ ದರೋಡೆಕೋರರು ಅಡ್ಡಗಟ್ಟಿದ್ದರು. ಆ ನಂತರ ನಾವು ಸರ್ಕಾರಿ ಅಧಿಕಾರಿಗಳು ಎಂದು ವ್ಯಾನ್‌ನಲ್ಲಿದ್ದವರನ್ನು ನಂಬಿಸಿ, ವಾಹನದಲ್ಲಿದ್ದ 7.11 ಕೋಟಿ ರೂಪಾಯಿ ಹಣವನ್ನು ದೋಚಿ ಅಲ್ಲಿಂದ ಕಾಲ್ಕಿತ್ತಿದ್ದರು.

48 ಗಂಟೆಯಲ್ಲಿ ಖದೀಮರ ಬಂಧನ: ಸಿಸಿ ಕ್ಯಾಮರಾ ದೃಶ್ಯಾವಳಿ ಪರಿಶೀಲಿಸಿ ತಾಂತ್ರಿಕ ಸಾಕ್ಷ್ಯಗಳ ಆಧಾರದ ಮೇಲೆ ಕಾರ್ಯಾಚರಣೆ ನಡೆಸಿ, ಕೇವಲ 48 ಗಂಟೆಯೊಳಗೆ ಪ್ರಕರಣದ ಜಾಡು ಹಿಡಿದು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದರು. ತನಿಖೆಯಲ್ಲಿ ಓರ್ವ ಪೊಲೀಸ್ ಕಾನ್‌ಸ್ಟೆಬಲ್ ಮತ್ತು ಕ್ಯಾಶ್ ಮ್ಯಾನೇಜ್‌ಮೆಂಟ್ ಸಂಸ್ಥೆಯ ಮಾಜಿ ಉದ್ಯೋಗಿ ಇದರ ಮಾಸ್ಟರ್‌ಮೈಂಡ್ ಎಂಬುದು ಬೆಳಕಿಗೆ ಬಂದಿತ್ತು ಶ್ರೀಮಂತರಾಗುವ ಹಂಬಲದಲ್ಲಿ ಈ ಕೃತ್ಯ ಎಸಗಿರುವುದಾಗಿ ಪೊಲೀಸರ ಮುಂದೆ ಆರೋಪಿಗಳು ಬಾಯ್ಬಿಟ್ಟಿದ್ದಾರೆ. ಸದ್ಯ ಬೆಂಗಳೂರು ಪೊಲೀಸರು ಬಂಧಿತರಿಂದ ಸುಮಾರು 6.45 ಕೋಟಿ ರೂ. ಹಣವನ್ನು ವಶಪಡಿಸಿಕೊಂಡಿದ್ದಾರೆ.

ಸಿಸಿ ಕ್ಯಾಮರಾ ಇಲ್ಲದ ರಸ್ತೆ ನಂಬರ್ ಪ್ಲೇಟ್ ಬದಲಿಸುತ್ತಿದ್ದ ಖದೀಮರು: 7 ಕೋಟಿಗೂ ಹೆಚ್ಚು ಹಣ ದರೋಡೆ ಮಾಡಿದ ಪ್ರಕರಣ ಬೇಧಿಸುವುದು ಸವಾಲಿನ ಕೆಲಸವಾಗಿತ್ತು. ಆರೋಪಿಗಳು ನಂಬರ್ ಪ್ಲೇಟ್ ಬದಲಾಯಿಸುತ್ತಿದ್ದರು. ಜೊತೆಗೆ ಸಿಸಿ ಕ್ಯಾಮರಾ ಇಲ್ಲದ ರಸ್ತೆಗಳನ್ನೇ ತಮ್ಮ ಕುತಂತ್ರಕ್ಕೆ ಬಳಸಿಕೊಂಡಿದ್ದರು. ಇದಷ್ಟೇ ಅಲ್ಲದೇ ಪೊಲೀಸರಿಂದ ತಪ್ಪಿಸಿಕೊಳ್ಳಲು ಹಲವು ತಾಂತ್ರಿಕತೆಯ ತಂತ್ರಗಳನ್ನು ಬಳಸಿಕೊಂಡಿದ್ದರು. ನಮ್ಮ ಪೊಲೀಸರು ಅತ್ಯಂತ ಚಾಣಾಕ್ಷತನದಿಂದ ಆರೋಪಿಗಳ ಬಂಧಿಸಿದ್ದಾರೆ ಎಂದು ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ಮಾಧ್ಯಮದ ಮುಂದೆ ಹೇಳಿದರು.

ಪೊಲೀಸರಿಗಿದ್ದ ಸವಾಲು: ಈ ದರೋಡೆ ನಿಖರವಾದ ಪೂರ್ವಯೋಜಿತವಾಗಿದ್ದು, ಪ್ರಾಥಮಿಕ ಸುಳಿವುಗಳು ತೀರಾ ಕಡಿಮೆ ಇದ್ದವು. ಅಪರಾಧಿಗಳು ಅನೇಕ ಸಿಸಿ ಕ್ಯಾಮರಾ ಕಾಣದ ಪ್ರದೇಶಗಳಲ್ಲಿ ಸಂಚರಿಸಿದ್ದರು. ಕಾರ್ಯಾಚರಣೆ ಸಮಯದಲ್ಲಿ ಮೊಬೈಲ್ ಫೋನ್‌ಗಳನ್ನು ಎಲ್ಲಿಯೂ ಬಳಸಿರಲಿಲ್ಲ. ತನಿಖೆ ದಿಕ್ಕು ತಪ್ಪಿಸಲು ಹಲವು ಭಾಷೆಗಳಲ್ಲಿ ಸಂವಹನ ನಡೆಸಲಾಗಿತ್ತು. ಅನೇಕ ವಾಹನಗಳನ್ನು ಬಳಸಲಾಗಿದ್ದು, ಅವುಗಳ ನಂಬರ್ ಪ್ಲೇಟ್‌ಗಳನ್ನು ಪದೇ ಪದೆ ಬದಲಾಯಿಸಲಾಗಿತ್ತು. ದರೋಡೆ ಮಾಡಿದ ನೋಟುಗಳು ಸರಣಿ ಸಂಖ್ಯೆಗಳ ದಾಖಲಾತಿ ಇರದ ಕಾರಣ ಗುರುತಿಸುವುದು ಕಷ್ಟವಾಗಿತ್ತು. ಅಧಿಕೃತವಲ್ಲದ ಮಾಧ್ಯಮ ವರದಿಗಳು ಆರಂಭಿಕ ತನಿಖೆಯ ಸಂವೇದನಾಶೀಲ ಹಂತಗಳಿಗೆ ಅಡಚಣೆ ತಂದವು. ಈ ಎಲ್ಲಾ ಸವಾಲುಗಳ ನಡುವೆಯೂ ತಾಂತ್ರಿಕ ವಿಶ್ಲೇಷಣೆ ಮತ್ತು ತಂಡದ ಸಂಯೋಜಿತ ಕಾರ್ಯದಿಂದ ಪ್ರಕರಣವನ್ನು ತ್ವರಿತವಾಗಿ ಪತ್ತೆ ಮಾಡಲಾಯಿತು.

ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆಯನ್ನು ಕೈಗೊಂಡಿದ್ದರು. ದಕ್ಷಿಣ ವಿಭಾಗದ 11 ಪಿಐಗಳು ಮತ್ತು ಇಬ್ಬರು ಎಸಿಪಿಗಳೊಂದಿಗೆ, ಸಿಸಿಬಿ ವಿಭಾಗದ 6 ಪಿಐಗಳು ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸಿದರು. ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರ ಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಲ್ಲೂ ಸುಳಿವುಗಳನ್ನು ಹಿಂಬಾಲಿಸಲಾಯಿತು (ಕೆಲವು ತಂಡಗಳು ಗೋವಾ ತನಕ ವ್ಯಾಪ್ತಿಯನ್ನು ವಿಸ್ತರಿಸಿದವು). 30ಕ್ಕಿಂತ ಹೆಚ್ಚು ಮಂದಿಯನ್ನು ವಿಚಾರಣೆ ಮಾಡಲಾಗಿತ್ತು. ಸಿಸಿ ಕ್ಯಾಮರಾದಲ್ಲಿ ದಾಖಲಾಗಿದ್ದ ವಾಹನ ಚಲನ -ವಲನ ಮತ್ತು ಸ್ಥಳೀಯ ಗುಪ್ತಚರ ಮಾಹಿತಿ ನಿರಂತರವಾಗಿ ವಿಶ್ಲೇಷಿಸಲಾಯಿತು. ಕೇವಲ 24 ಗಂಟೆಯಲ್ಲಿಯೇ ಆರೋಪಿಗಳು ಮತ್ತು ಬಳಸಿದ ವಾಹನಗಳ ಬಗ್ಗೆ ಪ್ರಮುಖ ಸುಳಿವುಗಳು ಲಭಿಸಿದ್ದವು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹೈದರಾಬಾದ್‌ನಲ್ಲಿ ಮತ್ತೆ ಮೂವರ ಬಂಧನ

ಒಟ್ಟು 6.45 ಕೋಟಿ ವಶ; ದರೋಡೆ ಪ್ಲಾನ್ ಬಹಿರಂಗ

ಬೆಂಗಳೂರು: ಹಾಡಹಗಲೇ ಬೆಂಗಳೂರಿನಲ್ಲಿ ನಡೆದ 7.11 ಕೋಟಿ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈದರಾಬಾದ್‌ನಲ್ಲಿ ಮತ್ತೆ ಮೂವರನ್ನು ಬಂಧಿಸಲಾಗಿದ್ದು, ಈ ಮೂಲಕ ಇದುವರೆಗೂ ಒಟ್ಟು ಆರು ಆರೋಪಿಗಳ ಬಂಧನವಾಗಿದೆ. ಹೈದರಾಬಾದ್‌ನ ಲಾಡ್ಜ್ ಒಂದರಲ್ಲಿ ಆರೋಪಿಗಳು ತಲೆಮರೆಸಿಕೊಂಡಿದ್ದರು. ಬಂಧಿತ ಆರೋಪಿಗಳಿಂದ ಒಟ್ಟು 70 ಲಕ್ಷರೂ. ವಶಪಡಿಸಿಕೊಳ್ಳಲಾಗಿದೆ. ಈ ಮೂಲಕ ಪ್ರಕರಣದಲ್ಲಿ ಇದುವರೆಗೂ 6.45 ಕೋಟಿ ಹಣ ಜಪ್ತಿ ಮಾಡಿದಂತಾಗಿದೆ.

ಸಿದ್ದಾಪುರ ಠಾಣೆ ಪೊಲೀಸರು ಮೂವರನ್ನು ಬಂಧಿಸಿದ್ದು, ಹೈದರಾಬಾದ್‌ನಿಂದ ಬೆಂಗಳೂರಿಗೆ ಕರೆತರುತ್ತಿದ್ದಾರೆ. ಒಟ್ಟು ಆರು ಆರೋಪಿಗಳ ಬಂಧನವಾಗಿದ್ದು, ಇನ್ನು ಇಬ್ಬರು ಆರೋಪಿಗಳಿಗಾಗಿ ಪೊಲೀಸರು ಶೋಧ ಕಾರ್ಯ ನಡೆಸುತ್ತಿದ್ದಾರೆ. ಇನ್ನು ಪ್ರಕರಣದಲ್ಲಿ 67 ಲಕ್ಷ ಹಣ ರಿಕವರಿ ಆಗಬೇಕಿದೆ. ನವೀನ್, ನೆಲ್ಸನ್, ಹಾಗೂ ರವಿ ಹೈದರಾಬಾದ್‌ನಲ್ಲಿ ಬಂಧನವಾದ ಆರೋಪಿಗಳಾಗಿದ್ದಾರೆ.

7.11 ಕೋಟಿ ದರೋಡೆ ಸ್ಕೆಚ್: ಸಿಎಂಎಸ್ ಕಂಪೆನಿಯಲ್ಲಿರುವ ಗೋಪಿ ಎಂಬಾತ ಬ್ಯಾಂಕ್‌ನಿಂದ ಎಟಿಎಂಗಳಿಗೆ ಹಣ ಸಾಗಿಸಲು ವೆಹಿಕಲ್ ಅಲರ್ಟ್ ಮಾಡುವ ಕೆಲಸವನ್ನು ಮಾಡಿಕೊಂಡಿದ್ದ. ಈ ಹಿಂದೆ ಸಿಎಂಎಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಜೇವಿಯರ್‌ನ ಆತ್ಮೀಯ ಸ್ನೇಹಿತ. ಪ್ರತೀ ಬಾರಿಯೂ ಒಟ್ಟಿಗೆ ಸೇರಿದಾಗ ಜೇವಿಯರ್ ಹಾಗೂ ಗೋಪಿ ಕೋಟಿ ಕೋಟಿ ಹಣದ ಬಗ್ಗೆ ಚರ್ಚೆ ಮಾಡುತ್ತಿದ್ದರು. ಹೀಗಿದ್ದಾಗ ಜೇವಿಯರ್ ಕಾನ್‌ಸ್ಟೇಬಲ್ ಅಣ್ಣಪ್ಪ ನಾಯಕ ಬಳಿ ಸಿಎಂಎಸ್ ವಾಹನವನ್ನು ಹೈಜಾಕ್ ಮಾಡಿ ಹಣ ದರೋಡೆ ಮಾಡುವ ಬಗ್ಗೆ ಹೇಳಿಕೊಂಡಿದ್ದಾನೆ. ಅಣ್ಣಪ್ಪ ನಾಯಕ 15 ದಿನಗಳ ಕಾಲ ಸ್ಕೆಚ್ ಹಾಕಿ, ನೀಲಿ ನಕ್ಷೆ ರೆಡಿ ಮಾಡಿದ್ದ. ಅದರಂತೆ ಬಾಣಸವಾಡಿಯಲ್ಲಿ ಇನ್ನೋವಾ ಕಾರನ್ನು ಬಾಡಿಗೆಗೆ ಪಡೆಯಲಾಗುತ್ತದೆ. ವಿವಿಧ ನಂಬರ್ ಪ್ಲೇಟ್‌ಗಳನ್ನು ಅರೆಂಜ್ ಮಾಡಿಕೊಂಡು ಒಂದು ಟೀಂ ಸೆಟ್ ಆಗುತ್ತದೆ.

ಸಿಎಂಎಸ್ ವಾಹನದಲ್ಲಿ ಪ್ರತೀ ವಾರದ ಬುಧವಾರ, ಗುರುವಾರ 5 ಕೋಟಿ ಹಣ ಸಾಗಿಸಲಾಗುತ್ತದೆ ಎಂಬ ಮಾಹಿತಿಯನ್ನು ಗೋಪಿ ಕೊಟ್ಟಿದ್ದ. ಅದರಂತೆ ಕಳೆದ ಬುಧವಾರ ರವಿ, ರಾಕೇಶ, ನವೀನ ಸೇರಿ ಒಟ್ಟು 5 ಮಂದಿ ದರೋಡೆಗೆ ರೆಡಿಯಾಗುತ್ತಾರೆ. ಅದರಂತೆ ಸಿಎಂಎಸ್ ವಾಹನವನ್ನು ತಡೆದು ಆರ್‌ಬಿಐ ಅಧಿಕಾರಿಗಳೆಂದು ನಂಬಿಸಿ 7.11 ಕೋಟಿ ದರೋಡೆ ಮಾಡುತ್ತಾರೆ.

ಆರೋಪಿಗಳಲ್ಲಿ ರವಿ ಹಾಗೂ ರಾಕೇಶ್ ನಿವೃತ್ತ ಸೇನಾಧಿಕಾರಿಗಳ ಮಕ್ಕಳು. ಇವರು ಆಂಧ್ರದ ಚಿತ್ರಪಲ್ಲಿಯವರಾಗಿದ್ದು, ಚಿತ್ರಪಲ್ಲಿಯ ರವಿ ಮನೆಯಲ್ಲಿ ದರೋಡೆ ಮಾಡಿದ ಹಣವನ್ನು ಇಡಲು ಪ್ಲ್ಯಾನ್ ರೂಪಿಸಲಾಗಿತ್ತು. ಸ್ಕೈಪ್ ಕಾಲ್‌ನಲ್ಲೇ ಅಣ್ಣಪ್ಪ ನಾಯಕ ನನ್ನು ರವಿ ಸಂಪರ್ಕಿಸುತ್ತಿದ್ದ. ದರೋಡೆ ನಂತರ ಇವರು ಹೊಸಕೋಟೆ ಟೋಲ್ ಮೂಲಕ ಹೋಗದೆ ಬೂದಿಗೆರೆ ಕ್ರಾಸ್ ಮೂಲಕ ಆಂಧ್ರಕ್ಕೆ ಪಲಾಯನ ಮಾಡಿದ್ದಾರೆ. ಆದರೆ, ಪೊಲೀಸರ ಭಯದಲ್ಲಿ ಚಿತ್ತೂರು ಬಳಿಯೇ ಕಾರನ್ನು ಬಿಟ್ಟು ಪರಾರಿಯಾಗಿದ್ದಾರೆ. ಅಣ್ಣಪ್ಪ ನಾಯಕನ ಪ್ಲಾನ್‌ನಂತೆ ರವಿ ಪೊಲೀಸರ ಹಾದಿ ತಪ್ಪಿಸಲು ಚೆನ್ನೈನ ಮೆಟ್ರೋ ನಿಲ್ದಾಣದ ಬಳಿ ಮೊಬೈಲ್ ಸ್ವಿಚ್ ಆಫ್ ಮಾಡಿ, ಅಲ್ಲಿಂದ ರಾಕೇಶನ ಜೊತೆಗೆ ಆಂಧ್ರಕ್ಕೆ ಪರಾರಿಯಾಗಿದ್ದ. ಅಲ್ಲದೆ, ಚಿತ್ತೂರಿನ ಕಾಡಿನಲ್ಲಿ ಖಾಲಿ ಟ್ರಂಕನ್ನು ಎಸೆದು ರವಿ ಟೀಂ ಪರಾರಿಯಾಗಿತ್ತು. ಸಿದ್ದಾಪುರ ಠಾಣೆ ಪೊಲೀಸರು ಮೊದಲಿಗೆ ಬಂಧಿಸಲ್ಪಟ್ಟ ಪೊಲೀಸ್ ಪೇದೆ ಅಣ್ಣಪ್ಪ ನಾಯಕ, ಜೇವಿಯರ್ ಹಾಗೂ ಗೋಪಿಯನ್ನು ಎಸಿಎಂಎಂ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಲಯವು ಡಿಸೆಂಬರ್ 1ರವರೆಗೆ ಆರೋಪಿಗಳಿಗೆ ಪೊಲೀಸ್ ಕಸ್ಟಡಿ ವಿಧಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ವಚನ ಭ್ರಷ್ಟರಾಗದೆ ಡಿ.ಕೆ.ಶಿವಕುಮಾರ್‌ಗೆ ಅಧಿಕಾರ ಹಸ್ತಾಂತರ ಮಾಡಿ

ಸಿಎಂ ಸಿದ್ದರಾಮಯ್ಯಗೆ ವಿಧಾನ ಪರಿಷತ್ ಸದಸ್ಯ ವಿಶ್ವನಾಥ್ ಸಲಹೆ

- ಹಾಲು ಕೆಟ್ಟರೂ, ಹಾಲು ಮತ ಕೆಡುವುದಿಲ್ಲ!
- ಕುರುಬ ಸಮುದಾಯದ ಹೆಸರು ಹಾಳು ಮಾಡುತ್ತಿದ್ದಾರೆ
- ಅಂದು ಆಣೆ ಮಾಡಿ, ಇಂದು ಉಲ್ಟಾ ಹೊಡೆಯುತ್ತಿದ್ದಾರೆ
- ಇಷ್ಟೆಲ್ಲಾ ಆದರೂ ಹೈಕಮಾಂಡ್ ನಡೆ ಮಾತ್ರ ನಿಗೂಢ



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶನಿವಾರ ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ನ.22(ಬಿಎಲ್ ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಚನ ಭ್ರಷ್ಟರಾಗದೆ ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಹಸ್ತಾಂತರ ಮಾಡಬೇಕು ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಸಲಹೆ ನೀಡಿದರು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹೆಚ್.ಡಿ.ಕುಮಾರಸ್ವಾಮಿ ಅವರು ಬಿ.ಎಸ್.ಯಡಿಯೂರಪ್ಪ ಅವರಿಗೆ ಅಧಿಕಾರ ಹಸ್ತಾಂತರ ಮಾಡದೆ ಏನಾದರೂ ಎಂಬ ಸ್ಥಿತಿಯನ್ನು ಅರಿತು ಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಹಾಲು ಮತದವರು ಮಾತು ತಪ್ಪಲ್ಲ: ಹಾಲು ಕೆಟ್ಟರೂ, ಹಾಲು ಮತ ಕೆಡುವುದಿಲ್ಲ ಎಂಬ ಮಾತಿದೆ ನಾವು ಹಾಲು ಮತದವರು, ಎಂದೂ ಕೊಟ್ಟ ಮಾತು ತಪ್ಪುವುದಿಲ್ಲ. ಆದರೆ ಸಿದ್ದರಾಮಯ್ಯ ಅವರು ನಮ್ಮ ಕುಲದ ಮಹತ್ವ ತಿಳಿಯದೆ ಕುರುಬ ಸಮಾಜದ ಹೆಸರು ಕೆಡಿಸುತ್ತಿದ್ದಾರೆ ಎಂದು ವಿಶ್ವನಾಥ್ ಆಕ್ರೋಶ ವ್ಯಕ್ತಪಡಿಸಿದರು.

ಧಣಿ ಮಂಡಲದ ನಾಡು ನಮ್ಮದು, ನಿನಗೆ ಆಹಾರ ಆಗುತ್ತೇನೆ ಎಂದು ವ್ಯಾಘ್ರನಿಗೆ ಹಸು ಮಾತು ಕೊಟ್ಟು ನಡೆದುಕೊಂಡ ನಾಡಿದು. ಇಂತಹ ನಾಡಿನಲ್ಲಿ ಹುಟ್ಟಿರುವ ಸಿದ್ದರಾಮಯ್ಯ ಅವರು ಕೊಟ್ಟ ಮಾತಿನಂತೆ ನಡೆದುಕೊಳ್ಳಬೇಕು ಎಂದು ಹೇಳಿದರು.

ವಚನ ಭ್ರಷ್ಟರಾಗುತ್ತಿದ್ದಾರೆ : ದೆಹಲಿಯಲ್ಲಿ ಅಂದು ಹೈಕಮಾಂಡ್ ಸಮ್ಮುಖದಲ್ಲಿ ನಡೆದ ಅಧಿಕಾರ ಹಸ್ತಾಂತರ ಒಪ್ಪಂದದ ಸಮಯದಲ್ಲಿ ಡಿ.ಕೆ.ಶಿವಕುಮಾರ್ ಹಾಗೂ ಡಿ.ಕೆ.ಸುರೇಶ್ ತಲೆ ಮೇಲೆ ಕೈ ಇಟ್ಟ ಸಿದ್ದರಾಮಯ್ಯ, ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತೇನೆ ಎಂದು ಆಣೆ ಮಾಡಿದ್ದರು. ಎರಡೂವರೆ ವರ್ಷವಾದ ತಕ್ಷಣ ನಿಮಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡುವೆ ಎಂದು ವಚನ ನೀಡಿದ್ದರು. ಆದರೆ ಈಗ ವಚನ ಭ್ರಷ್ಟರಾಗುತ್ತಿದ್ದಾರೆ ಎಂದು ಕಿಡಿಕಾರಿದರು.

ಡಿಕೆಶಿ ರಾಜಕೀಯ ಜೆಂಟಲ್‌ಮನ್ : ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲು, 136 ಸ್ಥಾನ ಗೆಲ್ಲಲು ಡಿ.ಕೆ.ಶಿವಕುಮಾರ್ ಶ್ರಮವಿದೆ. ಈ ಹಿನ್ನೆಲೆ ತಮಗೆ ಸಿಗಬೇಕಾದ ನ್ಯಾಯ ಕೇಳುತ್ತಿದ್ದಾರೆ. ಆದರೂ ಡಿ.ಕೆ.ಶಿವಕುಮಾರ್ ಬಹಿರಂಗವಾಗಿ ಅಸಮಾಧಾನ ಹೊರ ಹಾಕದೆ, ತಾಳ್ಮೆ ವಹಿಸಿದ್ದಾರೆ. ಈ ಮೂಲಕ ರಾಜಕೀಯ ಜೆಂಟಲ್‌ಮನ್ ಆಗಿದ್ದಾರೆ ಎಂದು ವಿಶ್ವನಾಥ್ ಅಭಿಪ್ರಾಯಪಟ್ಟರು.

ಕಾಂಗ್ರೆಸ್ ಭೂಗತ ಮಾಡುತ್ತಿದ್ದಾರೆ : ಹೆಚ್.ಡಿ.ದೇವೇಗೌಡರು ಸಿದ್ದರಾಮಯ್ಯ ಅವರನ್ನು ಜೆಡಿಎಸ್‌ನಿಂದ ವಜಾ ಮಾಡಿದಾಗ, ಕಾಂಗ್ರೆಸ್ ಪಕ್ಷಕ್ಕೆ ಕರೆತಂದು ಆಶ್ರಯ ನೀಡಿದ್ದೆವು. ಆದರೆ ತಾವು ಬೆಳೆದು ಬಂದ ದಾರಿಯನ್ನು ಸಿದ್ದರಾಮಯ್ಯ ಮರೆಯುತ್ತಿದ್ದಾರೆ. ಈಗ ಇದೇ ಸಿದ್ದರಾಮಯ್ಯ ಕಾಂಗ್ರೆಸ್ ಪಕ್ಷವನ್ನು ಭೂಗತ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ರಾಜ್ಯದಲ್ಲಿ ಇಷ್ಟೆಲ್ಲಾ ಬೆಳವಣಿಗೆ ನಡೆಯುತ್ತಿದ್ದರೂ ಹೈಕಮಾಂಡ್ ಮಾತ್ರ ಮೌನ ವಹಿಸಿದೆ. ಈಗಲಾದರೂ ಈ ಗೊಂದಲದ ಬಗ್ಗೆ ಹೈಕಮಾಂಡ್ ತನ್ನ ನಿಲುವು ಸ್ಪಷ್ಟಪಡಿಸಬೇಕು ಎಂದು ತಿಳಿಸಿದರು.

ಸಿದ್ದರಾಮಯ್ಯ ಅವರಿಲ್ಲದಿದ್ದರೆ ಕಾಂಗ್ರೆಸ್ ಉಳಿಯಲ್ಲ ಎಂದು ಶಾಸಕ ರಾಜಣ್ಣ ಹೇಳುತ್ತಾರೆ. ಇಂತಹ ಹೇಳಿಕೆ ನೀಡುವ ಮೂಲಕ ಕಾಂಗ್ರೆಸ್ ಪಕ್ಷದ ಶಕ್ತಿ ಕುಂದಿಸುತ್ತಿದ್ದಾರೆ. ಸಿದ್ದರಾಮಯ್ಯ ಬಗ್ಗೆ ಇಂತಹ ಮಾತುಗಳನ್ನು ಹೇಳಿ ಹುರಿದುಂಬಿಸುತ್ತಿದ್ದಾರೆ. ಒಟ್ಟಾರೆ ಸಿದ್ದರಾಮಯ್ಯ ಕಾಂಗ್ರೆಸ್ ಪಕ್ಷ ನಾಶ ಮಾಡಿಯೇ ಹೋಗುತ್ತಾರೆ ನೋಡಿ ಎಂದು ಎಚ್ಚರಿಸಿದರು.

ಹೈಕಮಾಂಡ್ ಅಸಹಾಯಕ : ಮುಖ್ಯಮಂತ್ರಿ ಸ್ಥಾನಕ್ಕೆ ವೀರಪ್ಪ ಮೊಯಿಲಿ ಹಾಗೂ ಎಸ್.ಎಂ.ಕೃಷ್ಣ ಅವರ ನಡುವೆ ಪೈಪೋಟಿ ನಡೆದಾಗ ಕಾಂಗ್ರೆಸ್ ಹೈಕಮಾಂಡ್ ಪ್ರತಿನಿಧಿಗಳು ಬೆಂಗಳೂರಿಗೆ ಬಂದು ಲಕೋಟೆ ಹರಿದು ವೀರಪ್ಪ ಮೊಯಿಲಿ ಮುಖ್ಯಮಂತ್ರಿ ಎಂದು ಘೋಷಿಸಿದರು. ಅಂತಹ ಹೈಕಮಾಂಡ್ ವರ್ಚಸ್ಸು ಇಂದು ಮರೆಯಾಗಿದೆ. ಈ ಕಾರಣದಿಂದಲೇ ಇಷ್ಟೆಲ್ಲಾ ನಡೆದರೂ ಹೈಕಮಾಂಡ್ ಗೆ ಏನೂ ಮಾಡದ ಅಸಹಾಯಕ ಪರಿಸ್ಥಿತಿ ಎದುರಾಗಿದೆ ಎಂದು ವಿಶ್ವನಾಥ್ ಅಸಮಾಧಾನ ವ್ಯಕ್ತಪಡಿಸಿದರು.

ಬಿಯರ್, ಬ್ರಾಂದಿ ದುಬಾರಿ ಹಾಗಾಗಿ 30 ರೂಪಾಯಿಗೆ ಗಾಂಜಾ ಸೇವಿಸುತ್ತಿದ್ದಾರೆ

ಬಿಯರ್, ಬ್ರಾಂದಿ ಸೇರಿ ಹಲವು ಮದ್ಯದ ಬೆಲೆ ದುಬಾರಿಯಾಗಿರುವ ಕಾರಣ ಯುವಕರು 30 ರೂಪಾಯಿಗೆ ಗಾಂಜಾ ಖರೀದಿಸಿ ಜೀವನವನ್ನೆ ಹಾಳು ಮಾಡಿಕೊಳ್ಳುತ್ತಿದ್ದಾರೆ ಎಂದು ವಿಶ್ವನಾಥ್ ಆತಂಕ ವ್ಯಕ್ತಪಡಿಸಿದರು.

ಇಂದು ಬಿಯರ್ ಬೆಲೆ 250 ರೂಪಾಯಿ ಆಗಿದೆ. ಉಳಿದ ಮದ್ಯದ ಬೆಲೆ ಕೂಡ ದುಬಾರಿಯಾಗಿದೆ ಗ್ಯಾರಂಟಿ ಯೋಜನೆಗೆ ಹಣ ಸರಿದೂಗಿಸಲು ಮದ್ಯ ಸೇರಿ ಎಲ್ಲಾ ಬೆಲೆ ದುಬಾರಿ ಮಾಡಿದ್ದಾರೆ. ಇಷ್ಟಾದರೂ ರಾಜ್ಯದ ಆರ್ಥಿಕ ಪರಿಸ್ಥಿತಿ ಹೀನಾಯವಾಗಿದೆ ಎಂದು ಆರೋಪಿಸಿದರು.

ದುಡಿಯುವ ಕೈಗೆ ಕೆಲಸ ಕೊಡದೆ, ಬಿಟ್ಟಿ ಗ್ಯಾರಂಟಿ ಕೊಟ್ಟ ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಡಿಸಿದ್ದಾರೆ. ಇದರಿಂದ ಅಗತ್ಯ ವಸ್ತುಗಳ ಬೆಲೆ ದುಬಾರಿಯಾಗಿ ಜನರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ವಿಶ್ವನಾಥ್ ಆಪಾದಿಸಿದರು.

ಸಿದ್ದರಾಮಯ್ಯ ಗುಂಡಿ ಬಿದ್ದ ರಾಜ್ಯದ ಭಂಡ ನಾಯಕ

ಮುಖ್ಯಮಂತ್ರಿ ಸಿದ್ದರಾಮಯ್ಯ ಗುಂಡಿ ಬಿದ್ದ ರಾಜ್ಯದ ಭಂಡ ನಾಯಕ ಎಂದು ವಿಶ್ವನಾಥ್ ಜರಿದರು. ಕರ್ನಾಟಕದ ಮೇಲೆ 7,500 ಕೋಟಿ ಸಾಲದ ಹೊರೆ ಇದ್ದು, ಶೇಕಡ 90 ರಷ್ಟು ಸಾಲವನ್ನು ಸಿದ್ದರಾಮಯ್ಯ ಅವರೇ ಮಾಡಿದ್ದಾರೆ. ಕೇವಲ 20 ಕಿಲೋ ಮೀಟರ್‌ಗೂ ಹೆಲಿಕಾಪ್ಟರ್‌ನಲ್ಲಿ ಪ್ರಯಾಣ ಮಾಡುತ್ತಾ, ಜನರ ತೆರಿಗೆ ಹಣವನ್ನು ದುಂದು ವೆಚ್ಚ ಮಾಡುತ್ತಿದ್ದಾರೆ. ಈ ಮೂಲಕ ರಾಜ್ಯದ ಆರ್ಥಿಕ ಸ್ಥಿತಿಯನ್ನು ಪಾತಾಳಕ್ಕೆ ಇಳಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಧಿಕಾರ ಹಸ್ತಾಂತರದ ಇವರ ರಾಜಕೀಯ ಮೇಲಾಟದಿಂದ ರಾಜ್ಯದ ಆಡಳಿತ ಕುಸಿದಿದೆ. ಅಭಿವೃದ್ಧಿ ಕಾರ್ಯಗಳು ಮರೆಯಾಗಿವೆ ಎಂದು ಆಪಾದಿಸಿದರು.

ಅಧಿಕಾರ ಹಸ್ತಾಂತರ ಆಗದಿದ್ದರೆ ಸರ್ಕಾರದ ಪರಿಸ್ಥಿತಿ ಏನಾಗಬಹುದು ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ವಿಶ್ವನಾಥ್, ಪ್ರತಿ ದಿನ ಸರ್ಕಸ್ ನಡೆಯುತ್ತಿದೆ. ಇವರ ಆಟ ನೋಡಿ ರಾಜ್ಯದ ಜನ ಒಂದು ರೀತಿ ಮಜಾ ತೆಗೆದುಕೊಳ್ಳುತ್ತಿದ್ದಾರೆ. ಮುಂದೇನಾಗುತ್ತದೆ ಎಂದು ಕಾದು ನೋಡೋಣ ಎಂದು ಹೇಳಿದರು.

ದೇವರಾಜ ಅರಸ್ ಅವರಂತೆ ಆಡಳಿತ ನೀಡಿದ್ದೇನೆ ಎಂದು ಸಿದ್ದರಾಮಯ್ಯ ಹೇಳುತ್ತಾರೆ. ಆದರೆ ಸಿದ್ದರಾಮಯ್ಯ ಅವರು ದೇವರಾಜ ಅರಸ್ ಅವರ ಕಾಲಿನ ಧೂಳಿಗೂ ಸಮಾನರಲ್ಲ ಎಂದರು.

ನಾನೇ ಸಿಎಂ ಆಗಿ ಮುಂದುವರೆಯುತ್ತೇನೆ. ಇನ್ನು ಎರಡು ಬಜೆಟ್ ಮಂಡಿಸುತ್ತೇನೆ. ನೂರು ವರ್ಷ ಬದುಕುತ್ತೇನೆ ಎಂಬ ದುರಹಂಕಾರದ ಮಾತುಗಳನ್ನು ಸಿದ್ದರಾಮಯ್ಯ ಬಿಡಬೇಕು ಎಂದು ವಿಶ್ವನಾಥ್ ಸಲಹೆ ನೀಡಿದರು.

ಕಾರು ಡಿಕ್ಕಿ: ಪಾದಚಾರಿ ಸಾವು

ಮೈಸೂರು, ನ.22– ಕಾರು ಡಿಕ್ಕಿ ಹೊಡೆದು ಪಾದಚಾರಿ ಮೃತಪಟ್ಟಿರುವ ಘಟನೆ ಮೈಸೂರಿನ ರಿಂಗ್ ರಸ್ತೆಯಲ್ಲಿ ಸಂಭವಿಸಿದೆ.

ನಗರದ ಬನ್ನಿಮಂಟಪದಲ್ಲಿನ ಹನುಮಂತನಗರ ನಿವಾಸಿ ಮೊಹಮ್ಮದ್ ನದೀಂ(34) ಅಪಘಾತದಲ್ಲಿ ಮೃತಪಟ್ಟವರು. ಇವರು ನ.19ರಂದು ರಾತ್ರಿ 11 ಗಂಟೆ ವೇಳೆಯಲ್ಲಿ ರಿಂಗ್ ರಸ್ತೆಯಲ್ಲಿ ನಾರಾಯಣ ಹೃದಯಾಲಯ (ಎನ್‌ಹೆಚ್) ಆಸ್ಪತ್ರೆಗೆ ಕಡೆಗೆ ಹೋಗುತ್ತಿದ್ದಾಗ ದೇವೇಗೌಡ ವೃತ್ತದ ಕಡೆಯಿಂದ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದು, ಪರಾರಿಯಾಗಿತ್ತು.

ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಮೊಹಮ್ಮದ್ ನದೀಂ ಅವರನ್ನು ತಕ್ಷಣ ಎನ್.ಹೆಚ್. ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ತಡರಾತ್ರಿ ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತಪಟ್ಟಿದ್ದಾರೆ. ಅಪಘಾತವೆಸಗಿದ ಕಾರಿನ ನೋಂದಣಿ ಸಂಖ್ಯೆಯನ್ನು ಸ್ಥಳೀಯರು ಗುರುತು ಹಾಕಿಕೊಂಡಿದ್ದು, ಇದರ ಆಧಾರದಲ್ಲಿ ಮೃತರ ಸಹೋದರ ಎನ್.ಆರ್.ಸಂಚಾರ ಠಾಣೆಗೆ ದೂರು ನೀಡಿದ್ದಾರೆ. ಅಪಘಾತವೆಸಗಿದ ಕಾರು ಪತ್ತೆಗೆ ಪೊಲೀಸರು ಕ್ರಮ ವಹಿಸಿದ್ದಾರೆ.

ಬೈಕ್‌ಗೆ ಡಿಕ್ಕಿ ಹೊಡೆದು ಆಟೋ ಪಲ್ಟಿ: ಇಂಜಿನಿಯರಿಂಗ್ ವಿದ್ಯಾರ್ಥಿನಿಗೆ ಗಾಯ

ಮೈಸೂರು, ನ.22– ಬೈಕ್‌ಗೆ ಡಿಕ್ಕಿ ಹೊಡೆದು ನಿಯಂತ್ರಣ ಕಳೆದುಕೊಂಡ ಆಟೋ, ಪಲ್ಟಿಯಾಗಿದ್ದರಿಂದ ಇಂಜಿನಿಯರಿಂಗ್ ವಿದ್ಯಾರ್ಥಿನಿ ತೀವ್ರವಾಗಿ ಗಾಯಗೊಂಡಿರುವ ಘಟನೆ ಮೈಸೂರಿನ ಎನ್.ಆರ್.ಮೊಹಲ್ಲಾದಲ್ಲಿ ಸಂಭವಿಸಿದೆ.

ಮೊದಲನೇ ವರ್ಷದ ಇಂಜಿನಿಯರಿಂಗ್ ವಿದ್ಯಾರ್ಥಿನಿ, ನ.19ರಂದು ಬೆಳಗ್ಗೆ 7.30ರ ವೇಳೆಯಲ್ಲಿ ರಾಜೇಂದ್ರ ನಗರದ ಮನೆಯಿಂದ ಕಾಲೇಜಿಗೆ ಆಟೋದಲ್ಲಿ ತೆರಳುತ್ತಿದ್ದಾಗ ಈ ಘಟನೆ ನಡೆದಿದೆ. ಚಾಲಕನ ಅಜಾಗರೂಕತೆಯಿಂದಾಗಿ ಆಟೋ, ಮುಂದೆ ಹೋಗುತ್ತಿದ್ದ ಬೈಕ್ ಡಿಕ್ಕಿ ಹೊಡೆದು, ನಂತರ ನಿಯಂತ್ರಣ ಕಳೆದುಕೊಂಡು ಪಲ್ಟಿಯಾಗಿದೆ.

ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ವಿದ್ಯಾರ್ಥಿನಿಯನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದು, ಆಕೆಯ ಭುಜದ ಮೂಳೆ ಮುರಿದಿರುವುದರಿಂದ ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ. ಈ ಸಂಬಂಧ ವಿದ್ಯಾರ್ಥಿನಿ ತಂದೆ ನೀಡಿದ ದೂರಿನನ್ವಯ ಪ್ರಕರಣ ಎನ್.ಆರ್.ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ವಿದ್ಯುತ್ ಬಿಲ್ ಬಾಕಿ ವಸೂಲಿಗೆ ತೆರಳಿದ್ದ ಸೆಸ್ಕ್ ಸಿಬ್ಬಂದಿ ಮೇಲೆ ಹಲ್ಲೆ

ಮೈಸೂರು, ನ.22– ವಿದ್ಯುತ್ ಬಾಕಿ ಬಿಲ್ ವಸೂಲಿಗೆ ತೆರಳಿದ್ದ ಸೆಸ್ಕ್ ಸಿಬ್ಬಂದಿಯನ್ನು ಅವಾಚ್ಯವಾಗಿ ನಿಂದಿಸಿ, ಹಲ್ಲೆ ನಡೆಸಿದ ಆರೋಪದಡಿ ವ್ಯಕ್ತಿಯೊಬ್ಬರ ವಿರುದ್ಧ ಮೈಸೂರಿನ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೆಸ್ಕ್ ಶಾಂತಿನಗರ ಶಾಖೆಯ ಕಿರಿಯ ಇಂಜಿನಿಯರ್ ಎಂ.ಎಸ್.ಶಿವಸ್ವಾಮಿ ನೀಡಿರುವ ದೂರಿನನ್ವಯ ಕಲ್ಯಾಣಗಿರಿನಗರ ನಿವಾಸಿ ರಶೀದ್ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಶುಕ್ರವಾರ ಮಧ್ಯಾಹ್ನ ಕಿರಿಯ ಪವರ್ ಮ್ಯಾನ್ ಮಂಜುನಾಥ್ ಹಾಗೂ ತಾತ್ಕಾಲಿಕ ಗ್ಯಾಂಗ್‌ಮ್ಯಾನ್ ನಂದೀಶ್ ಬಾಕಿ ವಸೂಲಾತಿಗೆ ತೆರಳಿದ್ದರು. ಈ ವೇಳೆ ಮಂಜುನಾಥ್, ಬಾಕಿ 4509 ರೂ. ಪಾವತಿಸುವಂತೆ ರಶೀದ್ ಅವರನ್ನು ಕೇಳಿದ್ದಾರೆ. ಇದರಿಂದ ಸಿಟ್ಟಿಗೆದ್ದ ಅವರು, ಅವಾಚ್ಯವಾಗಿ ನಿಂದಿಸಿ, ಹಲ್ಲೆ ನಡೆಸಿದ್ದಾರೆ. ಅದನ್ನು ಮೊಬೈಲ್‌ನಲ್ಲಿ ವಿಡಿಯೋ ಮಾಡಲು ಮುಂದಾದ ನಂದೀಶ್ ಮೇಲೂ ಹಲ್ಲೆ ನಡೆಸಿ, ಈ ರಸ್ತೆಗೆ ಮತ್ತೆ ಬಂದರೆ ಸುಮ್ಮನೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಕೃಷಿ ಕೌಶಲ್ಯ ಮೆರೆದ ನೈಪುಣ್ಯ ಶಾಲೆ ಮಕ್ಕಳು

ತಾವೇ ಬೆಳೆದ ತರಕಾರಿ, ಧಾನ್ಯಗಳ ಪ್ರದರ್ಶಿಸಿ ಗಮನ ಸೆಳೆದ ಮಕ್ಕಳು



ಮೈಸೂರಿನ ಮೈಸೂರಿನ ಕನಕದಾಸನಗರದಲ್ಲಿರುವ (ದಟ್ಟಗಳ್ಳಿ) ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲಾ ಕ್ಯಾಂಪಸ್ ಆವರಣದಲ್ಲಿ ಶಾಲಾ ಮಕ್ಕಳು ರೈತರ ರಾಯಭಾರಿಗಳಾಗಿ ಕೃಷಿ ಕೌಶಲ್ಯವನ್ನು ನಿರೂಪಿಸಿದರು.

ಮೈಸೂರು,ನ.22(ಜಿಎ)–ಮೈಸೂರಿನ ಕನಕದಾಸನಗರದಲ್ಲಿರುವ (ದಟ್ಟಗಳ್ಳಿ) ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲಾ ಕ್ಯಾಂಪಸ್ ಆವರಣದಲ್ಲಿ ಶಾಲಾ ಮಕ್ಕಳು ರೈತರ ರಾಯಭಾರಿಗಳಾಗಿ ಕೃಷಿ ಕೌಶಲ್ಯವನ್ನು ನಿರೂಪಿಸಿದರು.

ಶಾಲೆ ವಿದ್ಯಾರ್ಥಿಗಳು ತಾವೇ ಬೆಳೆದ ಬೆಳೆಗಳಿಗೆ ಬೆಲೆ ನಿಗದಿಪಡಿಸಿ ಮಾರಾಟದಲ್ಲಿ ತೊಡಗಿಕೊಂಡರು. ಟೊಮೋಟೊ, ಬದನೆ, ಬೆಂಡೆ, ರಾಗಿ, ಮುಸುಕಿನ ಜೋಳ ಹಾಗೂ ಸಾಂಬಾರ ಪದಾರ್ಥಗಳನ್ನು ಪ್ರದರ್ಶಿಸಿ, ಭವಿಷ್ಯತ್ತಿನಲ್ಲಿ ತಾವು ಕೃಷಿಯಲ್ಲಿಯೂ ಸಾಧಿಸುವ ಸಾಮರ್ಥ್ಯ ಹೊಂದಿದ್ದೇವೆ ಎಂದು ಪೋಷಕರು ಹಾಗೂ ಸಾರ್ವಜನಿಕರೆದುರು ಸಾಕ್ಷೀಕರಿಸಿದರು.

ಹರಿತಾ ಎಜುಕೇಶನ್ ಸೊಲ್ಯೂಶನ್ ಎಂಬ ಕೃಷಿ ನವೋದ್ಯಮ ಸಂಸ್ಥೆಯ ಸಹ ಯೋಗದೊಂದಿಗೆ ವಿವಿಧ ತರಕಾರಿಗಳು, ಸಾಂಬಾರ ಪದಾರ್ಥಗಳು, ರಾಗಿ, ಜೋಳ ಸೇರಿದಂತೆ ಹಲವು ಧಾನ್ಯಗಳನ್ನು ಬೆಳೆಯುವ ಪದ್ಧತಿಯನ್ನು ಕಲಿಸಿಕೊಡಲಾಗಿದ್ದು ಈ ನಿಟ್ಟಿನಲ್ಲಿ ಯಾವುದೇ ಅನುಭವಿ ರೈತರಿಗಿಂತಲೂ ಕಡಿಮೆಯಿಲ್ಲ ಎಂಬ ರೀತಿಯಲ್ಲಿ ಮಕ್ಕಳೇ ಯಶಸ್ವಿಯಾಗಿ ಬೆಳೆದ ಬೆಳೆಗಳನ್ನು ಇಂದು ಪ್ರದರ್ಶನಕ್ಕಿಟ್ಟು ಪ್ರದರ್ಶನಕ್ಕೆ ಆಗಮಿಸಿದ್ದ ಪೋಷಕರು ಹಾಗೂ ಸಾರ್ವಜನಿಕರು ಹುಬ್ಬೇರಿಸುವಂತೆ ಮಾಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ತೋಟಗಾರಿಕಾ ಇಲಾಖೆಯ ಜಂಟಿ ನಿರ್ದೇಶಕ ಮಂಜುನಾಥ ಅಂಗಡಿ ಮಾತನಾಡಿ, ಮಕ್ಕಳು ಶಾಲಾ ಹಂತದಲ್ಲಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಶಿಕ್ಷಣ ಸಂಸ್ಥೆಗಳು ವರ್ಷ ಪೂರ್ತಿ ಕಾರ್ಯಕ್ರಮಗಳನ್ನು ಪಠ್ಯದೊಂದಿಗೆ ಜೋಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ನೈಪುಣ್ಯ ಶಾಲೆಯ ಮಕ್ಕಳು ತಮ್ಮ ಶಿಕ್ಷಣ ಚಟುವಟಿಕೆಗಳ ಜೊತೆಗೆ ಕೃಷಿ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡು ಉತ್ಪನ್ನ ಬೆಳೆಯುವಲ್ಲಿ ತಮ್ಮಲ್ಲಿರುವ ಕೃಷಿ ಚಮತ್ಕಾರಿಕೆ ಸಾಕ್ಷೀಕರಿಸಿದ್ದಾರೆಂದು ಮೆಚ್ಚುಗೆ ವ್ಯಕ್ತಪಡಿಸಿ, ನೈಪುಣ್ಯ ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ ತಮಗೆ ಸಾಧಿಸಲು ಕೃಷಿ ಕ್ಷೇತ್ರವೂ ಒಂದು ಸಾಧನೆಯ ಮಾರ್ಗ ಎಂಬ ಸಂದೇಶ ಸಮಾಜಕ್ಕೆ ರವಾನಿಸಿದ್ದಾರೆಂದು ಎಂದು ತಿಳಿಸಿದರು.

ಮೈಸೂರು ಆಕಾಶವಾಣಿಯ ಕೃಷಿ ವಿಭಾಗದ ಸಂಯೋಜಕ ಕೇಶವ ಮೂರ್ತಿ ಮಾತನಾಡಿ, ಜಗತ್ತು ಇಂದು ಬಹುದೊಡ್ಡ ಮಟ್ಟದಲ್ಲಿ ಆಹಾರದ ಕೊರತೆಯನ್ನು ಎದುರಿಸುತ್ತಿದೆ. ಇದನ್ನು ನೀಗಿಸಲು ಭವಿಷ್ಯತ್ತಿನ ಪೀಳಿಗೆಯನ್ನು ಸಜ್ಜುಗೊಳಿಸಬೇಕಾಗಿದೆ. ಮುಂದೊಂದು ದಿನ ಉತ್ತಮ ಆಹಾರ, ಪರಿಶುದ್ಧ ಗಾಳಿಯ ಕೊರತೆ ಮುಂದಿನ ಪೀಳಿಗೆಗೆ ಬಹುದೊಡ್ಡ ಸವಾಲಾಗಲಿದೆ. ಈ ನಿಟ್ಟಿನಲ್ಲಿ ಪ್ರಕೃತಿಯೊಂದಿಗೆ ಸಮತೋಲನ ಕಾಯ್ದು ಕೊಳ್ಳಲು ಪ್ರಾಥಮಿಕ ಹಂತದಲ್ಲಿಯೇ ಮಕ್ಕಳನ್ನು ಅಣಿಗೊಳಿಸಬೇಕಾಗಿದೆ ಎಂದರು.

ಈ ಸಂದರ್ಭದಲ್ಲಿ ಜೇನು ಕೃಷಿ, ರೈತ ಸ್ನೇಹಿ ಕೀಟಗಳ ಪ್ರದರ್ಶನ, ಎರೆಹುಳು ಗೊಬ್ಬರ ತಯಾರಿಕೆ, ಕೀಟಭಕ್ಷಕ ಸಸ್ಯಗಳನ್ನು ಪ್ರದರ್ಶಿಸಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಆರ್.ರಘು, ಕೃಷಿ ವಿಜ್ಞಾನಿ ಡಾ.ಸಿ.ಎ. ದೀಪಕ್, ಪ್ರಾಂಶುಪಾಲ ಮಹೇಂದ್ರ ಎಂ.ಎನ್, ಹಸಿರು ಶಿಕ್ಷಣದ ಸಂಯೋಜಕಿ ಯೋಗಿತಾ, ಶಿಲ್ಪಾ, ಶಿಕ್ಷಣ ಸಂಯೋಜಕಿ ರೇಷ್ಮಾ ರೈ, ಪೋಷಕರು ಉಪಸ್ಥಿತರಿದ್ದರು.

ಶಾಸಕ ಶಾಮನೂರು ಶಿವಶಂಕರಪ್ಪ ಆಸ್ಪತ್ರೆಗೆ ದಾಖಲು

ಆರೋಗ್ಯ ವಿಚಾರಿಸಿದ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ

ದಾವಣಗೆರೆ, ನ.22– ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಹಾಗೂ ಅಖಿಲ ಭಾರತ ವೀರಶೈವ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ(94) ವಯೋ ಸಹಜ ಕಾಯಿಲೆ ಹಿನ್ನೆಲೆ ಆಸ್ಪತ್ರೆಗೆ ದಾಖಲಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ. ಸಿಎಂ ಸಿದ್ದರಾಮಯ್ಯ ಸೇರಿದಂತೆ ಹಲವು ರಾಜಕೀಯ ನಾಯಕರು ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದ್ದಾರೆ.



ಬೆಂಗಳೂರಿನ ಸ್ಪರ್ಶ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಶಾಮನೂರು ಶಿವಶಂಕರಪ್ಪರನ್ನು ಸಿಎಂ ಸಿದ್ದರಾಮಯ್ಯ ಭೇಟಿ ಮಾಡಿ ಆರೋಗ್ಯ ವಿಚಾರಿಸಿದ್ದಾರೆ. ಈ ವೇಳೆ ಆಸ್ಪತ್ರೆಯಲ್ಲಿದ್ದ ದಾವಣಗೆರೆ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಮಾವನ ಆರೋಗ್ಯದ ಬಗ್ಗೆ ಸಿಎಂಗೆ ಮಾಹಿತಿ ನೀಡಿದ್ದಾರೆ.

ಇಂದು ಸಂಸದರ ಕಿಡ್ಸ್ ಸೈಕ್ಲಾಥಾನ್

ಮೈಸೂರು,ನ.22(ಪಿಎಂ)– ಸಂಸದರ ಕ್ರೀಡಾ ಮಹೋತ್ಸವ, ಮಕ್ಕಳ ದಿನಾಚರಣೆಯ ಅಂಗವಾಗಿ ಫಿಟ್ ಯುವ ಫಾರ್ ವಿಕಸಿತ್ ಭಾರತ್‌ನ ಯೋಜನೆಯಡಿ ನ.23ರಂದು ಕಿರಿಯರಿಗೆ ಕಿಡ್ಸ್ ಸೈಕ್ಲಾಥಾನ್ ಆಯೋಜಿಸಲಾಗಿದೆ. ಬೆಳಗ್ಗೆ 7.30ಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಗಡಿಯಾರ ಗೋಪುರದಲ್ಲಿ ನಡೆಯುವ ಮಕ್ಕಳ ಸೈಕ್ಲೋಥಾನ್‌ಗೆ ಸಂಸದರು ಚಾಲನೆ ನೀಡಲಿದ್ದಾರೆ.

ಸೈಕ್ಲಿಂಗ್ ಜೊತೆಗೆ ರಸ್ತೆ ಸುರಕ್ಷತಾ ಜಾಗೃತಿ, ಪರಿಸರ ಸಂರಕ್ಷಣೆ ಅರಿವು ಮೂಡಿಸಲಾಗುವುದು. ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ನೇತೃತ್ವದಲ್ಲಿ ಮೈಸೂರು ಜಿಲ್ಲಾ ಅಮೆಚೂರ್ ಸೈಕ್ಲಿಂಗ್ ಅಸೋಸಿಯೇಷನ್, ಫೋನಿಕ್ಸ್ ಇಂಟರ್‌ನ್ಯಾಷನಲ್ ಅಕಾಡೆಮಿ, ಸೈಕ್ಲೋಪೀಡಿಯಾ, ಫನ್‌ಪ್ಯಾಲೇಸ್, ಸನ್‌ಪ್ಯೂರ್, ಲಿಟ್ಲ್ ಎಲ್ಲಿ, ಬುಕ್ಸ್ ಅಂಡ್ ಬ್ರೇನ್ಸ್ ಸಂಯುಕ್ತಾಶ್ರಯದಲ್ಲಿ ಕಿಡ್ಸ್ ಸೈಕ್ಲಾಥಾನ್ ಆಯೋಜಿಸಲಾಗಿದೆ. ಪ್ರತಿಯೊಬ್ಬ ಸೈಕಲ್ ರೈಡರ್‌ಗೆ ಸೈಕ್ಲಾಥಾನ್ ಟೀ–ಶರ್ಟ್, ಪಾನೀಯ–ತಿನಿಸು ಮತ್ತು ಪ್ರಮಾಣ ಪತ್ರ ನೀಡಲಾಗುವುದು. ಪ್ರತಿ ವಿಭಾಗದಲ್ಲಿ ವಿಜೇತ ಅಭ್ಯರ್ಥಿಗಳಿಗೆ ಪ್ರಶಸ್ತಿ ವಿತರಿಸಲಾಗುವುದು. ಮಾಹಿತಿಗಾಗಿ ಮೊ.ಸಂ. 88848 51538, 99869 73280 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿವೇಕಾನಂದರ ಆಧ್ಯಾತ್ಮಿಕ ನೆಲೆಗಟ್ಟಿನಲ್ಲಿ ವಿಕಸಿತ ಭಾರತ ನಿರ್ಮಾಣಕ್ಕೆ ಪ್ರಧಾನಿ ಮೋದಿ ಮುನ್ನಡಿ

- ಶ್ರೀರಾಮಕೃಷ್ಣ ಆಶ್ರಮದ ಶತಮಾನೋತ್ಸವದಲ್ಲಿ ಸಂಸದ ಯದುವೀರ್ ಒಡೆಯರ್
- ವಿವೇಕಾನಂದರ ಪ್ರೇರಣೆ ಮಾದರಿ ಮೈಸೂರಿಗೆ ನಾಂದಿಯಾಯ್ತು



ಶ್ರೀರಾಮಕೃಷ್ಣ ವಿದ್ಯಾಶಾಲೆಯ ಕ್ರೀಡಾಂಗಣದಲ್ಲಿ ಶನಿವಾರ ಸಂಜೆ ಹಮ್ಮಿಕೊಂಡಿದ್ದ ಹೊನಲು ಬೆಳಕಿನ ಪ್ರದರ್ಶನದಲ್ಲಿ ರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿಗಳು ಆಕರ್ಷಕ ಪಥಸಂಚಲದ ಮೂಲಕ ನೀಡಿದ ಗೌರವವನ್ನು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಸ್ವೀಕರಿಸುತ್ತಿರುವುದು. ಚಿತ್ರದಲ್ಲಿ ಭಾರತ ಸರ್ಕಾರದ ನೀತಿ ಆಯೋಗದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ವಿ.ಸುಬ್ರಹ್ಮಣ್ಯಂ, ಕರ್ನಾಟಕ ಸರ್ಕಾರದ ಆರ್ಥಿಕ ವಿಭಾಗದ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್, ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್ ಇತರರನ್ನು ಕಾಣಬಹುದು.

ಮೈಸೂರು,ನ.22(ಪಿಎಂ)– ಸ್ವಾಮಿ ವಿವೇಕಾನಂದರ ಆಧ್ಯಾತ್ಮಿಕ ನೆಲೆಗಟ್ಟಿನ ಮೇಲೆಯೇ ನಮ್ಮ ದೇಶದ ಪ್ರಧಾನಿಗಳು ವಿಕಸಿತ ಭಾರತ ನಿರ್ಮಿಸುವ ನಿಟ್ಟಿನಲ್ಲಿ ಮುನ್ನಡೆಯುತ್ತಿದ್ದಾರೆ ಎಂದು ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಮೈಸೂರಿನ ರಾಮಕೃಷ್ಣ ವಿದ್ಯಾಶಾಲಾ ಕ್ರೀಡಾಂಗಣದಲ್ಲಿ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಶತಮಾನೋತ್ಸವ ಪ್ರಯುಕ್ತ ಶನಿವಾರ ಹಮ್ಮಿಕೊಂಡಿದ್ದ ರಾಮಕೃಷ್ಣ ವಿದ್ಯಾಶಾಲೆಯ ಶೈಕ್ಷಣಿಕ ಸೇವೆಯ ಅವಲೋಕನ ಮತ್ತು ರಾಮಕೃಷ್ಣ–ವಿವೇಕಾನಂದ ಭಾವಧಾರೆಗೆ ಮೈಸೂರು ರಾಜಮನೆತನದ ಕೊಡುಗೆ' ಕುರಿತ ಅಧಿವೇಶನದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ನಮ್ಮ ಮೈಸೂರು ಈ ವಿಕಸಿತ ಭಾರತದಲ್ಲಿ ವಿಕಸಿತ ಕ್ಷೇತವಾಗಬೇಕೆಂಬ ಗುರಿ ಹೊಂದಿದ್ದು, ಸ್ವಾಮಿ ವಿವೇಕಾನಂದರ ವಿಚಾರಧಾರೆಗಳು ಇಂದಿಗೂ ಪ್ರಸ್ತುತ. ಹಳೇ ಮೈಸೂರು ವಾತಾವರಣ ಇಂದಿಗೂ ಉಳಿದಿದ್ದರೆ ಅದು ರಾಮಕೃಷ್ಣ ಆಶ್ರಮದಲ್ಲಿ ಎಂದೇ ಹೇಳಬಹುದು. ಆಶ್ರಮದ ಈ ಶಾಲೆ ಹಾಗೂ ಆಶ್ರಮದಲ್ಲಿ ಅಂದಿನ ಮೈಸೂರಿನ ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ವಾತಾವರಣ ಮತ್ತು ಗುಣಮಟ್ಟದ ಜೀವನ ನಡೆಸಲುಬೇಕಾದ ವ್ಯವಸ್ಥೆ ಕಾಣಬಹುದು ಎಂದರು.

ಮೈಸೂರು ಸಂಸ್ಥಾನ ಒಳ್ಳೆಯ ಆಡಳಿತಕ್ಕೆ ಹೆಸರುವಾಸಿಯಾಗಲು ಸ್ವಾಮಿ ವಿವೇಕಾನಂದರ ಪ್ರಭಾವವೇ ಕಾರಣ ಎಂದರೆ ತಪ್ಪಿಲ್ಲ. ಬೆಂಗಳೂರಿನಲ್ಲಿರುವ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆ ಪ್ರಾರಂಭಕ್ಕೂ ಸ್ವಾಮಿ ವಿವೇಕಾನಂದರೇ ಕಾರಣ. ಜಮ್‌ಸೆಟ್‌ಜೀ ಟಾಟಾ ಅವರನ್ನು ಸ್ವಾಮಿ ವಿವೇಕಾನಂದರು ಭೇಟಿಯಾಗಿ ಚರ್ಚಿಸಿದ್ದರು. ಈ ಸಂದರ್ಭದಲ್ಲಿ ಟಾಟಾ ಅವರು ಸಂಸ್ಥೆ ಸ್ಥಾಪನೆ ಬಗ್ಗೆ ಎಲ್ಲಾ ಪ್ರಾಂತ್ಯದ ಸರ್ಕಾರಗಳಲ್ಲಿ ಸಹಕಾರ ಕೇಳಿದರೂ ಪ್ರಯೋಜನವಾಗಿಲ್ಲ ಎಂದು ವಿವೇಕಾನಂದರಲ್ಲಿ ಹೇಳಿಕೊಂಡಿದ್ದರು. ಆಗ ವಿವೇಕಾನಂದರು ಮೈಸೂರು ಸಂಸ್ಥಾನಕ್ಕೆ ಹೋಗಿ, ಅಲ್ಲಿ ನಿಮಗೆ ಬೇಕಾದ ಸಹಕಾರ ಸಿಗುತ್ತದೆ ಎಂದು ಹೇಳಿ ಕಳುಹಿಸಿದ್ದರು. ಹೀಗೆ ಸ್ಥಾಪನೆಯಾದ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯು ಭಾರತದಲ್ಲಿ ಮಾತ್ರವಲ್ಲದೆ, ಇಡೀ ವಿಶ್ವದಲ್ಲೇ ಅತ್ಯುತ್ತಮ ಗುಣಮಟ್ಟದ ಸಂಶೋಧನಾ ಕೇಂದ್ರವಾಗಿ ಹೊರಹೊಮ್ಮಿದೆ. ಮೈಸೂರಿನ ಸಮಾಜ ಹಾಗೂ ಇಲ್ಲಿರುವ ಸಂಸ್ಥೆಗಳ ಮೇಲೆ ವಿವೇಕಾನಂದರ ಪ್ರಭಾವ ಬಹಳ ದೊಡ್ಡದು ಎಂದು ಸ್ಮರಿಸಿದರು.

ಮಾದರಿ ಮೈಸೂರಿಗೆ ಪ್ರೇರಣೆ: ಮಹಾರಾಜ ಚಾಮರಾಜ ಒಡೆಯರ್ ಕಾಲದಲ್ಲಿ ವಿವೇಕಾನಂದರು ಮೈಸೂರಿಗೆ ಭೇಟಿ ನೀಡಿದ್ದರು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಜೊತೆಗೆ ಚಾಮರಾಜ ಒಡೆಯರ್ ಅವರು ನಿಧನ ಹೊಂದಿದ್ದು ಕೋಲ್ಕತ್ತಾದಲ್ಲಿ. ಇಂದಿಗೂ ಅವರ ಸ್ಮಾರಕ ಅಲ್ಲಿಯೇ ಇದೆ ಆ ಮೂಲಕ ಅವರು ಬೇಲೂರು ಮಠದ ವಾತಾವರಣದಲ್ಲಿ ಇಂದಿಗೂ ಇದ್ದಾರೆ. ವಿವೇಕಾನಂದರ ಪ್ರಭಾವ ಹಾಗೂ ಮಾರ್ಗದರ್ಶನದಿಂದಲೇ ಚಾಮರಾಜ ಒಡೆಯರ್ ಕಾಲದಲ್ಲಿ ಮಾದರಿ ಮೈಸೂರಿಗೆ ಬೀಜ ಬಿತ್ತಲಾಯಿತು. ಮಹಾರಾಜ ಚಾಮರಾಜ ಒಡೆಯರ್ ಅವರು ವಿವೇಕಾನಂದರ ಆಶ್ರಯದಲ್ಲೇ ಇದ್ದಾರೆ ಎಂದರೆ ತಪ್ಪಾಗಲ್ಲ. ಚಾಮರಾಜ ಒಡೆಯರ್ ಅವರ ಸ್ಮಾರಕದ ಅಲ್ಲಿನ ಸ್ಥಳವನ್ನು ಮೈಸೂರ್ ಟೆಂಪಲ್ ಎಂದು ಕರೆಯಲಾಗುತ್ತದೆ. ಅಲ್ಲಿಗೆ ಭೇಟಿ ನೀಡುವ ಅವಕಾಶ ನನಗೂ ಸಿಕ್ಕಿತ್ತು ಆ ಒಂದು ಸಂಬಂಧ ಇನ್ನೂ ದೊಡ್ಡ ಮಟ್ಟದಲ್ಲಿ ಬೆಳೆಯಬೇಕಿದೆ ಎಂದು ಆಶಯ ವ್ಯಕ್ತಪಡಿಸಿದರು.

ಸ್ವಾಮಿ ವಿವೇಕಾನಂದರ ಮೈಸೂರು ಭೇಟಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಆಶ್ರಮಕ್ಕಾಗಿ 3 ಎಕರೆ ಭೂಮಿ ನೀಡಿದ್ದ ಬಗ್ಗೆ, ಮೈಸೂರು ರಾಮಕೃಷ್ಣ ಆಶ್ರಮ ಶ್ರದ್ಧಾ–ಭಕ್ತಿಯ ಕೇಂದ್ರವಾಗಿ ಬೆಳೆದು ಬಂದ ಬಗೆಯ ಕುರಿತು 'ಶ್ರೀರಾಮಕೃಷ್ಣ ಆಶ್ರಮದ 100 ವರ್ಷಗಳು' ಶೀರ್ಷಿಕೆಯಡಿ ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು. ಅಲ್ಲದೆ, ಮೈಸೂರು ಮಹಾರಾಜರಿಗೆ ಮತ್ತು ದಿವಾನ್ ಶೇಷಾದ್ರಿ ಅಯ್ಯರ್‌ರಿಗೆ ಸ್ವಾಮಿ ವಿವೇಕಾನಂದರ ಪತ್ರಗಳ ಆಯ್ದ ತುಣುಕುಗಳು ಕುರಿತು ಶಾಲೆ ವಿದ್ಯಾರ್ಥಿಗಳು ಭಾಷಣ ಮಾಡಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.100ರಷ್ಟು ಅಂಕಗಳೊಂದಿಗೆ ತೇರ್ಗಡೆ ಹೊಂದಿದ ರಾಮಕೃಷ್ಣ ವಿದ್ಯಾಶಾಲಾ ವಿದ್ಯಾರ್ಥಿ ಎಂ.ಎಸ್.ತನ್ಮಯ್ ಅವರಿಗೆ ಅತ್ಯುತ್ತಮ ಸಾಧನೆಯ ಶೀರ್ಷಿಕೆಯಡಿ ಚಿನ್ನದ ಪದಕ ನೀಡಿ ಗೌರವಿಸಲಾಯಿತು. ಜೊತೆಗೆ ಪ್ರಸ್ತುತ ಇಂಜಿನಿಯರಿಂಗ್ ವಿದ್ಯಾರ್ಥಿಯಾಗಿರುವ ರಾಮಕೃಷ್ಣ ವಿದ್ಯಾಶಾಲೆಯ ಹಳೇ ವಿದ್ಯಾರ್ಥಿ ಶ್ರೀನಿವಾಸ ಆಚಾರ್ ಅವರಿಗೆ ಅತ್ಯುತ್ತಮ ವ್ಯಕ್ತಿತ್ವ ಶೀರ್ಷಿಕೆಯಡಿ ಚಿನ್ನದ ಪದಕ ಪ್ರದಾನ ಮಾಡಲಾಯಿತು.

ಭಾರತ ಸರ್ಕಾರದ ನೀತಿ ಆಯೋಗದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ವಿ.ಸುಬ್ರಹ್ಮಣ್ಯಂ, ಕರ್ನಾಟಕ ಸರ್ಕಾರದ ಆರ್ಥಿಕ ವಿಭಾಗದ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಅತಿಥಿಯಾಗಿ ಪಾಲ್ಗೊಂಡಿದ್ದರು. ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ರಾಮಕೃಷ್ಣ ವಿದ್ಯಾಶಾಲಾ ಕರಸ್ಪಾಂಡೆಂಟ್ ಸ್ವಾಮಿ ಯುಕ್ತೇಶಾನಂದಜೀ ಮಹಾರಾಜ್, ಶಾಲೆಯ ಪ್ರಾಂಶುಪಾಲ ಟಿ.ಕೆ.ಚಂದ್ರಶೇಖರ್ ವೇದಿಕೆಯಲ್ಲಿದ್ದರು.

ಚಿತ್ತಾಕರ್ಷಕ ಬೆಳಕಿನ ಚಮತ್ಕಾರ ಪ್ರದರ್ಶನ; ರೋಮಾಂಚನಗೊಳಿಸಿದ ವಿದ್ಯಾರ್ಥಿಗಳ ಸಾಹಸ



ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಕ್ರೀಡಾಂಗಣದಲ್ಲಿ ಶನಿವಾರ ಸಂಜೆ ವಿದ್ಯಾಶಾಲೆಯ ವಿದ್ಯಾರ್ಥಿಗಳು ಆಕರ್ಷಕ ಹೊನಲು ಬೆಳಕಿನ ಪ್ರದರ್ಶನದಲ್ಲಿ ಸಾಹಸಮಯ ಭಂಗಿಗಳ ಮೂಲಕ ನೋಡುಗರಲ್ಲಿ ರೋಮಾಂಚನ ಉಂಟು ಮಾಡಿದರು.

ಮೈಸೂರು,ನ.22(ಪಿಎಂ)– ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಕ್ರೀಡಾಂಗಣದಲ್ಲಿ ಶನಿವಾರ ಸಂಜೆ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಶತಮಾನೋತ್ಸವ ಹಾಗೂ ವಿದ್ಯಾಶಾಲೆಯ 73ನೇ ಕಾಲೇಜು ದಿನಾಚರಣೆಯ ಪ್ರಯುಕ್ತ ವಿದ್ಯಾಶಾಲೆಯ ವಿದ್ಯಾರ್ಥಿಗಳು ಆಕರ್ಷಕ ಹೊನಲು ಬೆಳಕಿನ ಪ್ರದರ್ಶನ ನೀಡಿದರು.

ವಿದ್ಯಾರ್ಥಿಗಳಿಂದ ನಡೆದ ಈ ಪ್ರದರ್ಶನ ನೆರೆದಿದ್ದ ಎಲ್ಲರನ್ನು ನಿಬ್ಬೆರಗಾಗಿಸಿತು. ಶಾಲಾ ವಿದ್ಯಾರ್ಥಿಗಳು ಲಯ ಬದ್ಧವಾಗಿ ನುಡಿಸುತ್ತಿದ್ದ ಬ್ಯಾಂಡ್ ವಾದನವೂ ಮಂತ್ರಮುಗ್ಧರನ್ನಾಗಿ ಮಾಡಿದರೆ, ಆ ಸಂಗೀತದೊಂದಿಗೆ ಮತ್ತೊಂದು ವಿದ್ಯಾರ್ಥಿಗಳ ತಂಡವು ನೀಡುತ್ತಿದ್ದ ಸಾಹಸ ಪ್ರದರ್ಶನಗಳು ನೋಡುಗರಲ್ಲಿ ರೋಮಾಂಚನ ಉಂಟು ಮಾಡಿದವು.

ಅಲ್ಲದೆ, ಶಿಸ್ತಿನ ಸಿಪಾಯಿಗಳಂತೆ ಬ್ಯಾಂಡ್ ವಾದ್ಯದೊಂದಿಗೆ ಸಾಗಿದ ಪಥಸಂಚಲನ ಎಲ್ಲರ ಗಮನ ಸೆಳೆಯಿತು. ವಿದ್ಯುತ್ ದೀಪಗಳನ್ನು ಹಿಡಿದು ಪಂಜಿನ ಕವಾಯಿತು ರೀತಿಯಲ್ಲಿ ಹಲವು ಬಗೆಯ ಪ್ರದರ್ಶನಕ್ಕೆ ಪ್ರೇಕ್ಷಕರು ಹಾಗೂ ಪೋಷಕರು ಚಪ್ಪಾಳೆ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿದರು. ಯೋಗ, ಪಿರಮಿಡ್ ಪ್ರದರ್ಶನಗಳ ಭಂಗಿಗಳು ನೋಡುಗರಲ್ಲಿ ಪುಳಕ ಉಂಟು ಮಾಡಿದವು. ಕೆಲಕಾಲ ಸುರಿದ ಮಳೆಯಲ್ಲೂ ಶಿಸ್ತುಬದ್ಧ ಪ್ರದರ್ಶನ ನೀಡಿದ 410ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರೇಕ್ಷಕರ ಕಣ್ಮನ ಸೆಳೆದರು.

ಎರಡು ಕಾರ್ಯಕ್ರಮಗಳಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಬೇಕಿದ್ದ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಗೈರು ಹಾಜರಿದ್ದರು. ಆದರೆ ಅವರು ಕಳುಹಿಸಿದ್ದ ಶುಭ ಸಂದೇಶವನ್ನು ಕಾರ್ಯಕ್ರಮದಲ್ಲಿ ವಾಚಿಸಲಾಯಿತು.

ಕೊಲೆ ಪ್ರಕರಣವನ್ನು ಅಪಘಾತವೆಂದು ಬಿಂಬಿಸಿ ಮುಚ್ಚಿ ಹಾಕಲೆತ್ನಿಸಿದ್ದ ನಾಲ್ವರ ಬಂಧನ

ಕುಡಿತದ ಪಾರ್ಟಿ ಮಾಡುವಾಗ ಮಾತಿಗೆ ಮಾತು ಬೆಳೆದು ಹಲ್ಲೆಯಿಂದ ಸಾವು, ಆರೋಪಿಗಳು ಜೈಲಿಗೆ, ಮತ್ತೊಬ್ಬ ಆರೋಪಿ ಪತ್ತೆಗೆ ಶೋಧ

ಶ್ರೀರಂಗಪಟ್ಟಣ: ತಾಲೂಕಿನ ಕ್ಯಾತನಹಳ್ಳಿ ಗ್ರಾಮದ ಯುವಕನೊಬ್ಬನ ಕೊಲೆಯನ್ನು ರಸ್ತೆ ಅಪಘಾತವೆಂದು ಬಿಂಬಿಸಿ ಮುಚ್ಚಿ ಹಾಕಲು ಪ್ರಯತ್ನಿಸಿದ್ದ ಪ್ರಕರಣವನ್ನು ಶ್ರೀರಂಗಪಟ್ಟಣ ಟೌನ್ ಪೊಲೀಸರು ಭೇದಿಸಿದ್ದು, ಈ ಸಂಬಂಧ ನಾಲ್ವರನ್ನು ಬಂಧಿಸಿದ್ದಾರೆ. ಪ್ರಕರಣದ ಮತ್ತೊಬ್ಬ ಆರೋಪಿ ತಲೆ ಮರೆಸಿಕೊಂಡಿದ್ದು, ಆತನ ಬಂಧನಕ್ಕಾಗಿ ಶೋಧ ಕಾರ್ಯ ಮುಂದುವರಿದಿದೆ.

ಪ್ರಕರಣದ ಹಿನ್ನೆಲೆ: ಇದೇ ತಿಂಗಳು 18ರಂದು ಕ್ಯಾತನಹಳ್ಳಿ ಗ್ರಾಮದ ಸವಿತಾ ಎಂಬುವರ ಪುತ್ರ ಶಶಾಂಕ್‌ಗೌಡ ಬೈಕ್‌ನಿಂದ ಕುಸಿದು ಬಿದ್ದು ಮೃತಪಟ್ಟಿದ್ದಾರೆ ಎಂದು ಶ್ರೀರಂಗಪಟ್ಟಣ ಟೌನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಈ ದೂರನ್ನು ಆಧರಿಸಿ ಪೊಲೀಸರು ಯುಡಿಆರ್ ಪ್ರಕರಣವನ್ನು ದಾಖಲಿಸಿ ತನಿಖೆ ಆರಂಭಿಸಿದ್ದರು.

ತನಿಖೆ ಮುಂದುವರೆದಂತೆ, ಶಶಾಂಕ್‌ಗೌಡ ಅವರದ್ದು ಆಕಸ್ಮಿಕ ಸಾವಲ್ಲ, ಬದಲಿಗೆ ಕೊಲೆ ಎಂಬ ಅಂಶ ಬೆಳಕಿಗೆ ಬಂದಿತು. ತಕ್ಷಣವೇ ಅಲರ್ಟ್ ಆದ ಪೊಲೀಸರು ಯುಡಿಆರ್ ಪ್ರಕರಣವನ್ನು ಕೊಲೆ ಪ್ರಕರಣವಾಗಿ ಪರಿವರ್ತಿಸಿ, ಆರೋಪಿಗಳ ಪತ್ತೆಗೆ ಬಲೆ ಬೀಸಿದರು.

ಜಗಳದಿಂದ ಕೊಲೆ: ಪೊಲೀಸರು ತನಿಖೆ ನಡೆಸಿದಾಗ ದಿನಾಂಕ 21-11-2025ರಂದು ಪ್ರಕರಣದಲ್ಲಿ ಭಾಗಿಯಾಗಿದ್ದ ನಾಲ್ವರು ಆರೋಪಿಗಳನ್ನು ದಸ್ತಗಿರಿ ಮಾಡಿದರು. ವಿಚಾರಣೆ ವೇಳೆ, ಕೊಲೆಯ ಹಿಂದಿನ ಘಟನೆಗಳು ಬಯಲಾಗಿವೆ.

ನ.18ರಂದು ರಾತ್ರಿ 2 ಗಂಟೆ ಸಮಯದಲ್ಲಿ, ಮೃತ ಶಶಾಂಕ್‌ಗೌಡ ತಮ್ಮ ಸ್ನೇಹಿತರಾದ ಮಿಣಜಿ ಬೋರನಕೊಪ್ಪಲು ಶಿವಕುಮಾರ, ಪಾಲಹಳ್ಳಿಯ ಹರ್ಷ, ಕ್ಯಾತನಹಳ್ಳಿಯ ಅಭಿಷೇಕ್ ಮತ್ತು ಬ್ಯಾಟಿ ತಿಮ್ಮನಕೊಪ್ಪಲಿನ ಮತ್ತೊಬ್ಬ ವ್ಯಕ್ತಿಯೊಂದಿಗೆ ಮಿಣಜಿ ಬೋರನಕೊಪ್ಪಲಿನ ವೀಣಾ ಕೋಂ ಶ್ರೀಧರ್ ಎಂಬುವವರ ಖಾಲಿ ಜಾಗದಲ್ಲಿ ಪಾರ್ಟಿ ಮಾಡುತ್ತಿದ್ದರು. ಪಾರ್ಟಿ ನಡೆಯುತ್ತಿದ್ದಾಗ ಶಿವಕುಮಾರ ಮತ್ತು ಶಶಾಂಕ್ ನಡುವೆ ಮಾತಿಗೆ ಮಾತು ಬೆಳೆದು ಜಗಳವಾಗಿ ತೀವ್ರ ವಿಕೋಪಕ್ಕೆ ತಿರುಗಿತು. ಈ ವೇಳೆ ಶಿವಕುಮಾರ ಶಶಾಂಕನ ಮೇಲೆ ಹಲ್ಲೆ ಮಾಡಿದ್ದು, ಪರಿಣಾಮವಾಗಿ ಶಶಾಂಕನ ಕಿವಿ ಮತ್ತು ಮೂಗಿನಲ್ಲಿ ರಕ್ತಸ್ರಾವವಾಗಿ ತೀವ್ರ ಗಾಯಗೊಂಡಿದ್ದಾನೆ.

ಅಪಘಾತವೆಂದು ಬಿಂಬಿಸುವ ಯತ್ನ: ಗಂಭೀರವಾಗಿ ಗಾಯಗೊಂಡಿದ್ದ ಶಶಾಂಕ್‌ಗೌಡನನ್ನು, ಹರ್ಷ, ಅಭಿಷೇಕ್ ಹಾಗೂ ಮತ್ತೊಬ್ಬ ವ್ಯಕ್ತಿಯು ಮೈಸೂರಿನ ಮಣಿಪಾಲ್ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದಾಗ ಮಾರ್ಗಮಧ್ಯದಲ್ಲಿ ಮೃತಪಟ್ಟಿದ್ದಾರೆ.

ಶಿವಕುಮಾರನನ್ನು ಕೊಲೆ ಪ್ರಕರಣದಿಂದ ಪಾರು ಮಾಡುವ ಉದ್ದೇಶದಿಂದ, ಈ ಮೂವರು ಸ್ನೇಹಿತರು ಶಶಾಂಕ್‌ನ ತಾಯಿಯವರಿಗೆ ಕರೆ ಮಾಡಿ ನಿಮ್ಮ ಮಗ ಬೈಕ್‌ನಿಂದ ಕುಸಿದು ಬಿದ್ದು ಸಾವನ್ನಪ್ಪಿದ್ದಾನೆ ಎಂದು ಸುಳ್ಳು ಹೇಳಿ, ಕೊಲೆ ಪ್ರಕರಣವನ್ನು ಮುಚ್ಚಿಹಾಕಿ ಆಕಸ್ಮಿಕ ಸಾವು ಎಂದು ಬಿಂಬಿಸಲು ಯತ್ನಿಸಿರುವುದು ಪ್ರಾಥಮಿಕ ತನಿಖೆಯಲ್ಲಿ ದೃಢಪಟ್ಟಿದೆ.

ಪೊಲೀಸ್ ತಂಡಕ್ಕೆ ಪ್ರಶಂಸೆ: ಈ ಕೊಲೆ ಪ್ರಕರಣದ ಪತ್ತೆ ಕಾರ್ಯಾಚರಣೆಯನ್ನು ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ವಿ.ತಿಮ್ಮಯ್ಯ ಮತ್ತು ಗಂಗಾಧರಸ್ವಾಮಿ ಹಾಗೂ ಶ್ರೀರಂಗಪಟ್ಟಣ ಉಪವಿಭಾಗದ ಡಿವೈಎಸ್‌ಪಿ ಶಾಂತಮಲ್ಲಪ್ಪ ಮಾರ್ಗದರ್ಶನದಲ್ಲಿ ನಡೆಸಲಾಯಿತು.

ಶ್ರೀರಂಗಪಟ್ಟಣ ಟೌನ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಕುಮಾರ ಬಿ.ಜಿ. ನೇತೃತ್ವದಲ್ಲಿ ಪಿಎಸ್‌ಐಗಳಾದ ಜನಾಬಾಯಿ ಕಡಪಟ್ಟಿ, ಗಂಗಾಧರ ಎಸ್.ಬಿ. ಮತ್ತು ಸಿಬ್ಬಂದಿಗಳಾದ ಶ್ರೀನಿವಾಸಮೂರ್ತಿ, ಎಸ್.ಎಸ್.ಚಂದ್ರಶೇಖರ, ಎಂ.ಎಸ್.ಸುಧಾಕರ, ಎಂ.ಮಂಜುನಾಥ, ಅಭಿಷೇಕ್‌ಗೌಡ, .ಎನ್.ಎಸ್.ಸಿದ್ದರಾಜು ಹಾಗೂ ಜೀಪ್ ಚಾಲಕ ದಿಲೀಪ್ ರವರನ್ನೊಳಗೊಂಡ ತಂಡವು ಯಶಸ್ವಿಯಾಗಿ ಕಾರ್ಯನಿರ್ವಹಿಸಿದೆ. ಬಂಧಿತ ಆರೋಪಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಆರೋಪಿಗಳ ಪತ್ತೆ ಕಾರ್ಯದಲ್ಲಿ ತೊಡಗಿದ್ದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರಶಂಸಿಸಿದ್ದಾರೆ.

ಶ್ರೀ ಆಂಜನೇಯಸ್ವಾಮಿ ಭವ್ಯ ಉತ್ಸವ



ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದಲ್ಲಿ ಕಾರ್ತಿಕ ಮಾಸದ ಹಿನ್ನೆಲೆಯಲ್ಲಿ ಮಾಜಿ ಶಾಸಕ ದಿವಂಗತ ಕೆ.ಕೆಂಪೇಗೌಡರ ಕುಟುಂಬ ವರ್ಗದವರು ಶ್ರೀ ಆಂಜನೇಯಸ್ವಾಮಿಯ ಭವ್ಯವಾದ ಮೆರವಣಿಗೆ ನಡೆಸಿದರು. ಉತ್ಸವವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಅದ್ದೂರಿಯಾಗಿ ನಡೆಯಿತು. ಈ ವೇಳೆ ಗ್ರಾಮದ ಮುಖಂಡರು ಮತ್ತು ಯುವಜನಾಂಗ ಪಾಲ್ಗೊಂಡಿತ್ತು. ಅದರಲ್ಲೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮೆರವಣಿಗೆಗೆ ಮೆರಗು ತಂದರು.

ಹೆಚ್ಚುವರಿ ಸಚಿವ ಸ್ಥಾನ ಕೊಡಿ ಎಂದು ಕೇಳಲು ದೆಹಲಿಗೆ ಹೋಗಿದ್ದೆ, ಡಿಕೆ ಸಿಎಂ ಮಾಡಿ ಎಂದು ಕೇಳಲು ಅಲ್ಲ

ಶಾಸಕ ರವಿಕುಮಾರ್ ಗಣಿಗ ಸ್ಪಷ್ಟನೆ



ಮಂಡ್ಯ,ನ.22- ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಜೊತೆ ನಾನು ದೆಹಲಿಗೆ ತೆರಳಿದ್ದು, ಖಾಸಗಿ ಕೆಲಸಕ್ಕಷ್ಟೇ. ಅದಾಗಿಯೂ ಕೆಲ ರಾಷ್ಟ್ರೀಯ ನಾಯಕರನ್ನು ಭೇಟಿ ಮಾಡಿ ಮಂಡ್ಯ ಜಿಲ್ಲೆಗೆ ಹೆಚ್ಚುವರಿ ಸಚಿವ ಸ್ಥಾನವನ್ನು ಕೇಳಿದ್ದೇವೆ ಹೊರತು ಡಿ.ಕೆ.ಶಿವಕುಮಾರ್‌ರನ್ನು ಮುಖ್ಯಮಂತ್ರಿ ಮಾಡಿ ಎಂಬ ಬೇಡಿಕೆ ಇಟ್ಟಿಲ್ಲ ಎಂದು ಶಾಸಕ ರವಿ ಕುಮಾರ್ ಗಣಿಗ ಸ್ಪಷ್ಟಪಡಿಸಿದರು.

ನಗರದ ಬಂದೀಗೌಡ ಬಡಾವಣೆಯಲ್ಲಿರುವ ತಮ್ಮ ನಿವಾಸದಲ್ಲಿ ಸುದ್ದಿ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಸುಪ್ರೀಂಕೋರ್ಟ್‌ನಲ್ಲಿ ನನ್ನ ವೈಯಕ್ತಿಕ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ದೆಹಲಿಗೆ ತೆರಳಬೇಕಿತ್ತು ಕೃಷಿ ಸಚಿವ ಚಲುವರಾಯಸ್ವಾಮಿ ಅವರು ಕೇಂದ್ರ ಕೃಷಿ ಸಚಿವರು ಹಾಗೂ ಇನ್ನಿತರೆ ಅಧಿಕಾರಿಗಳನ್ನು ಭೇಟಿ ಮಾಡಬೇಕಿತ್ತು. ಹಾಗಾಗಿ ಮಂಡ್ಯ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸ್ಥಾನಕ್ಕೆ ಸಂಬಂಧಿಸಿದಂತೆ ಸಭೆ ಮುಗಿಸಿ ಇಬ್ಬರು ಜೊತೆಯಲ್ಲೇ ದೆಹಲಿಗೆ ಹೋದೆವು. ಆದರೆ ಅಕ್ಕಪಕ್ಕ ಜಿಲ್ಲೆಯ ಕೆಲ ಶಾಸಕರು ಸಹ ನಮ್ಮೊಂದಿಗೆ ದೆಹಲಿಗೆ ಬಂದಿದ್ದಾರೆಂಬುದು ಕೇವಲ ಊಹಾಪೋಹ. ಒಂದು ವೇಳೆ ಅವರು ದೆಹಲಿಗೆ ಬಂದಿದ್ದರೆ ನಮ್ಮ ಸಂಪರ್ಕದಲ್ಲಿರಲಿಲ್ಲ ಎಂದರು.

ದೆಹಲಿಗೆ ಹೋದಂತಹ ಸಂದರ್ಭದಲ್ಲಿ ವರಿಷ್ಠರು ಅಥವಾ ರಾಷ್ಟ್ರೀಯ ನಾಯಕರನ್ನು ಭೇಟಿ ಮಾಡುವುದು ಕಾಂಗ್ರೆಸ್ಸಿಗರಾದ ನಮ್ಮ ಕರ್ತವ್ಯ. ಆ ಪ್ರಕಾರವಾಗಿ ಕೆಲ ನಾಯಕರನ್ನು ಭೇಟಿ ಮಾಡಿದ್ದು, ಮಂಡ್ಯ ಜಿಲ್ಲೆಗೆ ಈಗಾಗಲೇ ಓರ್ವರನ್ನು ಸಚಿವರನ್ನಾಗಿ ನೇಮಿಸಲಾಗಿದೆ. ಸಚಿವರಾಗಿರುವ ಎನ್.ಚಲುವರಾಯಸ್ವಾಮಿ ಅವರು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಂಪುಟ ವಿಸ್ತರಣೆಯಾದರೆ ಜಿಲ್ಲೆಗೆ ಇನ್ನೊಂದು ಸಚಿವ ಸ್ಥಾನ ಸ್ಥಾನಬೇಕೆಂದು ಬೇಡಿಕೆ ಇಟ್ಟಿದ್ದೇವೆ. ನನಗಾಗಲಿ, ಶ್ರೀರಂಗಪಟ್ಟಣ ಶಾಸಕ ರಮೇಶ್ ಬಂಡಿಸಿದ್ದೇಗೌಡರಿಗಾಗಲಿ ಅಥವಾ ಮದ್ದೂರು ಶಾಸಕ ಉದಯ್ ಅವರಿಗಾಗಲಿ ಸಚಿವ ಸ್ಥಾನ ಕೊಡಿ ಎಂದು ಒತ್ತಾಯ ಮಾಡಿ ಬಂದಿದ್ದೇವೆ ಎಂದು ಹೇಳಿದರು.

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಬೇಕೆಂಬ ಬಯಸುವವರಲ್ಲಿ ನಾನು ಒಬ್ಬ. ಅವರು ಪಕ್ಷಕ್ಕಾಗಿ ದುಡಿದಿದ್ದಾರೆ. ಪಕ್ಷ ಕಟ್ಟಿದ್ದಾರೆ. ನಾನು ಸೇರಿದಂತೆ ಹಲವರು ಶಾಸಕರಾಗುವಲ್ಲಿ ಡಿಕೆಶಿ ಅವರ ಪಾತ್ರ ದೊಡ್ಡದಿದೆ. ಆದರೆ ಅವರು ಯಾವ ಸನ್ನಿವೇಶದಲ್ಲಿ ಅಥವಾ ಯಾವ ಗಳಿಗೆಯಲ್ಲಿ ಬೇಕಾದರೂ ಮುಖ್ಯಮಂತ್ರಿಯಾಗಬಹುದು. ಆ ಗಳಿಗೆ ನಿರ್ಧರಿಸುವವರು ಹೈಕಮಾಂಡ್ ಮಾತ್ರ ಎಂದು ಸ್ಪಷ್ಟಪಡಿಸಿದರು.

ಸಿದ್ದರಾಮಯ್ಯ ಸಹ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಿದ್ದು ಮತ್ತು ಡಿಕೆಶಿ ಜೊತೆಗೆ ನಮ್ಮ ಪಕ್ಷದ 140 ಶಾಸಕರು ಇದ್ದಾರೆ. ನಮ್ಮಲ್ಲಿ ಯಾವುದೇ ಬಣ ಬಡಿದಾಟವಿಲ್ಲ, ಕೆಲ ಶಾಸಕರು ಸಿದ್ದರಾಮಯ್ಯ ಅಥವಾ ಡಿ.ಕೆ.ಶಿವಕುಮಾರ್ ಪರ ಮಾತನಾಡಿದರೆ ಅದು ಅವರ ವೈಯಕ್ತಿಕ. ಈ ಎಲ್ಲಾ ಗೊಂದಲಗಳಿಗೆ ಶೀಘ್ರದಲ್ಲೇ ಹೈಕಮಾಂಡ್ ತೆರೆ ಎಳೆಯಬೇಕು. ಜೊತೆಗೆ ಸೂಕ್ತ ಸಂದರ್ಭದಲ್ಲಿ ಹೈಕಮಾಂಡ್ ಒಳ್ಳೆಯ ತೀರ್ಮಾನ ಕೈಗೊಳ್ಳಲಿದೆ ಎಂದರು.

ಇಂದು ಕೆರಗೋಡಿನಲ್ಲಿ ಗಣೇಶಮೂರ್ತಿ ವಿಸರ್ಜನೆ: ಕೆರಗೋಡಿನ ಪಡುವಲಬಾಗಿಲು ಆಂಜನೇಯ ದೇಗುಲದ ಬಳಿ ಪ್ರತಿಷ್ಠಾಪಿಸಿರುವ ಗಣೇಶಮೂರ್ತಿ ವಿಸರ್ಜನೆಯನ್ನು ಭಾನುವಾರ ವಿಜೃಂಭಣೆಯಿಂದ ನಡೆಯಲಿದೆ ನಾನು ಸೇರಿದಂತೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಭಾಗಿಯಾಗಲಿದ್ದೇವೆ ಎಂದು ಹೇಳಿದರು.

ನಾಳೆ ಸಂಜೆ ಮಂಡ್ಯ ನಗರದ ಕಾಳಿಕಾಂಬ ದೇಗುಲದಲ್ಲಿ ವಿಶೇಷ ಪೂಜೆ ಸಲ್ಲಿಸಿ ನಾನು ಮತ್ತು ಚಲುವರಾಯಸ್ವಾಮಿ ಅವರು ಬೈಕ್ ರ್‍ಯಾಲಿ ಮೂಲಕ ಕೆರಗೋಡು ತಲುಪಲಿದ್ದು, ಅಲ್ಲೂ ಸಹ ಕರ್ನಾಟಕದ ನಂ.1 ಡಿಜೆ ಸೇರಿದಂತೆ ಆಂಜನೇಯ ಮೂರ್ತಿ ಮೆರವಣಿಗೆ, ಹತ್ತಾರು ಕಲಾತಂಡದೊಂದಿಗೆ ಸಂಜೆ 4 ಗಂಟೆಗೆ ಆರಂಭವಾಗಲಿರುವ ಮೆರವಣಿಗೆ ರಾತ್ರಿಯವರೆಗೂ ಕೆರಗೋಡಿನ ಪ್ರತಿ ಬೀದಿಯಲ್ಲೂ ಸಂಚರಿಸಲಿದೆ ಎಂದರು.

ಕೆ.ಆರ್.ಪೇಟೆ ಬಳಿ ತೆರೆದ ಬಾವಿಗೆ ಬಿದ್ದು ಇಂಜಿನಿಯರ್ ವಿದ್ಯಾರ್ಥಿ ಆತ್ಮಹತ್ಯೆ



ಕೆ.ಆರ್.ಪೇಟೆ: ತೆರೆದ ಬಾವಿಗೆ ಬಿದ್ದು ಇಂಜಿನಿಯರಿಂಗ್ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ವರದಿಯಾಗಿದೆ ಅಘಲಯ-ದೊಡ್ಡಸೋಮನಹಳ್ಳಿ ತಿರುವಿನಲ್ಲಿರುವ ತೆರೆದ ಕಪಿಲೆ ಬಾವಿಯ ದಡದಲ್ಲಿ ಸುಮಾರು 3ಲಕ್ಷ ಬೆಲೆ ಬಾಳುವ ಬೈಕ್, 50 ಸಾವಿರ ಬೆಲೆ ಬಾಳುವ ಮೊಬೈಲ್ ಬಿಟ್ಟು ಕಪಿಲೆ ಬಾವಿಗೆ ಹಾರಿ ಕಿರಣ್ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ.

ಬಾವಿಯ ದಡದಲ್ಲಿ ಈತನ ಕಾಲೇಜು ಬ್ಯಾಗ್ ದೊರೆತಿದ್ದು ಆಧಾರ್ ಕಾರ್ಡ್ ಸಿಕ್ಕಿದ್ದು ಈತ ಕಡೂರು ತಾಲೂಕಿನ ಹಳೆಸಿದ್ದರಹಳ್ಳಿ (ಎಮ್ಮೆದೊಡ್ಡಿ) ಗ್ರಾಮದ ಸಿದ್ದಪ್ಪ ಅವರ ಮಗ ಕರಣ್.ಎಸ್(22) ಎಂದು ಗುರುತಿಸಲಾಗಿದೆ.

ಮೃತನು ಶ್ರವಣಬೆಳಗೊಳ ಶ್ರೀ ಬಾಹುಬಲಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದುತ್ತಿದ್ದು ಪ್ರೇಮ ವೈಫಲ್ಯದಿಂದ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತಪಡಿಸಲಾಗಿದೆ. ಜೊತೆಗೆ ಮುಖದ ಭಾಗಕ್ಕೆ ಗಾಯಗಳಾಗಿದ್ದು ಪೊಲೀಸರು ತನಿಖೆ ನಡೆಸಿ ಸಾವಿಗೆ ನಿಖರ ಕಾರಣವನ್ನು ಪತ್ತೆ ಮಾಡಬೇಕಾಗಿದೆ.

ಕೆ.ಆರ್.ಪೇಟೆ ಟೌನ್ ಪೊಲೀಸ್ ಠಾಣಾ ವ್ಯಾಪ್ತಿಯ ಅಘಲಯ-ದೊಡ್ಡಸೋಮನಹಳ್ಳಿ ಗ್ರಾಮದಲ್ಲಿ ಧಾರುಣ ಘಟನೆ ನಡೆದಿದ್ದು, ಸ್ಥಳಕ್ಕೆ ಸರ್ಕಲ್ ಇನ್ಸ್‌ಪೆಕ್ಟರ್ ಸುಮಾರಾಣಿ ಭೇಟಿ ನೀಡಿ ಮೃತ ದೇಹವನ್ನು ನೀರಿನಿಂದ ಮೇಲೆತ್ತಿ ವೈದ್ಯಕೀಯ ಪರೀಕ್ಷೆಗಾಗಿ ಕೆ.ಆರ್.ಪೇಟೆ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದ್ದು, ಪೋಷಕರಿಗೆ ವಿಷಯ ಮುಟ್ಟಿಸಲಾಗಿದೆ.

ಇಂಜಿನಿಯರ್ ಆಗಲು ಬಂದು ತಮ್ಮ ಪುತ್ರ ಹೆಣವಾಗಿರುವುದನ್ನು ಕಂಡು ಪೋಷಕರು ಮತ್ತು ಬಂಧುಗಳ ಆಕ್ರಂಧನ ಮುಗಿಲು ಮುಟ್ಟಿತ್ತು.

ಕೊಂಡೋತ್ಸವ



ಶ್ರೀರಂಗಪಟ್ಟಣ ಪಾಲಹಳ್ಳಿ ಶಂಭುಲಿಂಗೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನೆರವೇರಿತು.

ನ.27 ರಂದು ಪರಿಶಿಷ್ಟ ಜಾತಿ, ವರ್ಗಗಳ ಕುಂದು ಕೊರತೆ ಸಭೆ

ಮಂಡ್ಯ, ನ.22- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಜಿಲ್ಲಾ ಮಟ್ಟದ ಕುಂದು ಕೊರತೆ ಬಗ್ಗೆ ಚರ್ಚಿಸಿ ಇತ್ಯಾರ್ಥಪಡಿಸಲು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಕುಂದು ಕೊರತೆ ಸಭೆಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನ.27 ರಂದು ಮಂಡ್ಯ ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದು, ಬೆಳಿಗ್ಗೆ 11 ಗಂಟೆಗೆ ಪಾಂಡವಪುರ ಉಪ ವಿಭಾಗ ಮತ್ತು ಮಧ್ಯಾಹ್ನ 2 ಗಂಟೆಗೆ ಮಂಡ್ಯ ಉಪ ವಿಭಾಗದ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಕುಂದು ಕೊರತೆ ಬಗ್ಗೆ ಚರ್ಚಿಸಲಾಗುವುದು. ಮಂಡ್ಯ ಜಿಲ್ಲಾ ವ್ಯಾಪ್ತಿಯ ನೊಂದಾಯಿತ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಸಂಘ, ಸಂಸ್ಥೆಯ ವತಿಯಿಂದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಸದರಿ ಸಭೆಗೆ ಹಾಜರಾಗುವಂತೆ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಕ್ಲೈಮ್ಯಾಕ್ಸ್ ನಿರೀಕ್ಷೆ

ತಮ್ಮನ್ನು ಬೆಂಬಲಿಸುವಂತೆ ಮನವೊಲಿಕೆ ಪ್ರಯತ್ನವನ್ನೂ ನಡೆಸಿದ್ದಾರೆ. ಕರ್ನಾಟಕ ಕಾಂಗ್ರೆಸ್‌ನಲ್ಲಿ ಭುಗಿಲೆದ್ದಿರುವ ಅಧಿಕಾರ ಹಸ್ತಾಂತರ ವಿಷಯಕ್ಕೆ ಶೀಘ್ರವೇ ತೆರೆ ಎಳೆಯದಿದ್ದರೆ, ಇರುವ ಅಧಿಕಾರವೂ ಹೋಗಲಿದೆ ಎಂಬ ಭಯ ಕೆಲವು ಶಾಸಕರಿಗೆ ಕಾಡುತ್ತಿದೆ. ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ, ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಮತ್ತೊಬ್ಬ ಪ್ರಧಾನ ಕಾರ್ಯದರ್ಶಿ ರಣದೀಪ್‌ಸಿಂಗ್ ಸುರ್ಜೇವಾಲ ಅವರು ಶಿವಕುಮಾರ್ ಪರ ನಿಂತಿದ್ದಾರೆ. ಈ ಮೂವರೂ ನಾಯಕರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನಖರ್ಗೆ ಅವರಿಗೆ ಅಧಿಕಾರ ಹಸ್ತಾಂತರ ವಿಷಯವನ್ನು ಸುಲಲಿತವಾಗಿ ಬಗೆಹರಿಸುವ ಜವಾಬ್ದಾರಿ ನೀಡಿದ್ದಾರೆ. ಶಿವಕುಮಾರ್ ಪಕ್ಷದ ನಿಷ್ಠಾವಂತ ನಾಯಕ, ಅವರಿಗೆ ಸಿಗಬೇಕಾದ ಅಧಿಕಾರ ಕೊಡಬೇಕಿದೆ ಎಂಬ ವಿಚಾರವನ್ನು ಖರ್ಗೆ ಗಮನಕ್ಕೆ ತಂದಿದ್ದಾರೆ. ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಕರ್ನಾಟಕ ಕಾಂಗ್ರೆಸ್ ಮತ್ತು ಸರ್ಕಾರದ ಬಗ್ಗೆ ಇದೂವರೆಗೆ ಯಾವುದೇ ದೃಢ ನಿಲುವು ತಳೆದಿಲ್ಲ. ಅಧಿಕಾರ ಹಸ್ತಾಂತರ ಕುರಿತಂತೆ ತಮ್ಮ ನಿಲುವು ಏನೆಂಬುದನ್ನು ರಾಹುಲ್ ಬಹಿರಂಗಪಡಿಸದಿರುವುದು ಖರ್ಗೆ ಅವರನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ವಿದೇಶ ಪ್ರವಾಸದಲ್ಲಿರುವ ರಾಹುಲ್ ಬರುವುದಕ್ಕೂ ಮುನ್ನ ಒಂದು ಸೂತ್ರ ಸಿದ್ಧಪಡಿಸಲು ಖರ್ಗೆ ಕಸರತ್ತು ನಡೆಸಿದ್ದಾರೆ. ಸೋನಿಯಾ, ಪ್ರಿಯಾಂಕಾ, ರಾಜ್ಯ ಉಸ್ತುವಾರಿ ಸುರ್ಜೇವಾಲ ನೀಡಿರುವ ಮಾಹಿತಿಯನ್ನು ಸಿದ್ದರಾಮಯ್ಯ ಅವರಿಗೆ ತಲುಪಿಸಿರುವ ಖರ್ಗೆ 2-3 ದಿನದಲ್ಲಿ ಈ ಬಗ್ಗೆ ನಿಮ್ಮ ನಿಲುವನ್ನು ಪಕ್ಷಕ್ಕೆ ತಿಳಿಸಿ ಎಂಬ ಸಂದೇಶ ರವಾನಿಸಿದ್ದಾರೆ. ಸರ್ಕಾರ ರಚನೆಗೂ ಮುನ್ನ ಆಗಿರುವ ಒಪ್ಪಂದವನ್ನು ಪಾಲಿಸುವಂತೆ ಶಿವಕುಮಾರ್ ವರಿಷ್ಠರನ್ನು ಕೋರಿದ್ದಾರೆ. ಒಪ್ಪಂದ ನಡೆದಿದೆ. ಈಗ ನೀವೇ ಇದರ ಬಗ್ಗೆ ನಿರ್ಣಯಕ್ಕೆ ಬನ್ನಿ, ನಿಮ್ಮ ನಿರ್ಧಾರದ ನಂತರ ರಾಹುಲ್ ಸ್ವದೇಶಕ್ಕೆ ಹಿಂತಿರುಗಿದ ನಂತರ ಅವರೊಂದಿಗೆ ಚರ್ಚಿಸಿ ಪಕ್ಷದ ತೀರ್ಮಾನ ತಿಳಿಸುತ್ತೇವೆ ಎಂದಿದ್ದಾರೆ ಖರ್ಗೆ. ಡಿ.1ರಿಂದ ಆರಂಭಗೊಳ್ಳುತ್ತಿರುವ ಸಂಸತ್ ಅಧಿವೇಶನದಲ್ಲಿ ಪಾಲ್ಗೊಳ್ಳಲು ರಾಹುಲ್ ಸ್ವದೇಶಕ್ಕೆ ಮರಳಲಿದ್ದಾರೆ. ಅದುವರೆಗೂ ರಾಜ್ಯ ಕಾಂಗ್ರೆಸ್ ನಾಯಕತ್ವ ಕಗ್ಗಂಟು ಹೀಗೇ ಮುಂದುವರೆಯುವ ಸಾಧ್ಯತೆ ಇದೆ.

ಅಧಿಕಾರ ಹಂಚಿಕೆ ಜಟಾಪಟಿ ನಡುವೆ ಒಂದೇ ವೇದಿಕೆ ಏರಿದ ಸಿಎಂ-ಡಿಸಿಎಂ!



ಬೆಂಗಳೂರು,ನ.22(ಕೆಎಂಶಿ)-ಅಧಿಕಾರ ಹಂಚಿಕೆ ಜಟಾಪಟಿ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡರು.

ಪಶುವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿ ನಡೆದ ಮತ್ಸ್ಯಮೇಳ ಕಾರ್ಯಕ್ರಮದಲ್ಲಿ ಭಾಗವಹಿಸಿದ ಉಭಯ ನಾಯಕರು ಯಾವುದೇ ರಾಜಕೀಯ ಮತಭೇದ ಇಲ್ಲವೆಂಬಂತೆ ನಡೆದುಕೊಂಡರು. ಒಟ್ಟಿಗೆ ಇಬ್ಬರೂ ಮೇಳದ ಮಳಿಗೆಗಳನ್ನು ವೀಕ್ಷಿಸಿ ನಂತರ ವೇದಿಕೆ ಮೇಲೂ ಅಕ್ಕಪಕ್ಕದಲ್ಲೇ ಕುಳಿತು ಎಂದಿನಂತೆ ಮಾತಿನಲ್ಲಿ ತಲ್ಲೀನರಾಗಿದ್ದರು. ಕಳೆದ ಎರಡು ದಿನಗಳಿಂದ ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸದೆ ಮನೆಯಲ್ಲೇ ಕುಳಿತು ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದಂತೆ ಪಕ್ಷದ ಶಾಸಕರು ಮತ್ತು ಮುಖಂಡರ ಜೊತೆ ಸಮಾಲೋಚನೆ ನಡೆಸಿದ್ದ ಶಿವಕುಮಾರ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಲ್ಲದೆ, ವಿಧಾನಸೌಧಕ್ಕೆ ಧಾವಿಸಿ ಇಲಾಖಾ ಅಧಿಕಾರಿಗಳೊಂದಿಗೆ ಎರಡು ಸಭೆಗಳನ್ನೂ ನಡೆಸಿದರು.

ಗ್ರಂಥಾಲಯ ಸಪ್ತಾಹ ಸಮಾರೋಪ



ಕುವೆಂಪುನಗರ ಶಾಖಾ ಗ್ರಂಥಾಲಯದಲ್ಲಿ ಗ್ರಂಥಾಲಯ ಸಪ್ತಾಹದ ಸಮಾರೋಪ ಸಮಾರಂಭವನ್ನು ವಿದ್ಯಾವರ್ಧಕ ಕಾಲೇಜಿನ ಗ್ರಂಥಪಾಲಕ ಮಹದೇಶ್ ಗೌಡ ಜ್ಯೋತಿ ಬೆಳಗುವ ಮೂಲಕ ಉದ್ಘಾಟಿಸಿದರು. ಶಾಖಾ ಸಮಿತಿ ಸದಸ್ಯ ಎ.ಜಿ.ದೇವರಾಜು, ಗ್ರಂಥಪಾಲಕ ರಮೇಶ್ ಉಪಸ್ಥಿತರಿದ್ದರು.

ಬೀದಿನಾಯಿಗಳ ವಿಚಾರ; ಸುಪ್ರೀಂ ತೀರ್ಪಿಗೆ ಪಿಎಫ್‌ಐ ಅಸಮಾಧಾನ



ಪಿಎಫ್‌ಎ ವತಿಯಿಂದ ಮೈಸೂರಿನ ಚೆಲುವಾಂಬ ಪಾರ್ಕ್ ಮುಂಭಾಗದಲ್ಲಿ ಶನಿವಾರ ಸಂಜೆ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ನ.22(ವಿವಿಹೆಚ್)-ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಆಸ್ಪತ್ರೆಗಳ ಆವರಣಕ್ಕೆ ಬೀದಿನಾಯಿಗಳು ಪ್ರವೇಶಿಸುವುದನ್ನು ತಡೆಯುವ ಮೂಲಕ ನಾಯಿ ಕಡಿತದ ಘಟನೆಗಳನ್ನು ತಡೆಗಟ್ಟಬೇಕು. ಅಲ್ಲದೆ, ಅಲ್ಲಿಂದ ಹಿಡಿದು ತಂದ ಬೀದಿನಾಯಿಗಳನ್ನು ಮತ್ತೆ ಅದೇ ಸ್ಥಳಕ್ಕೆ ಬಿಡಬಾರದು ಎಂದು ಸುಪ್ರೀಂಕೋರ್ಟ್ ನೀಡಿರುವ ತೀರ್ಪಿಗೆ ಅಸಮಾಧಾನ ವ್ಯಕ್ತಪಡಿಸಿ ಪೀಪಲ್ ಫಾರ್ ಅನಿಮಲ್ಸ್ (ಪಿಎಫ್‌ಎ) ಪ್ರತಿಭಟನೆ ನಡೆಸಿದರು.

ವಿವಿ ಮೊಹಲ್ಲಾದ ಚೆಲುವಾಂಬ ಪಾರ್ಕ್ ಮುಂಭಾದಲ್ಲಿ ಶನಿವಾರ ಸಂಜೆ ವಿವಿಧ ಘೋಷ ವಾಕ್ಯಗಳನ್ನು ಕೂಗುತ್ತಾ ಪ್ರತಿಭಟಿಸಿದರು. ಚೆಲುವಾಂಬ ಪಾರ್ಕ್ ಸುತ್ತಲೂ ಮೊಂಬತ್ತಿ ಹಿಡಿದು ಜಾಥಾ ಮಾಡಿದರು. ಪ್ರತಿಭಟನೆಗೆ ವಿದೇಶಿ ಮಹಿಳೆಯರು, ಶ್ವಾನ ಪ್ರಿಯರು ಸಾಥ್ ನೀಡಿದರು.

ಜಾಥಾ ಬಳಿಕ ಮಾತನಾಡಿದ ಪಿಎಫ್‌ಎನ ವ್ಯವಸ್ಥಾಪಕ ನಿರ್ದೇಶಕ ಕರ್ನಲ್ ಡಾ.ನವಾಜ್ ಷರೀಫ್, ನ.7ರಂದು ಬೀದಿ ನಾಯಿಗಳ ಹಿಡಿದು, ಆಶ್ರಯ ಸ್ಥಾನಗಳಿಗೆ ಸ್ಥಳಾಂತರಿಸುವಂತೆ ನೀಡಿರುವ ತೀರ್ಪು ನ್ಯಾಯಯುತವಾಗಿಲ್ಲ ಎಂದರು.

ನಾಯಿಗಳಿಂದ ಮನುಷ್ಯರಿಗೆ ಅನಗತ್ಯ ತೊಂದರೆಗಳು ಎಂದಿಗೂ ಬರುವುದಿಲ್ಲ. ಬೀದಿನಾಯಿಗಳನ್ನು ಹಿಡಿದು ಬೇರೆಡೆಗೆ ಸ್ಥಳಾಂತರಿಸಿದರೆ, ಮನುಷ್ಯ ವಾಸಿಸುವ ಸ್ಥಳಕ್ಕೆ ಇತರೆ ಪ್ರಾಣಿಗಳು ಪ್ರವೇಶ ಮಾಡುತ್ತವೆ. ನಾಯಿಗಳು ಇಲ್ಲದೇ ಹೋದಲ್ಲಿ ಕೋತಿಗಳು, ಇಲಿಗಳ ಸಂಖ್ಯೆಯಲ್ಲಿ ಏರಿಕೆ ಕಾಣಲಿದೆ. ಇಲಿಗಳ ಸಂಖ್ಯೆ ಹೆಚ್ಚಾದರೆ ಮನುಷ್ಯ ಪ್ಲೇಗ್ ಸೇರಿದಂತೆ ನಾನಾ ಕಾಯಿಲೆಗಳಿಗೆ ತುತ್ತಾಗುತ್ತಾನೆ ಎಂದರು.

ನಾಯಿಗಳ ಸಂತತಿ ಹೆಚ್ಚಾಗದಂತೆ ಸಂತಾನಹರಣ ಚಿಕಿತ್ಸೆ ಮಾಡಿದರಾಯಿತು. ಜೊತೆಗೆ ಅವುಗಳು ಕಚ್ಚಿದರೂ ಏನು ಆಗದಂತೆ ವ್ಯಾಕ್ಸಿನ್ ಮಾಡಿ ಅವುಗಳನ್ನು ತಮ್ಮ ಪಾಡಿಗೆ ಬಿಡುವುದರ ಬಗ್ಗೆ ಚಿಂತನೆ ನಡೆಸಬೇಕು. ಅದನ್ನು ಬಿಟ್ಟು ಏಕಾಏಕಿ ಹಿಡಿದು ಬೇರೆಡೆಗೆ ಸ್ಥಳಾಂತರಿಸುವುದು ಸರಿಯಲ್ಲ ಎಂದು. ಈ ತೀರ್ಪನ್ನು ಪ್ರಶ್ನಿಸಿ ನ.27ರಂದು ಸುಪ್ರೀಂಗೆ ಮರು ಪರಿಶೀಲನೆ ಮೇಲ್ಮನವಿ ಸಲ್ಲಿಸಲಾಗುವುದು ಎಂದರು. ಪಿಎಫ್‌ಎ ಸಂಸ್ಥಾಪಕಿ, ವ್ಯವಸ್ಥಾಪಕ ನಿರ್ದೇಶಕಿ ಸವಿತಾ ನಾಗಭೂಷಣಂ, ಡಾ.ರಾಜ್ ಪ್ರೇಮಿ ಶೆಟ್ಟಿ, ಡಾ.ಅರ್ಮದೀಪ್, ಪ್ರಾಣಿ ಮತ್ತು ಪರಿಸರ ಕಾರ್ಯಕರ್ತರಾದ ಮಾಲಿನಿ ಪಾಲಕ್ವಾ, ಕೆಆರ್‌ಎಸ್ ಪಕ್ಷದ ಅಧ್ಯಕ್ಷೆ ಸುಧಾಕರ್ ಸುಧಿ, ಕಾವ್ಯ ಚಂದ್ರಶೇಖರ್, ಕಲಾವಿದ ಸ್ವಾ ್ಯನಿ ಇನ್ನಿತರರು ಉಪಸ್ಥಿತರಿದ್ದರು.

ಕೊಂಡೋತ್ಸವ...



ಮೈಸೂರಿನ ಹುಲ್ಲಿನಬೀದಿಯ ಶ್ರೀ ಮಲೈ ಮಹದೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಜರುಗಿದ ಕಾರ್ತಿಕ ಮಾಸದ ಕೊಂಡೋತ್ಸವಕ್ಕೆ ಕುದೇರು ಮಠದ ಶ್ರೀ ಗುರುಶಾಂತ ಮಹಾಸ್ವಾಮಿಗಳು ಚಾಲನೆ ನೀಡಿದರು. ಈ ವೇಳೆ ಶ್ರೀ ಚಂದ್ರಶೇಖರ ಸ್ವಾಮೀಜಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮುಖಂಡರಾದ ಹರೀಶ್, ಮದನ್, ಗುಣಶೇಖರ್, ಮಹ್ಮದ್ ಫಾರೂಖ್ ಮತ್ತಿತರರು ಉಪಸ್ಥಿತರಿದ್ದರು.

ಬಂಡೀಪುರ ಅರಣ್ಯದಲ್ಲಿ ವಾಹನ ತಡೆದು 1.50 ಕೋಟಿ ಮೌಲ್ಯದ ಚಿನ್ನ ದರೋಡೆ

- ಕೇರಳದ ಆಭರಣ ತಯಾರಕನ ಬೆನ್ನತ್ತಿದ್ದ ದುಷ್ಕರ್ಮಿಗಳು: ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ದುಷ್ಕೃತ್ಯ
- ಮಾಹಿತಿ ಇದ್ದವರಿಂದಲೇ ದರೋಡೆ ಸಂಚು ಶಂಕೆ





ಗುಂಡ್ಲುಪೇಟೆ, ನ.22(ಸೋಮ್‌ಜಿ)- ಬೆಂಗಳೂರಿನಲ್ಲಿ ಹಾಡಹಗಲೇ ಎಟಿಎಂಗೆ ಹಣ ತುಂಬಿಸುತ್ತಿದ್ದ ವಾಹನ ಅಡ್ಡಗಟ್ಟಿ 7.11 ಕೋಟಿ ರೂ. ದರೋಡೆ ನಡೆದ ಮರುದಿನವೇ (ನ.20) ಗುಂಡ್ಲು ಪೇಟೆ ತಾಲೂಕು ಬಂಡೀಪುರ ಅರಣ್ಯದ ಮದ್ದೂರು ಚೆಕ್ ಪೋಸ್ಟ್ ಬಳಿ ಕಾರನ್ನು ತಡೆದು 1.50 ಕೋಟಿ ರೂ. ಮೌಲ್ಯದ 1 ಕೆ.ಜಿ. 319 ಗ್ರಾಂ ಚಿನ್ನದ ಗಟ್ಟಿಗಳನ್ನು ದರೋಡೆ ಮಾಡಿರುವ ಘಟನೆ ತಡವಾಗಿ ವರದಿಯಾಗಿದೆ.

ಕೇರಳದ ಕೋಝಿಕೋಡ್ ನಿವಾಸಿಯಾಗಿರುವ ಅಕ್ಕಸಾಲಿಗ ವಿನು(49) ಹಾಗೂ ಅವರ ಕಾರಿನ ಚಾಲಕ ಸಮೀರ್ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ ದುಷ್ಕರ್ಮಿಗಳು ನ.21ರ ರಾತ್ರಿಯೇ ದರೋಡೆ ನಡೆಸಿದ್ದರೂ, ವಿನು ಅವರು ಇಂದು (ನ.22) ಬೆಳಗ್ಗೆ 9.30ಕ್ಕೆ ಗುಂಡ್ಲುಪೇಟೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ವಿವರ: ಕೋಝಿಕೋಡ್‌ನಲ್ಲಿ ವಿನು ಅವರ ಸಹೋದರ ಬಿಜು ಅವರು ಕ್ಯಾಪಿಟಲ್ ಗೋಲ್ಡ್ ಹೆಸರಿನಲ್ಲಿ ಚಿನ್ನಾಭರಣ ತಯಾರಿಕಾ ಅಂಗಡಿಯನ್ನಿಟ್ಟುಕೊಂಡಿದ್ದು, ಇವರು ಮಂಡ್ಯದ ರಾಜೇಶ್ ಎಂಬುವರ ಜುವೆಲರ್ಸ್ ಶಾಪ್‌ನಿಂದ ಚಿನ್ನದ ಆಭರಣಗಳ ತಯಾರಿಕೆಗೆ ಆರ್ಡರ್ ಪಡೆದು, ಅವರಿಂದಲೇ ಚಿನ್ನದ ಗಟ್ಟಿಗಳನ್ನು ತೆಗೆದುಕೊಂಡು ಹೋಗಿ ಆಭರಣ ಮಾಡಿದ ನಂತರ ಹಿಂತಿರುಗಿಸುತ್ತಿದ್ದರು.

ಅದೇ ರೀತಿ ನ.20ರಂದು ಬೆಳಗ್ಗೆ ವಿನು ಅವರು ತಮ್ಮ ಚಾಲಕ ಸಮೀರ್ ಅವರೊಂದಿಗೆ ಮಾರುತಿ ಬ್ರೀಜಾ ಕಾರಿನಲ್ಲಿ ಕೋಝಿಕೋಡ್‌ನಿಂದ ಮಧ್ಯಾಹ್ನ 1 ಗಂಟೆಗೆ ಹೊರಟು ಸಂಜೆ 5.30ರ ಸುಮಾರಿನಲ್ಲಿ ಕಡಕೊಳ-ಮೈಸೂರು ಮಧ್ಯೆ ಇರುವ ಟೋಲ್‌ಗೇಟ್‌ನ ಬಳಿ ಇರುವ ಪೆಟ್ರೋಲ್ ಬಂಕ್ ಸಮೀಪ ತಮ್ಮ ಕಾರನ್ನು ನಿಲ್ಲಿಸಿಕೊಂಡಿದ್ದರು.

ಸಂಜೆ 6.30ರ ಸುಮಾರಿನಲ್ಲಿ ಮಂಡ್ಯದ ರಾಜೇಶ್ ಅವರು ಬಾವೇಶ್ ಎಂಬುವರ ಮೂಲಕ 800 ಗ್ರಾಂ, 400 ಮಿಲಿ ತೂಕದ 24 ಕ್ಯಾರೆಟ್ ಚಿನ್ನದ ಗಟ್ಟಿ ಮತ್ತು 916 ಕ್ವಾಲಿಟಿಯ 518 ಗ್ರಾಂ 360 ಮಿಲಿ ಚಿನ್ನದ ಗಟ್ಟಿ ಸೇರಿ ಒಟ್ಟು 1318 ಗ್ರಾಂ 760 ಮಿಲಿ ತೂಕದ ಚಿನ್ನದ ಗಟ್ಟಿಗಳನ್ನು ಕೊಟ್ಟು ವಾಪಸ್ಸಾಗಿದ್ದರು.

ವಿನು ಅವರು ತಮ್ಮ ಕಾರಿನ ಗೇರ್ ಬಾಕ್ಸ್ ಬಳಿ ಇರುವ ಸೀಕ್ರೆಟ್ ಬಾಕ್ಸ್ ಒಳಗೆ ಚಿನ್ನದ ಗಟ್ಟಿಗಳನ್ನು ಇಟ್ಟು ನಂಜನಗೂಡು, ಬೇಗೂರು, ಗುಂಡ್ಲುಪೇಟೆ, ಭೀಮನಬೀಡು ಮಾರ್ಗವಾಗಿ ಟೋಲ್‌ಗೇಟ್ ದಾಟಿ ಗುಂಡ್ಲುಪೇಟೆ ತಾಲೂಕು ಮದ್ದೂರು ಅರಣ್ಯ ಚೆಕ್ ಪೋಸ್ಟ್‌ನಿಂದ ಸುಮಾರು 12 ಕಿ.ಮೀ. ದೂರ ಹೋಗಿದ್ದಾಗ ರಾತ್ರಿ 8.15ರ ಸುಮಾರಿನಲ್ಲಿ ಕಾಡಿನ ಮಧ್ಯೆ ಇನ್ನೋವಾ ಕಾರೊಂದು ಇವರ ಕಾರನ್ನು ಓವರ್ ಟೇಕ್ ಮಾಡಿ, ಅಡ್ಡಗಟ್ಟಿ ನಿಲ್ಲಿಸಿದೆ. ಅದೇ ವೇಳೆ ಮತ್ತೊಂದು ಇನ್ನೋವಾ ಹಾಗೂ ಇಟಿಯಾಸ್ ಕಾರು ಅಲ್ಲಿಗೆ ಬಂದಿದ್ದು, ಒಂದು ಕಾರಿನಲ್ಲಿದ್ದ ನಾಲ್ವರು ಚಾಲಕ ಸಮೀರ್‌ನನ್ನು ಕೆಳಗೆ ಎಳೆದುಕೊಂಡು ಆತನ ಮೇಲೆ ಹಲ್ಲೆ ನಡೆಸಿ ಅವರ ಕಾರಿನಲ್ಲಿ ಹಾಕಿಕೊಂಡಿದ್ದಾರೆ.

ಅಲ್ಲದೆ ವಿನು ಅವರ ಕಾರಿನ ಗಾಜುಗಳನ್ನು ಹ್ಯಾಮರ್‌ನಲ್ಲಿ ಒಡೆದು ಹಾಕಿದ್ದಲ್ಲದೇ, ಇವರ ಕಾರಿನಲ್ಲೇ ಬೇರೆ ನಾಲ್ವರು ಕುಳಿತುಕೊಂಡು ಎಲ್ಲಾ ಕಾರುಗಳನ್ನು ಹಿಂದಕ್ಕೆ ತಿರುಗಿಸಿಕೊಂಡು ಚೆಕ್‌ಪೋಸ್ಟ್‌ಗಳನ್ನು ದಾಟಿ ಮೈಸೂರು ಕಡೆಗೆ ಬರುವ ಮಾರ್ಗ ಮಧ್ಯೆ ಚಿನ್ನ ಎಲ್ಲಿದೆ ಎಂದು ಕೇಳುತ್ತಾ, ವಿನು ಅವರ ತಲೆ ಮೇಲೆ ಹ್ಯಾಮರ್‌ನಿಂದ ಹಲ್ಲೆ ನಡೆಸಿದ್ದಾರೆ. ಅದೇ ವೇಳೆ ಅಪಹರಣಕಾರರಿಗೆ ಕರೆ ಮಾಡಿದ್ದ ವ್ಯಕ್ತಿ ಗೇರ್ ಬಾಕ್ಸ್ ಬಳಿಯ ಸೀಕ್ರೆಟ್ ಬಾಕ್ಸ್‌ನಲ್ಲಿ ಚಿನ್ನ ಇರುತ್ತೆ ನೋಡು ಎಂದು ಹೇಳಲಾಗಿ, ದುಷ್ಕರ್ಮಿಗಳು ಸೀಕ್ರೆಟ್ ಬಾಕ್ಸ್ ಒಡೆದು, ಚಿನ್ನದ ಗಟ್ಟಿಗಳನ್ನು ಎತ್ತಿಕೊಂಡು ಅಂದು ಮಧ್ಯರಾತ್ರಿ 1 ಗಂಟೆ ಸುಮಾರಿನಲ್ಲಿ ಮೈಸೂರಿನ ಹೆದ್ದಾರಿಯಲ್ಲಿ ತಮ್ಮನ್ನು ಬಿಟ್ಟು ಹೋಗಿದ್ದಾರೆ ಎಂದು ವಿನು ನೀಡಿದ್ದ ದೂರನ್ನು ದಾಖಲಿಸಿಕೊಂಡಿರುವ ಗುಂಡ್ಲುಪೇಟೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ. ಘಟನಾ ಸ್ಥಳಕ್ಕೆ ಚಾಮರಾಜನಗರ ಎಸ್ಪಿ ಡಾ. ಟಿ.ಬಿ. ಕವಿತಾ, ಗುಂಡ್ಲುಪೇಟೆ ಠಾಣೆ ಸರ್ಕಲ್ ಇನ್ಸ್‌ಪೆಕ್ಟರ್ ಭೇಟಿ ನೀಡಿ ಪರಿಶೀಲಿಸಿದರು.

> **ಇದೊಂದು ಪೂರ್ವ ನಿಯೋಜಿತ ಕೃತ್ಯವಾಗಿದೆ. ಇವರು ಚಿನ್ನ ತರುವುದರ ಬಗ್ಗೆ ಮಾಹಿತಿ ಇರುವವರೇ ಕೃತ್ಯ ಎಸಗಿರಬಹುದು. ದರೋಡೆ ನಡೆದು 2 ದಿನದ ನಂತರ ದೂರು ನೀಡಿರುವುದಕ್ಕೆ ಕಾರಣ; ವಿನು ಅವರು ಗಾಯಗೊಂಡು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದೇ ಎಂದು ತಿಳಿಸಿದ್ದಾರೆ. ಜೊತೆಗೆ ಅವರ ಬಳಿ ಇದ್ದ ಚಿನ್ನದ ಬಗ್ಗೆ ಕೆಲವು ದಾಖಲೆಗಳನ್ನು ನಮಗೆ ನೀಡಿದ್ದಾರೆ. ಇವೆಲ್ಲವನ್ನೂ ಪರಿಶೀಲಿಸಲಾಗುತ್ತಿದೆ. ದರೋಡೆಕೋರರನ್ನು ಪತ್ತೆ ಹಚ್ಚಲು 3 ವಿಶೇಷ ತಂಡಗಳನ್ನು ರಚಿಸಲಾಗಿದೆ.**
>
> -ಡಾ.ಬಿ.ಟಿ.ಕವಿತಾ, ಚಾಮರಾಜನಗರ ಎಸ್ಪಿ.

ಮೈಸೂರು ಮಿತ್ರ

ಗ್ರಾಮ ಪಂಚಾಯಿತಿ ಕಚೇರಿಯಲ್ಲೇ ಕಾರ್ಯದರ್ಶಿ ಆತ್ಮಹತ್ಯೆ ಯತ್ನ

ಮೈಸೂರಿನ ವರುಣ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಘಟನೆ



ಮೈಸೂರು, ನ.22(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿನಿಧಿಸುತ್ತಿರುವ ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವರುಣ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಕಚೇರಿಯಲ್ಲೇ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಶುಕ್ರವಾರ (ನ.21)ದಂದು ನಡೆದಿದೆ.

ಮೈಸೂರಿನ ಹೂಟಗಳ್ಳಿಯ ವಾಸಿ, ವರುಣ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ದಿವ್ಯಾ ಆತ್ಮಹತ್ಯೆಗೆ ಯತ್ನಿಸಿದವರಾಗಿದ್ದಾರೆ. ಎಂದಿನಂತೆ ನಿನ್ನೆ ಬೆಳಿಗ್ಗೆ ಕಚೇರಿಗೆ ಬಂದ ದಿವ್ಯಾ, ಕರ್ತವ್ಯದ ವೇಳೆ ಅಸ್ವಸ್ಥರಾದರು. ಈ ವಿಚಾರವನ್ನು ಡೇಟಾ ಎಂಟ್ರಿ ಆಪರೇಟರ್, ಪಿಡಿಒ ಕುಮಾರ್ ಆರಾಧ್ಯ ಅವರಿಗೆ ತಿಳಿಸಿದ್ದಾರೆ. ಕೂಡಲೇ ಮೈಸೂರಿನ ಬನ್ನೂರು ರಸ್ತೆಯ ಕಾವೇರಿ ಆಸ್ಪತ್ರೆಗೆ ದಾಖಲು ಮಾಡಿದ್ದರು.

ದಿವ್ಯಾ ಅವರು ಪ್ಯಾರಸಿಟಮಲ್ ಸೇರಿದಂತೆ ಇತರೆ 13 ಮಾತ್ರೆಗಳನ್ನು ಒಟ್ಟಿಗೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂದು ಆಸ್ಪತ್ರೆ ವೈದ್ಯರು ಮಾಹಿತಿ ನೀಡಿದರು.

ತರುವಾಯ ಚಿಕಿತ್ಸೆ ನೀಡಿದ ವೈದ್ಯರು ದಿವ್ಯಾ ಅವರು ಸೇವಿಸಿದ್ದ ಮಾತ್ರೆಯ ವಿಷಕಾರಿ ಅಂಶವನ್ನು ಹೊರ ತೆಗೆದಿದ್ದಾರೆ. ಸದ್ಯ ದಿವ್ಯಾ ಅವರು ಅಪಾಯದಿಂದ ಪಾರಾಗಿದ್ದು, ಇಂದು ಐಸಿಯುನಿಂದ ವಾರ್ಡ್‌ಗೆ ಸ್ಥಳಾಂತರ ಮಾಡಲಾಗಿದೆ. ನಿವೇಶನದ ಖಾತೆ ಮಾಡಿಕೊಡುವ ವಿಚಾರಕ್ಕೆ ಸಂಬಂಧಿಸಿದಂತೆ ಸಹದ್ಯೋಗಿ ಜೊತೆ ಜಟಾಪಟಿ ನಡೆಯುತ್ತಿತ್ತು. ಇದರಿಂದ ಮಾನಸಿಕವಾಗಿ ನೊಂದಿದ್ದ ದಿವ್ಯಾ ಅವರು ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂದು ತಿಳಿದು ಬಂದಿದೆ. ಸದ್ಯ ದಿವ್ಯಾ ಚೇತರಿಸಿಕೊಳ್ಳುತ್ತಿದ್ದು, ಆತ್ಮಹತ್ಯೆಗೆ ಕಾರಣದ ಬಗ್ಗೆ ಪೊಲೀಸರಿಗೆ ಇನ್ನು ಹೇಳಿಕೆ ನೀಡಿಲ್ಲ.

ಶ್ರೀರಾಮಕೃಷ್ಣ ಆಶ್ರಮದಿಂದ ಮೈಸೂರಲ್ಲಿ ವೈಭವದ ವಿವೇಕಾ ಯಾತ್ರೆ





ಗಮನ ಸೆಳೆದ ವಿವೇಕಾನಂದರ ಮಾದರಿ ಉಡುಪು ಧರಿಸಿದ್ದ ವ್ಯಕ್ತಿ

ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಶತಮಾನೋತ್ಸವದ ಹಿನ್ನೆಲೆಯಲ್ಲಿ ವಿಜೃಂಭಣೆ ವಿವೇಕಯಾತ್ರೆ ನಡೆಯಿತು. ಬಲಚಿತ್ರದಲ್ಲಿ ವ್ಯಕ್ತಿಯೊಬ್ಬರು ವಿವೇಕಾನಂದರ ಹಾಗೆ ಉಡುಪು ಧರಿಸಿ ವಿವೇಕ ಸಂದೇಶ ಸಾರಿದರು.

ಮೈಸೂರು,ನ.22(ಜಿಎ)–ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಶತಮಾನೋತ್ಸವದ ಅಂಗವಾಗಿ ವಿವೇಕಾ ಯಾತ್ರೆಯನ್ನು ವಿಜೃಂಭಣೆಯಿಂದ ನಡೆಸಲಾಯಿತು.

ನಗರದ ನಾರಾಯಣ ಶಾಸ್ತ್ರೀ ರಸ್ತೆಯಲ್ಲಿರುವ ವಿವೇಕಾ ಸ್ಮಾರಕದಿಂದ ಆರಂಭಗೊಂಡ ವಿವೇಕಾ ಯಾತ್ರೆಯಲ್ಲಿ ಟಾಂಗಾದಲ್ಲಿ ಗೋವಿನ ಮೇಲೆ ಶ್ರೀಕೃಷ್ಣ ಕುಳಿತು ಕೊಳಲು ನುಡಿಸುವ ವಿಗ್ರಹವನ್ನು ಇರಿಸಲಾಗಿತ್ತು. ಮತ್ತೊಂದು ವಾಹನದಲ್ಲಿ ಸ್ವಾಮಿ ವಿವೇಕಾನಂದರ ಪ್ರತಿಮೆ ಇರಿಸಲಾಗಿತ್ತು. ವಿವೇಕಾನಂದ ರೀತಿ ಉಡುಪು ಧರಿಸಿ ವ್ಯಕ್ತಿಯೊಬ್ಬರು ವಿವೇಕಾ ಸಂದೇಶ ಸಾರಿದ್ದು, ಎಲ್ಲರ ಗಮನ ಸೆಳೆಯಿತು.

ವಿವೇಕಾ ಯಾತ್ರೆಯೂ ವಿವೇಕಾ ಸ್ಮಾರಕದಿಂದ ಹೊರಟು ದೇವರಾಜ ಅರಸು ರಸ್ತೆ, ದಿವಾನ್ಸ್ ರಸ್ತೆ, ಶಿವರಾಮ ಪೇಟೆ, ಸಂತೇಪೇಟೆ ರಸ್ತೆ, ದೇವರಾಜ ಅರಸು, ದಿವಾನ್ಸ್ ರಸ್ತೆ ಮೂಲಕ ಸಾಗಿ ಸದ್ವಿದ್ಯಾ ಪಾಠಶಾಲೆ ತಲುಪಿತು. ಯಾತ್ರೆಯಲ್ಲಿ ನೂರಾರು ಮಂದಿ ಪಾಲ್ಗೊಂಡಿದ್ದರು.

ವಿವೇಕಾ ಯಾತ್ರೆಗೂ ಮುನ್ನ ಸದ್ವಿದ್ಯ ಶಾಲೆಯಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಗೋ ಮಧುಸೂದನ್ ಮಾತನಾಡಿ, ಭಾರತ ವಿಶ್ವಗುರು ಆಗುವ ನಿಟ್ಟಿನಲ್ಲಿ ಸಾಗುತ್ತಿದೆ. ಇದಕ್ಕೆ ಭದ್ರ ಬುನಾದಿ ಹಾಕಿದ್ದೇ ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣ. ಪ್ರಸ್ತುತ ಭಾರತವು ಅಭಿವೃದ್ಧಿಯತ್ತ ಹೆಚ್ಚಿನ ಗಮನ ನೀಡಿ ಆರ್ಥಿಕ ಸಬಲೀಕರಣ ಹೊಂದುತ್ತಿದೆ. ಹೀಗಾಗಿ ಇಂದಿನ ಪೀಳಿಗೆ ಅದರಲ್ಲೂ ವಿದ್ಯಾರ್ಥಿಗಳು ಅನೇಕ ಸಂದೇಶ ಅರಿಯುವ ಹಾಗೂ ಆಚರಿಸುವ ಕೆಲಸ ಮಾಡಬೇಕು ಎಂದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಹಿಂದೂ ಧರ್ಮ ಸನಾತನ ಧರ್ಮ ಗಟ್ಟಿಯಾಗಿದೆ ಎಂಬುದಕ್ಕೆ ಈ ಕಾರ್ಯಕ್ರಮ ಸಾಕ್ಷಿಯಾಗಿದೆ. ವಿವೇಕಾನಂದರ ಬಗ್ಗೆ ಯಾತ್ರೆ ಮೂಲಕ ಪ್ರದರ್ಶನ ಮಾಡುವ ಕೆಲಸ ಮಾಡುತ್ತಿರುವುದು ನಿಜಕ್ಕೂ ಶ್ಲಾಘನೀಯ ಎಂದರು.

ವಿಶ್ವ ಮಟ್ಟದಲ್ಲಿ ಭಾರತ ಹಾಗೂ ಭಾರತೀಯರ ಬಗ್ಗೆ ವಿಶಿಷ್ಟ ಗೌರವ ಮೂಡಿಸುವ ಕೆಲಸ ಸ್ವಾಮಿ ವಿವೇಕಾನಂದರಿಂದ ಆಗಿದೆ. ಇದು ಭಾರತೀಯರಾದ ನಮಗೆಲ್ಲ ಹೆಮ್ಮೆ ಹಾಗೂ ಗೌರವ ತರುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಹೀಗಾಗಿ ಭಾರತೀಯರಾದ ನಮಗೆಲ್ಲ ಸ್ವಾಮಿ ವಿವೇಕಾನಂದರ ಬದುಕು ಆದರ್ಶಮಯವಾಗಿದ್ದು, ನಿತ್ಯ ಅವರನ್ನು ಸ್ಮರಿಸುವುದು ನಮ್ಮ ಕರ್ತವ್ಯವೂ ಹೌದು ಎಂದು ತಿಳಿಸಿದರು.

ಜೆಎಸ್‌ಎಸ್ ಶಾಲೆಯ ಮಕ್ಕಳಿಗೆ 'ಮೇರಾ ಭಾರತ್ ಮಹಾನ್' ವಿಶೇಷ ಉಪನ್ಯಾಸ

ದಕ್ಷಿಣ ಭಾರತದಿಂದ ಸೇನೆ ಸೇರುವವರ ಸಂಖ್ಯೆ ಕಡಿಮೆ, ಅದನ್ನು ಹೆಚ್ಚಿಸುವ ಅಗತ್ಯವಿದೆ



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಶಾಲೆಯಲ್ಲಿ ಮಕ್ಕಳ ದಿನಾಚರಣೆ ಅಂಗವಾಗಿ ಸಂಸ್ಕೃತಿ ವುಮೆನ್ ಸ್ಫಿಯರ್ ವತಿಯಿಂದ ಭಾರತೀಯ ಸೈನ್ಯ ಕುರಿತ 'ಮೇರಾ ಭಾರತ್ ಮಹಾನ್' ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಸಲಾಯಿತು.

ಮೈಸೂರು, ನ.22(ಜಿಎ)–ಮಕ್ಕಳ ದಿನಾಚರಣೆ ಅಂಗವಾಗಿ ಮೈಸೂರಿನ ಸಂಸ್ಕೃತಿ ವುಮೆನ್ ಸ್ಫಿಯರ್ ವತಿಯಿಂದ ಭಾರತೀಯ ಸೇನೆ ಕುರಿತ 'ಮೇರಾ ಭಾರತ್ ಮಹಾನ್' ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಶಾಲೆಯಲ್ಲಿ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ನಿವೃತ್ತ ಎನ್‌ಎಸ್‌ಜಿ ಕಮಾಂಡೋ ಹಾಗೂ ಸೈನಿಕ್ ಅಕಾಡೆಮಿ ಮುಖ್ಯಸ್ಥ ಸಿ.ಎಂ.ಶ್ರೀಧರ್ ಮುಖ್ಯ ಉಪನ್ಯಾಸಕರಾಗಿ ಭಾಗವಹಿಸಿ, ಭಾರತೀಯ ಸೇನೆ, ನೌಕಾಪಡೆ, ವಾಯುಪಡೆಯಲ್ಲಿಗೆ ಸೇರಲು ಬರೆಯಬೇಕಾದ ಪರೀಕ್ಷೆ, ಪರೀಕ್ಷೆಗಳ ಪಠ್ಯಕ್ರಮ, ವಯೋಮಿತಿ, ವೇತನ ವಿವರಗಳು ಮತ್ತು ಸರ್ಕಾರದಿಂದ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು.

ನಿವೃತ್ತಿ ನಂತರ ದೊರೆಯುವ ಅವಕಾಶಗಳಾದ ಪಿಂಚಣಿ ಹಾಗೂ ವಿಶೇಷ ಮೀಸಲು ಕೋಟಾಗಳ ಬಗ್ಗೆ ವಿವರಿಸಿ, ಮಕ್ಕಳು ಭಾರತೀಯ ಯೋಧರ ಸಾಹಸ ಗಾಥೆಗಳನ್ನು ಕೇಳಿ, ನೋಡಿ ಪ್ರೇರಣೆ ಪಡೆಯಬೇಕೆಂದು ತಿಳಿಸಿದರು. ವಿಶೇಷವಾಗಿ ದಕ್ಷಿಣ ಭಾರತದಿಂದ ರಕ್ಷಣಾ ಪಡೆಗಳಲ್ಲಿ ಸೇರುವವರ ಸಂಖ್ಯೆ ಕಡಿಮೆ ಇರುವುದರಿಂದ, ಅದನ್ನು ಹೆಚ್ಚಿಸುವ ಅಗತ್ಯವಿದೆ ಎಂದರು.

ಈ ಸಂದರ್ಭದಲ್ಲಿ ಸಂಸ್ಕೃತಿ ವುಮೆನ್ ಸ್ಫಿಯರ್ ಅಧ್ಯಕ್ಷೆ ಶ್ರೀದೇವಿ ಭೂಪಾಲಂ, ಶಾಲೆಯ ಪ್ರಾಂಶುಪಾಲೆ ಕವಿತಾ, ನಿರ್ದೇಶಕರಾದ ಪೂರ್ಣಿಮಾ ಸುನಿಲ್, ನಂದಾ ಲೋಕೇಶ್, ಅರ್ಚನಾ, ಸಪ್ನಾ, ಸುಷ್ಮ, ಶ್ವೇತಾ ಸ್ವರೂಪ್, ವೈಷ್ಣವಿ, ಮಧು, ಅಮೂಲ್ಯ, ಶ್ರೀನಿಜಾ ಹಾಗೂ ಇತರ ಸದಸ್ಯರು ಉಪಸ್ಥಿತರಿದ್ದರು.

ಸೈಬರ್ ಅಪರಾಧ ತಡೆಗೆ ಜಾಗೃತಿ ಅಗತ್ಯ



ವಿದ್ಯಾರಣ್ಯ ಕೋಚಿಂಗ್ ಸೆಂಟರ್‌ನಲ್ಲಿ ಅಖಿಲ ಭಾರತೀಯ ಗ್ರಾಹಕ ಪಂಚಾಯತ್, ಮೈಸೂರು ಘಟಕದಿಂದ ಆಯೋಜಿಸಿದ್ದ ಸೈಬರ್ ಸುರಕ್ಷತೆ, ಜಾಗೃತಿ ಕಾರ್ಯಕ್ರಮ

ಮೈಸೂರು, ನ. 22– ಸಾಮಾಜಿಕ ಜಾಲತಾಣ ಬಳಸುವ ವಿದ್ಯಾರ್ಥಿ ಯುವ ಸಮೂಹ ಸೈಬರ್ ಅಪರಾಧಗಳ ಬಗ್ಗೆ ಜಾಗೃತರಾಗಿರಬೇಕು ಎಂದು ಮೈಸೂರು ಜಿಲ್ಲೆಯ ಸೈಬರ್ ಕ್ರೈಂ ಪೊಲೀಸ್ ಠಾಣೆ ಮುಖ್ಯಪೇದೆ ಸಿ.ಎನ್. ಮಹೇಶ್ ಹೇಳಿದರು.

ವಿದ್ಯಾರಣ್ಯಪುರಂನಲ್ಲಿರುವ ವಿದ್ಯಾರಣ್ಯ ಕೋಚಿಂಗ್ ಸೆಂಟರ್‌ನಲ್ಲಿ ಅಖಿಲ ಭಾರತೀಯ ಗ್ರಾಹಕ ಪಂಚಾಯತ್, ಮೈಸೂರು ಘಟಕದ ವತಿಯಿಂದ ಆಯೋಜಿಸಿದ್ದ ಸೈಬರ್ ಸುರಕ್ಷತೆ ಮತ್ತು ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದಿನದಿಂದ ದಿನಕ್ಕೆ ಸೈಬರ್ ಅಪರಾಧಗಳ ಸಂಖ್ಯೆ ಹೆಚ್ಚುತ್ತಿವೆ. ಸೈಬರ್ ಅಪರಾಧಿಗಳು ಅಮಾಯಕ ಜನರ ಬ್ಯಾಂಕ್ ಖಾತೆಗಳಿಗೆ ಕನ್ನ ಹಾಕಲು ಹೊಂಚು ಹಾಕಿ ಕುಳಿತಿರುತ್ತಾರೆ. ಅಪರಾಧಗಳ ಕುರಿತು ಆತಂಕಗೊಳ್ಳುವ ಬದಲು ಪಾಸ್‌ವರ್ಡ್ ಭದ್ರತೆ ಕುರಿತು ಸದಾ ಜಾಗೃತರಾಗಿರಬೇಕು ಎಂದು ಸಲಹೆ ನೀಡಿದರು.

ಬ್ಯಾಂಕ್‌ಗಳ ಹೆಸರಿನಲ್ಲಿ ಒಟಿಪಿ ಮಾಹಿತಿ ಪಡೆದುಕೊಂಡು ಬ್ಯಾಂಕ್ ಖಾತೆಗಳಲ್ಲಿನ ಹಣ ದೋಚುತ್ತಾರೆ. ಅಪರಿಚಿತ ವ್ಯಕ್ತಿಗಳು ಕರೆಮಾಡಿದರೆ ಮಾಹಿತಿ ಹಂಚಿಕೊಳ್ಳಬೇಡಿ. ಬ್ಯಾಂಕ್ ಸಿಬ್ಬಂದಿ ಯಾವುದೇ ಕಾರಣಕ್ಕೂ ಮೊಬೈಲ್ ಕರೆಮಾಡಿ ಮಾಹಿತಿ ಕೇಳುವುದಿಲ್ಲ. ಇದು ಅಪರಾಧಿಗಳ ಕೃತ್ಯವಾಗಿರುತ್ತದೆ ಎಂದು ಎಚ್ಚರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ಸಿ.ಎಸ್.ಚಂದ್ರಶೇಖರ್ ಮಾತನಾಡಿ, ತಂತ್ರಜ್ಞಾನ, ಸಾಮಾಜಿಕ ಜಾಲತಾಣಗಳ ಬಳಕೆಯಲ್ಲಿ ವಿದ್ಯಾರ್ಥಿ ಯುವ ಸಮೂಹ ಮುಂಚೂಣಿಯಲ್ಲಿದೆ. ಬಳಕೆಯ ಸುರಕ್ಷತೆಯ ಬಗ್ಗೆ ಜಾಗೃತರಾಗಿರಬೇಕು ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಉಪಾಧ್ಯಕ್ಷರಾದ ವಿಕ್ರಮ್ ಅಯ್ಯಂಗಾರ್, ರಾಜ್ಯ ವಿದ್ಯಾ ವರ್ಗದ ಸಂಚಾಲಕರಾದ ಡಾ. ಜಿ.ವಿ.ರವಿಶಂಕರ್, ಶಿಕ್ಷಕರಾದ ಧನುಷ್, ಶ್ವೇತ ಇನ್ನಿತರರು ಹಾಜರಿದ್ದರು.

ಅಧಿಕಾರ ಹಂಚಿಕೆಯ ಗೊಂದಲ ಅಪಾಯಕಾರಿ ಹಂತ ತಲುಪುತ್ತಿದೆ



ತನ್ವೀರ್ ಸೇಠ್

ಮೈಸೂರು, ನ.22(ಬಿಎಲ್‌ಯು)– ಅಧಿಕಾರ ಹಂಚಿಕೆ ಸಂಬಂಧ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ನಡುವೆ ಒಪ್ಪಂದ ಆಗಿದೆಯೋ ಅಥವಾ ಇಲ್ಲವೋ ಎಂಬ ಗೊಂದಲ ಎರಡು ವರ್ಷಗಳಿಂದ ಕಾಡುತ್ತಿದ್ದು, ಈಗ ಇದು ಅಪಾಯಕಾರಿ ಹಂತ ತಲುಪುವ ಲಕ್ಷಣಗಳು ಗೋಚರಿಸುತ್ತಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಶಾಸಕ ತನ್ವೀರ್ ಸೇಠ್ ಆತಂಕ ವ್ಯಕ್ತಪಡಿಸಿದರು.

ಮೈಸೂರಿನಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಅಧಿಕಾರ ಹಂಚಿಕೆ ವಿಚಾರವನ್ನು ಹೈಕಮಾಂಡ್ ಈ ಮೊದಲೇ ಸ್ಪಷ್ಟಪಡಿಸಬೇಕಿತ್ತು. ಆದರೆ ತಡವಾಗಿದ್ದು, ಇನ್ನೆರಡು ದಿನದಲ್ಲಿ ಗೊಂದಲ ನಿವಾರಣೆ ಮಾಡಲಿದೆ ಎಂಬ ವಿಶ್ವಾಸವಿದೆ ಎಂದರು.

ರಾಜಕೀಯವಾಗಿ ನಡೆಯುತ್ತಿರುವ ಈ ಬೆಳವಣಿಗೆಗಳಿಂದ ಪಕ್ಷಕ್ಕೆ ಯಾವುದೇ ರೀತಿಯಲ್ಲೂ ಧಕ್ಕೆ ಆಗುವುದಿಲ್ಲ. ಯಾರು ಮಾತು ಕೊಟ್ಟಿದ್ದಾರೆ, ಮಾತು ತಪ್ಪಿದ್ದಾರೆ, ಇದೆಲ್ಲವೂ ಮಾತುಕತೆ ನಡೆದ ಸಂದರ್ಭದಲ್ಲಿ ಇದ್ದವರಿಗೆ ಮಾತ್ರ ಗೊತ್ತಿದೆ. ಆದರೆ ಕಾಂಗ್ರೆಸ್ ಶಾಸಕರ ಸಮ್ಮುಖದಲ್ಲಿ ಅಧಿಕಾರ ಹಂಚಿಕೆಯ ಸೂತ್ರದ ಮಾತುಕತೆ ನಡೆದಿಲ್ಲ. ಇದರಿಂದ ಒಳಗೆ ಏನಾಗಿದೆ ಎಂಬುದು ನನಗೆ ಗೊತ್ತಿಲ್ಲ ಎಂದು ಸ್ಪಷ್ಟಪಡಿಸಿದರು. ಆದರೆ ಒಂದಂತೂ ಸತ್ಯ, ನನ್ನ ಮೇಲೆ ಡಿ.ಕೆ.ಶಿವಕುಮಾರ್ ಅವರ ಋಣವಿದ್ದು, ರಾಜಕೀಯವಾಗಿ ಅವರೇ ನನ್ನನ್ನು ಬೆಳೆಸಿದ್ದಾರೆ. ಇದರಲ್ಲಿ ಯಾವುದೇ ಮುಚ್ಚು ಮರೆ ಇಲ್ಲ. ಈ ವಿಚಾರದಲ್ಲಿ ನಾನು ಲಾಭ–ನಷ್ಟದ ಬಗ್ಗೆ ಯೋಚನೆ ಮಾಡುವುದಿಲ್ಲ. ಇರುವ ಸತ್ಯವನ್ನು ನೇರವಾಗಿ ಹೇಳುತ್ತಿದ್ದೇನೆ. ಇದರ ಮಧ್ಯೆ ಸಿದ್ದರಾಮಯ್ಯ ಅವರ ಮೇಲೂ ನನಗೆ ಪ್ರೀತಿ ಇದೆ ಎಂದು ತನ್ವೀರ್ ಸೇಠ್ ತಿಳಿಸಿದರು.

ಕಾಂಗ್ರೆಸ್ ಸೇರ್ಪಡೆ....




ಜೆಡಿಎಸ್ ಪಕ್ಷದ ಮುಖಂಡರಾದ ಒಂಟಿಕೊಪ್ಪಲಿನ ಲಕ್ಷ್ಮಿ ಶಿವರಾಜ್, ಅಶ್ವಿನಿ ಇನ್ನಿತರರು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು. ಈ ವೇಳೆ ಮುಖಂಡರಾದ ಪುಷ್ಪಲತಾ ಚಿಕ್ಕಣ್ಣ, ಮಂಚೇಗೌಡನಕೊಪ್ಪಲು ರವಿ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು–ಹುಬ್ಬಳ್ಳಿ ಹಂಪಿ ಎಕ್ಸ್‌ಪ್ರೆಸ್ ಹಳಿ ತಪ್ಪಿಸುವ ಸಂಚು

ದುಷ್ಕರ್ಮಿಗಳಿಂದ ಹಳಿ ಮೇಲೆ ರಾಡ್ ಇಟ್ಟು ದುಷ್ಕೃತ್ಯಕ್ಕೆ ಯತ್ನ



ದುಷ್ಕರ್ಮಿಗಳು ರೈಲ್ವೆ ಹಳಿ ಮೇಲೆ ಕಬ್ಬಿಣದ ರಾಡ್ ಇಟ್ಟಿರುವುದು.



ಮೈಸೂರು, ನ.22– ಮೈಸೂರು–ಹುಬ್ಬಳ್ಳಿ ನಡುವಿನ ಹಂಪಿ ಎಕ್ಸ್‌ಪ್ರೆಸ್ ರೈಲನ್ನು ಹಳಿ ತಪ್ಪಿಸುವ ವಿಫಲ ಮಹಾ ಸಂಚು ನಡೆದಿದೆ ಎಂದು ತಿಳಿದುಬಂದಿದೆ.

ಶನಿವಾರ ಸಂಜೆ 6.50ಕ್ಕೆ ಮೈಸೂರಿನಿಂದ ಹೊರಟ ರೈಲು, ಚನ್ನಪಟ್ಟಣ–ರಾಮನಗರದ ನಡುವಿನ ವಂದಾರಗುಪ್ಪೆ ಬಳಿ ಸಂಚರಿಸುವಾಗ ಶಬ್ದ ಬಂದಿದೆ. ಲೋಕೋ ಪೈಲಟ್ ಕೂಡಲೇ ರೈಲು ನಿಲ್ಲಿಸಿ, ಪರಿಶೀಲಿಸಿದಾಗ ಜನರೇಟರ್ ಕಾರ್‌ನ ಡೀಸೆಲ್ ಟ್ಯಾಂಕ್‌ಗೆ ಹಾನಿಯಾಗಿ, ಇಂಧನ ಸೋರಿಕೆ ಆಗಿರುವುದು ಗಮನಕ್ಕೆ ಬಂದಿದೆ.

ಬಳಿಕ ಪೊಲೀಸರು ಹಾಗೂ ರೈಲ್ವೆ ಅಧಿಕಾರಿಗಳು ಸ್ಥಳಕ್ಕೆ ದೌಡಾಯಿಸಿ ಪರಿಶೀಲಿಸಿದಾಗ ಹಳಿ ಮೇಲೆ ಕಬ್ಬಿಣದ ದಪ್ಪ ತುಂಡನ್ನು ಇಟ್ಟಿರುವುದು ಪತ್ತೆಯಾಗಿದೆ. ಹೆಜ್ಜಾಲ ರೈಲು ನಿಲ್ದಾಣದಿಂದ ಬೇರೆ ಇಂಜಿನ್ ತಂದು ಜೋಡಿಸಿದ ಬಳಿಕ ರೈಲು ಸಂಚಾರ ಮುಂದುವರೆಸಿದೆ.

ತಪ್ಪಿದ ಅನಾಹುತ: ಇಂಜಿನ್‌ಗೆ ಯಾವುದೋ ವಸ್ತು ಬಡಿದಿದ್ದನ್ನು ಮನವರಿಕೆ ಮಾಡಿಕೊಂಡ ಲೋಕೋಪೈಲಟ್ ತಕ್ಷಣ ರೈಲು ನಿಲ್ಲಿಸಿದ್ದರಿಂದ ಅನಾಹುತ ತಪ್ಪಿದೆ. ಆದರೆ ಈ ಘಟನೆಯಿಂದ ಪ್ರಯಾಣಿಕರು ಆತಂಕಗೊಂಡಿದ್ದರು. ರೈಲ್ವೆ ಗೇಟ್ ಸಮೀಪದಲ್ಲೇ ಈ ಘಟನೆ ನಡೆದಿರುವುದರಿಂದ ಸಿಬ್ಬಂದಿಗೂ ಆತಂಕ ಶುರುವಾಗಿದೆ. ಪರಿಶೀಲನೆ ನಂತರ ಬೇರೊಂದು ಇಂಜಿನ್ ತಂದು ಜೋಡಿಸುವಷ್ಟರಲ್ಲಿ 2 ಗಂಟೆ ಸಮಯ ಹಿಡಿದಿದ್ದರಿಂದ ಹಂಪಿ ಎಕ್ಸ್‌ಪ್ರೆಸ್ ನಂತರದಲ್ಲಿ ಮೈಸೂರು–ಬೆಂಗಳೂರು ನಡುವೆ ಸಂಚರಿಸುವ ಎಲ್ಲಾ ರೈಲುಗಳ ಸಂಚಾರವೂ ವಿಳಂಬವಾಗಿದ್ದರಿಂದ ಪ್ರಯಾಣಿಕರು ಹೈರಾಣಾದರು.

ಯಾರೋ ದುಷ್ಕರ್ಮಿಗಳು ಹಳಿ ಮೇಲೆ ಕಬ್ಬಿಣದ ತುಂಡು ಇಟ್ಟು ರೈಲು ಹಳಿ ತಪ್ಪಿಸಲು ಯತ್ನಿಸಿರಬಹುದು ಎಂದು ಶಂಕಿಸಲಾಗಿದ್ದು, ಈ ಸಂಬಂಧ ರೈಲ್ವೆ ಪೊಲೀಸರು ವಿಚಾರಣೆ ಆರಂಭಿಸಿದ್ದಾರೆ. ಕಳೆದ ಜುಲೈನಲ್ಲೂ ಇದೇ ವಂದಾರಗುಪ್ಪೆ ಬಳಿ ಮೈಸೂರು–ಉದಯಪುರ ಎಕ್ಸ್‌ಪ್ರೆಸ್ ರೈಲಿನ ಇಂಜಿನ್‌ನಲ್ಲಿ ಇದ್ದಕ್ಕಿದ್ದಂತೆ ಬೆಂಕಿ ಕಾಣಿಸಿಕೊಂಡು, ಸಂಚಾರ ಮೂರ್‍ನಾಲ್ಕು ಗಂಟೆ ವಿಳಂಬವಾಗಿತ್ತು.

ನ.24ರಿಂದ ಲೆಗ್‌ಅಲ್ಸರ್, ವೇರಿಕೋಸ್ ವೆನ್ಸ್ ರೋಗಗಳಿಗೆ ತಪಾಸಣಾ ಶಿಬಿರ

ಮೈಸೂರು: ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ನ್ಯೂ ಸಯ್ಯಾಜಿರಾವ್ ರಸ್ತೆ, ವಿಶ್ವೇಶ್ವರಯ್ಯ ವೃತ್ತ, ಮೈಸೂರು. ಇಲ್ಲಿನ ಶಲ್ಯತಂತ್ರ ಹೊರರೋಗಿ ವಿಭಾಗದಲ್ಲಿ ನ.24ರಿಂದ 28ರವರೆಗೆ ಲೆಗ್‌ಅಲ್ಸರ್ ಮತ್ತು ವೇರಿಕೋಸ್ ವೆನ್ಸ್ ರೋಗಗಳಿಗೆ ವಿಶೇಷ ಚಿಕಿತ್ಸಾ ಶಿಬಿರವನ್ನು ಬೆಳಗ್ಗೆ 9ರಿಂದ ಸಂಜೆ 4 ರವರೆಗೆ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಪೂಜಾಶ್ರೀ ಮೊ.ಸಂ:8618332184 ಹಾಗೂ ರಿಚಾ ದೇವ್ ಮೊ.ಸಂ:8660338841 ಅನ್ನು ಸಂಪರ್ಕಿಸಬಹುದಾಗಿದೆ.


ದೇಶ - ವಿದೇಶ

ಐಎಸ್‌ಐ ಜತೆ ನಂಟು: ನಾಲ್ವರ ಬಂಧನ



ನವದೆಹಲಿ: ಐಎಸ್‌ಐ ಜತೆ ನಂಟು ಹೊಂದಿದ ಅಂತರರಾಷ್ಟ್ರೀಯ ಶಸ್ತ್ರಾಸ್ತ್ರ ಕಳ್ಳಸಾಗಣೆ ಜಾಲವನ್ನು ಭೇದಿಸಿರುವ ದೆಹಲಿ ಪೊಲೀಸರು, ಈ ಗ್ಯಾಂಗ್‌ನ ನಾಲ್ವರು ಪ್ರಮುಖ ಸದಸ್ಯರನ್ನು ಬಂಧಿಸಿದ್ದಾರೆ. ಇವರು ಉತ್ತರ ಭಾರತದಾದ್ಯಂತ ಸಂಘಟಿತ ಅಪರಾಧಗಳಿಗೆ ವಿದೇಶಿ ನಿರ್ಮಿತ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದ್ದರು. ಬಂಧಿತ ಆರೋಪಿಗಳನ್ನು ಪಂಜಾಬ್‌ನ ಮಂದೀಪ್ ಸಿಂಗ್ (38), ದಲ್ವಿಂದರ್ ಕುಮಾರ್ (34), ಉತ್ತರ ಪ್ರದೇಶದ ಬಾಗ್‌ಪತ್ ನಿವಾಸಿಗಳಾದ ರೋಹನ್ ತೋಮರ್ (30) ಮತ್ತು ಅಜಯ್ ಅಲಿಯಾಸ್ ಮೋನು (37) ಎಂದು ಗುರುತಿಸಲಾಗಿದೆ. ಈ ಜಾಲವು ಡ್ರೋನ್‌ಗಳನ್ನು ಬಳಸಿ ಪಾಕಿಸ್ತಾನದಿಂದ ಕಳ್ಳಸಾಗಣೆ ಮಾಡಿದ ವಿದೇಶಿ ನಿರ್ಮಿತ ಶಸ್ತ್ರಾಸ್ತ್ರಗಳನ್ನು ದೆಹಲಿ, ಹರಿಯಾಣ, ಉತ್ತರ ಪ್ರದೇಶ ಮತ್ತು ಪಂಜಾಬ್‌ನ ದರೋಡೆಕೋರರಿಗೆ ಪೂರೈಸುತ್ತಿತ್ತು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಡ್ರೋನ್‌ಗಳನ್ನು ಬಳಸಿಕೊಂಡು ಪಾಕಿಸ್ತಾನದಿಂದ ಶಸ್ತ್ರಾಸ್ತ್ರಗಳನ್ನು ಕಳ್ಳಸಾಗಣೆ ಮಾಡಲಾಗುತ್ತಿತ್ತು ಎಂದು ತನಿಖೆಯಿಂದ ಬಹಿರಂಗವಾಗಿದೆ. ಕಾರ್ಯಾಚರಣೆ ವೇಳೆ ಟರ್ಕಿ ನಿರ್ಮಿತ ಪಿಎಕ್ಸ್–5.7 ಮಾದರಿಗಳು ಸೇರಿದಂತೆ 10 ಅತ್ಯಾಧುನಿಕ ಪಿಸ್ತೂಲ್‌ಗಳು ಮತ್ತು 92 ಸಜೀವ ಕಾರ್ಟ್ರಿಡ್ಜ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಖೈಬರ್ ಪಖ್ತುಂಖ್ವಾದಲ್ಲಿ 17 ಉಗ್ರಗಾಮಿಗಳ ಹತ್ಯೆ



ಪೇಶಾವರ್: ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ನಡೆಸಿದ ಹಲವು ಕಾರ್ಯಾಚರಣೆಯಲ್ಲಿ ತೆಹ್ರಿಕ್ ಎ ತಾಲಿಬಾನ್ ಪಾಕಿಸ್ತಾನ ಗುಂಪಿಗೆ ಸೇರಿದ ಕನಿಷ್ಠ 17 ಉಗ್ರರನ್ನು ಹತ್ಯೆಗೈಯಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ. ಪ್ರದೇಶದಲ್ಲಿ ಉಗ್ರಗಾಮಿಗಳು ಇದ್ದಾರೆ ಎನ್ನುವ ಮಾಹಿತಿ ಆಧರಿಸಿ ಬನ್ನು ಜಿಲ್ಲೆಯ ಶರಿಖೆಲ್ ಹಾಗೂ ಪಕ್ಕಾ ಪಹರ್ ಖೇಲ್ ಪ್ರದೇಶದಲ್ಲಿ ಪೊಲೀಸರು ಹಾಗೂ ಭದ್ರತಾ ಪಡೆಗಳು ಜಂಟಿ ಕಾರ್ಯಾಚರಣೆ ನಡೆಸಿವೆ ಎಂದು ಅವರು ಹೇಳಿದ್ದಾರೆ.

ಲಕ್ಕಿ ಪೊಲೀಸ್, ಬನ್ನು ಭಯೋತ್ಪಾದನಾ ನಿಗ್ರಹ ಇಲಾಖೆ (ಸಿಟಿಡಿ) ಹಾಗೂ ಭದ್ರತಾ ಪಡೆಗಳು ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ 10 ಭಯೋತ್ಪಾದಕರನ್ನು ಹತ್ಯೆ ಮಾಡಲಾಗಿದೆ. ಐವರು ಗಾಯಗೊಂಡಿದ್ದಾರೆ, ಓರ್ವನನ್ನು ಬಂಧಿಸಲಾಗಿದೆ ಎಂದು ಖೈಬರ್ ಪಖ್ತುಂಖ್ವಾದ ಪೊಲೀಸ್ ಮಹಾ ನಿರ್ದೇಶಕ ಝುಲ್ಫಿಕರ್ ಹಮೀದ್ ತಿಳಿಸಿದ್ದಾರೆ. ಹತ್ಯೆಗೈಯಲಾದ ಏಳು ಮಂದಿಯ ಮೃತದೇಹವನ್ನು ಹೊರತೆಗೆಯಲಾಗಿದೆ. ಬೆಟ್ಟದ ದುರ್ಗಮ ಹಾದಿ ಇದ್ದಿದ್ದರಿಂದ ಮೂವರ ಮೃತದೇಹ ಹೊರತೆಗೆಯಲಾಗಿಲ್ಲ ಎಂದು ಅವರು ತಿಳಿಸಿದ್ದಾರೆ.

ಲೈಂಗಿಕ ಕಾರ್ಯಕರ್ತೆ ಕೊಂದು ಚೀಲದಲ್ಲಿ ಹಾಕಿ ಎಸೆದ!



ಕೊಚ್ಚಿ: ಮಹಿಳೆಯೊಬ್ಬರನ್ನು ಕೊಲೆ ಮಾಡಿ ಪ್ಲಾಸ್ಟಿಕ್ ಚೀಲದಲ್ಲಿ ಸುತ್ತಿ ಮನೆಯ ಆವರಣ ಗೋಡೆ ಸಮೀಪ ಎಸೆದ ಘಟನೆ ಕೇರಳ ಕೊಚ್ಚಿ ಸಮೀಪದ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣ ಸಂಬಂಧ ಕೊಂತುರ್ತಿ ನಿವಾಸಿ ಜಾರ್ಜ್ ಕೆ.ಕೆ ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ತಾನೇ ಕೃತ್ಯ ಎಸಗಿರುವುದಾಗಿ ಆತ ಒಪ್ಪಿಕೊಂಡಿದ್ದಾನೆ. ಲೈಂಗಿಕ ಕಾರ್ಯಕರ್ತೆಯಾಗಿರುವ ಆಕೆಯನ್ನು ತೇವರದಲ್ಲಿರುವ ಬಾಲಕಿಯ ಪ್ರೌಢ ಶಾಲೆಯ ಬಳಿಯಿಂದ ತನ್ನ ಮನೆಗೆ ಕರೆದುಕೊಂಡು ಬಂದಿದ್ದ. ಹಣಕಾಸಿನ ವಿಚಾರದಲ್ಲಿ ಇವರಿಬ್ಬರ ನಡುವೆ ವಾಗ್ವಾದ ನಡೆದಿದೆ. ಮಾತಿನ ಭರದಲ್ಲಿ ಕಬ್ಬಿಣದ ರಾಡ್‌ನಿಂದ ಆಕೆಯ ತಲೆಗೆ ಹೊಡೆದು ಕೊಲೆ ಮಾಡಿದ್ದಾನೆ ಎಂದು ಕೊಚ್ಚಿ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ. ವಿಚಾರಣೆ ವೇಳೆ ಕೃತ್ಯ ಎಸಗಿದ್ದನ್ನು ಆತ ಒಪ್ಪಿಕೊಂಡಿದ್ದಾನೆ. ಮೃತದೇಹವನ್ನು ಮನೆಯ ಹೊರಗೆ ತೆಗೆದುಕೊಂಡು ಹೋಗಲು ಪ್ರಯತ್ನಿಸಿದ್ದನಾದರೂ, ಸಾಧ್ಯವಾಗದೆ ಕುಸಿದು ಬಿದ್ದಿದ್ದಾನೆ. ಸಾಕುಪ್ರಾಣಿಯೊಂದರ ಕಳೇಬರ ಎಂದು ಹೇಳಿ, ಅದನ್ನು ವಿಲೇವಾರಿ ಮಾಡಲು ನೆರೆಹೊರೆಯವರ ನೆರವನ್ನೂ ಆತ ಕೇಳಿದ್ದ ಎಂದು ವಿಚಾರಣೆ ವೇಳೆ ಹೇಳಿದ್ದಾಗಿ ತಿಳಿಸಿದ್ದಾರೆ.


ನೈಜೀರಿಯಾದ ಶಾಲೆ ಮೇಲೆ ದಾಳಿ: 200ಕ್ಕೂ ಹೆಚ್ಚು ಮಕ್ಕಳ ಅಪಹರಣ



ಅಬುಜಾ: ನೈಜೀರಿಯಾದ ಕ್ಯಾಥೋಲಿಕ್ ಶಾಲೆಯೊಂದರ ಮೇಲೆ ದಾಳಿ ಮಾಡಿದ ಬಂದೂಕುಧಾರಿಗಳು 200ಕ್ಕೂ ಹೆಚ್ಚು ಶಾಲಾ ಮಕ್ಕಳನ್ನು ವಶಕ್ಕೆ ಪಡೆದಿದ್ದಾರೆ ಎಂದು ನೈಜೀರಿಯಾದ ಕ್ರಿಶ್ಚಿಯನ್ ಅಸೋಸಿಯೇಷನ್ ತಿಳಿಸಿದೆ. ಅಗ್ವಾರ ಸ್ಥಳೀಯ ಸರ್ಕಾರದ ಪಾಪಿರಿ ಸಮುದಾಯದ ಸೇಂಟ್ ಮೇರಿ ಶಾಲೆಯ ಮೇಲೆ ದಾಳಿ ಮಾಡಿದ ಬಂದೂಕುಧಾರಿಗಳು 215 ವಿದ್ಯಾರ್ಥಿಗಳು ಹಾಗೂ 12 ಶಿಕ್ಷಕರನ್ನು ತಮ್ಮ ಹಿಡಿತದಲ್ಲಿಟ್ಟು ಅಪಹರಿಸಿದ್ದಾರೆ ಎಂದು ಸ್ಥಳೀಯ ಆಡಳಿತದ ವಕ್ತಾರ ಡೇನಿಯಲ್ ಅಟೋರಿ ಹೇಳಿದ್ದಾರೆ.

ನಾನು ಶಾಲೆಗೆ ಭೇಟಿ ನೀಡಿದ ನಂತರ ಮಕ್ಕಳ ಹಳ್ಳಿಗೂ ತೆರಳಿದ್ದೆ. ಅಲ್ಲಿ ನಾನು ಮಕ್ಕಳ ಪೋಷಕರನ್ನು ಭೇಟಿ ಮಾಡಿ ಮಾತುಕತೆ ನಡೆಸಿದೆ. ಮಕ್ಕಳನ್ನು ರಕ್ಷಿಸಲು ಮತ್ತು ಸುರಕ್ಷಿತವಾಗಿ ಕರೆತರುವ ಕುರಿತಂತೆ ನಾವು ಸರ್ಕಾರ ಮತ್ತು ಭದ್ರತಾ ಸಂಸ್ಥೆಗಳೊಂದಿಗೆ ಕೆಲಸ ಮಾಡುತ್ತಿದ್ದೇವೆ ಎಂದು ಅವರಿಗೆ ಭರವಸೆ ನೀಡಿದ್ದೇನೆ ಎಂದು ಅಟೋರಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸರ್ಕಾರಿ ಆಸ್ಪತ್ರೆ ಹಾಸಿಗೆ ಮೇಲೆ ನಾಯಿ: ಸ್ವಚ್ಛತಾ ಸಿಬ್ಬಂದಿ ವಜಾ



ಖಂಡ್ವಾ: ಮಧ್ಯಪ್ರದೇಶದ ಖಂಡ್ವಾ ಜಿಲ್ಲೆಯ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರವೊಂದರ ಹಾಸಿಗೆಯಲ್ಲಿ ನಾಯಿ ಮಲಗಿರುವ ವೀಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದು, ಸ್ವಚ್ಛತಾ ಕಾರ್ಮಿಕನನ್ನು ಕೆಲಸದಿಂದ ವಜಾ ಮಾಡಲಾಗಿದೆ. ಖಿಲೌಡ್ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಘಟನೆ ನಡೆದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಘಟನೆ ಸಂಬಂಧ ಸ್ವಚ್ಛತಾ ಸಿಬ್ಬಂದಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕೆಲಸದಿಂದ ವಜಾ ಮಾಡಲಾಗಿದ್ದು, ಕರ್ತವ್ಯ ನಿರತ ನರ್ಸ್ ಅವರ 7 ದಿನಗಳ ಸಂಬಳ ಕಡಿತಗೊಳಿಸಿ ಬ್ಲಾಕ್ ವೈದ್ಯಕೀಯ ಅಧಿಕಾರಿ ಧರ್ಮೇಂದ್ರ ಶರ್ಮಾ ಆದೇಶಿಸಿದ್ದಾರೆ. ಲೋಪಕ್ಕೆ ಕಾರಣವಾದವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲು ಆರೋಗ್ಯ ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿ ರಿಷವ್ ಗುಪ್ತಾ ತಿಳಿಸಿದ್ದಾರೆ.

ರೈತರ ಸಮಸ್ಯೆ ಇತ್ಯರ್ಥಕ್ಕಾಗಿ ವಿಶೇಷ ಸಮಿತಿ ರಚನೆ

ಕಸ್ತೂರಿ ರಂಗನ್ ವರದಿ ವಿರೋಧಿ ಹೋರಾಟ ಸಭೆಯಲ್ಲಿ ಸಚಿವರ ಪ್ರಕಟಣೆ

ಮಡಿಕೇರಿ, ನ.22–ಜಿಲ್ಲೆಯ ರೈತರು, ಬೆಳೆಗಾರರ ಸಮಸ್ಯೆಗಳ ಇತ್ಯರ್ಥಕ್ಕಾಗಿ ಸರಕಾರ ವಿಶೇಷ ಸಮಿತಿ ರಚನೆಯಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜು ಭರವಸೆ ನೀಡಿದ್ದಾರೆ.



ಸಿ ಮತ್ತು ಡಿ ಭೂಮಿ ಹೋರಾಟಗಾರರ ಸಭೆಯನ್ನು ಸಚಿವ ಬೋಸರಾಜ್ ನಡೆಸಿದರು

ಕಸ್ತೂರಿ ರಂಗನ್ ವರದಿ ವಿರೋಧಿ ಹೋರಾಟ ಸಮಿತಿ ವತಿಯಿಂದ ನಗರದ ಕ್ರಿಸ್ಟಲ್ ಹಾಲ್ ಸಭಾಂಗಣದಲ್ಲಿ ರೈತರು ಮತ್ತು ಬೆಳೆಗಾರರ ಭೂಮಿ ಸಮಸ್ಯೆ ಕುರಿತು ನಡೆದ ಸಭೆಯಲ್ಲಿ ಸಮಸ್ಯೆಗಳ ಪರಿಹಾರಕ್ಕಾಗಿ ಶಾಸಕರೊಂದಿಗೆ ಕಂದಾಯ ಹಾಗೂ ಅರಣ್ಯ ಸಚಿವರನ್ನು ಭೇಟಿ ಮಾಡಿ ವಿಶೇಷ ಸಮಿತಿ ರಚಿಸುವಂತೆ ಮಾಡಿದ ಮನವಿಗೆ ಪೂರಕವಾಗಿ ಸಮಿತಿ ರಚನೆಯಾಗಿದ್ದು, ಜನರ ಸಮಸ್ಯೆ ಪರಿಹಾರಕ್ಕೆ ರಾಜ್ಯ ಸರಕಾರ ಸೂಕ್ತವಾಗಿ ಸ್ಪಂದಿಸಲಿದೆ ಎಂದು ಅವರು ಆಶ್ವಾಸನೆ ನೀಡಿದರು.

ಹೋರಾಟ ಸಮಿತಿ ಸಂಚಾಲಕ ಧರ್ಮಜಾ ಉತ್ತಪ್ಪ ಮಾತನಾಡಿ, ಜಿಲ್ಲೆಯ 53 ಗ್ರಾಮಗಳು ಕಸ್ತೂರಿ ರಂಗನ್ ವರದಿಗೆ ಒಳಪಡುತ್ತವೆ. ಜಿಲ್ಲೆಯ ಅಳಿವು ಉಳಿವಿನ ಪ್ರಶ್ನೆ ಬಂದಾಗ ಜಿಲ್ಲೆಯ ಜನಪ್ರತಿನಿಧಿಗಳು, ವಿವಿಧ ಸಂಘ ಸಂಸ್ಥೆಗಳು ರಾಜಕೀಯ ಮರೆತು ಒಗ್ಗಟ್ಟಾಗಿ ಹೋರಾಟ ಮಾಡಿದ್ದಾರೆ. ಕಸ್ತೂರಿ ರಂಗನ್ ವರದಿಗೆ ವಿರೋಧ ವ್ಯಕ್ತಪಡಿಸಿ ಜಿಲ್ಲೆಯಲ್ಲಿ ಒಟ್ಟು 10 ಸಾವಿರ ಸಹಿ ಸಂಗ್ರಹಿಸಿ ರಾಜ್ಯ ಸರಕಾರಕ್ಕೆ ಕಳುಹಿಸಲಾಗಿದೆ. ಅದರಂತೆ ರಾಜ್ಯ ಸರಕಾರ ಕೂಡ ವರದಿ ಜಾರಿಗೆ ವಿರೋಧ ವ್ಯಕ್ತಪಡಿಸಿ ಕೇಂದ್ರ ಸರಕಾರಕ್ಕೆ ವರದಿ ಸಲ್ಲಿಸಿದೆ ಎಂದರು.

ಶಾಸಕ ಡಾ.ಮಂತರ್ ಗೌಡ ಮಾತನಾಡಿ, ಹಾರಂಗಿ ಜಲಾಶಯ ನಿರ್ಮಾಣ ಸಂದರ್ಭದಲ್ಲಿ ಮುಳುಗಡೆಯಾದ ಭೂಮಿ ಪ್ರಕರಣದಲ್ಲಿ ಕೋರ್ಟ್ ಆದೇಶಕ್ಕೆ ಪ್ರತಿಯಾಗಿ ಬೇರೆ ಭೂಮಿ ನೀಡಲು ಸಿ ಮತ್ತು ಡಿ ಜಮೀನನ್ನು ಗುರುತಿಸಿರುವುದೇ ಈ ಸಮಸ್ಯೆಗಳಿಗೆ ಕಾರಣವಾಗಿದೆ. ಜಿಲ್ಲೆಯಲ್ಲಿ 11 ಸಾವಿರ ಎಕರೆ ಭೂಮಿಗೆ ರಾಜ್ಯದ ಬೇರೆ ಜಿಲ್ಲೆಯಲ್ಲಿ ಈ ಭೂಮಿ ನೀಡುವಂತಾಗಬೇಕು ಎಂದು ಹೇಳಿದರು. ಸಮಸ್ಯೆ ಸೃಷ್ಟಿಯಾಗಲು ಅಧಿಕಾರಿಗಳು ಕೂಡ ಹೊಣೆಯಾಗಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ರಾಜ್ಯ ಸರಕಾರ ರಚಿಸಿರುವ ಸಮಿತಿ ಮುಂದೆ ಸಿ ಮತ್ತು ಡಿ ಭೂಮಿಯ ವಿಚಾರಗಳನ್ನು ಮಂಡಿಸಬೇಕಿದೆ. ಇದರಿಂದ ಸಮಸ್ಯೆಗೆ ಪರಿಹಾರ ಸಾಧ್ಯವಿದೆ ಎಂದು ಹೇಳಿದರು. ಹಿಂದಿನ ಸರಕಾರದ ವಕೀಲರು ಕೋರ್ಟ್‌ನಲ್ಲಿ ಸಮರ್ಪಕ ವಾದ ಮಂಡಿಸದಿರುವುದು ಸಿ ಮತ್ತು ಡಿ ಭೂಮಿ ಸಮಸ್ಯೆಗೆ ಕಾರಣವಾಗಿದೆ ಎಂದು ಹೇಳಿದರು.

ಸಭೆಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಸುನೀಲ್ ಸುಬ್ರಮಣಿ, ಕಾಫಿ ಬೆಳೆಗಾರ ಚೇರಂಡ ನಂದಾ ಸುಬ್ಬಯ್ಯ, ಕೊಲ್ಯದ ಗಿರೀಶ್, ಕೆ.ಎಂ.ಲೋಕೇಶ್, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಅಖಿಲ ಕೊಡವ ಸಮಾಜ ಅಧ್ಯಕ್ಷ ಪರದಂಡ ಸುಬ್ರಮಣಿ, ರೈತ ಸಂಘದ ಸುಜಯ್ ಬೋಪಯ್ಯ ಸೇರಿದಂತೆ ವಿವಿಧ ಭಾಗಗಳಿಂದ ಆಗಮಿಸಿದ್ದ ರೈತರು ಮತ್ತು ಬೆಳೆಗಾರರು ಪಾಲ್ಗೊಂಡಿದ್ದರು.

ಜನವರಿಯಿಂದ ಇಂದಿರಾ ಆಹಾರ ಕಿಟ್ ಯೋಜನೆ ಜಾರಿ

ಮಡಿಕೇರಿ, ನ.22–ಮುಂದಿನ ಜನವರಿಯಿಂದ 'ಇಂದಿರಾ ಆಹಾರ ಕಿಟ್' ಯೋಜನೆ ಜಾರಿಗೆ ತರಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಬೋಸರಾಜು ತಿಳಿಸಿದ್ದಾರೆ.



ಪಂಚ ಗ್ಯಾರಂಟಿ ಯೋಜನೆಗಳ ಮಾಹಿತಿ ಒಳಗೊಂಡ ವಸ್ತು ಪ್ರದರ್ಶನವನ್ನು ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜ್ ವೀಕ್ಷಿಸಿದರು

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಗ್ಯಾರಂಟಿ ಉತ್ಸವಕ್ಕೆ ಚಾಲನೆ ನೀಡಿ, ಬಡಜನರ ಆರ್ಥಿಕ ಅಭಿವೃದ್ಧಿಗೆ ಸರ್ಕಾರ ಕಂಕಣಬದ್ಧವಾಗಿದೆ. ಚುನಾವಣಾ ಸಂದರ್ಭದಲ್ಲಿನ ಆಶ್ವಾಸನೆಯಂತೆ ಪಂಚ ಗ್ಯಾರಂಟಿ ಯೋಜನೆಯನ್ನು ಈಡೇರಿಸಿ, ಜನರ ನಂಬಿಕೆ ಮತ್ತು ವಿಶ್ವಾಸವನ್ನು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಉಳಿಸಿಕೊಂಡಿದೆ. ಸರ್ಕಾರ ಯಾವುದೇ ಧರ್ಮ, ಜಾತಿ ನೋಡಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿಲ್ಲ. ನಾವು ಜಾರಿಗೊಳಿಸಿರುವ ಪಂಚ ಗ್ಯಾರಂಟಿ ಯೋಜನೆಗಳು ಇಡೀ ದೇಶದಲ್ಲಿಯೇ ಮಾದರಿಯಾಗಿದ್ದು, ಇದು ಕರ್ನಾಟಕದ ಹೆಮ್ಮೆ ಎಂದು ಪ್ರತಿಪಾದಿಸಿದರು.

ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ನಡೆಯುತ್ತಿದ್ದು, ಎಲ್ಲಾ ಜನರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದೆ ಬಡವರ, ಶೋಷಿತರ ಆರ್ಥಿಕ ಸಬಲೀಕರಣಕ್ಕೆ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ ಎಂದರು. ಶಾಸಕ ಡಾ.ಮಂಥರ್ ಗೌಡ ಮಾತನಾಡಿ, ಜಿಲ್ಲೆಯಲ್ಲಿ ಆದಿವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ಇವರಿಗೆ ವಸತಿ ಯೋಜನೆ ಜೊತೆಗೆ ಆಧಾರ್ ಕಾರ್ಡ್, ಪಡಿತರ ಇತರೆ ಮೂಲ ಸೌಲಭ್ಯ ಕಲ್ಪಿಸಬೇಕು ಎಂದು ಡಾ.ಮಂತರ್ ಗೌಡ ಅವರು ಸಲಹೆ ಮಾಡಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಅಧ್ಯಕ್ಷ ಎಚ್.ಎಂ. ರೇವಣ್ಣ, ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷರಾದ ಪುಷ್ಪಾ ಅಮರ್‌ನಾಥ್ ಮೆಹರೂಜ್ ಖಾನ್, ಜಿಲ್ಲಾ ಅಧ್ಯಕ್ಷ ಧರ್ಮಜ ಉತ್ತಪ್ಪ, ಡಿಸಿ ವೆಂಕಟ್ ರಾಜಾ, ಜಿಪಂ ಸಿಇಒ ಆನಂದ್ ಪ್ರಕಾಶ್ ಮೀನಾ, ನಗರಸಭೆ ಅಧ್ಯಕ್ಷೆ ಪಿ.ಕಲಾವತಿ, ಮಂದ್ರೀರ ಮೋಹನ್ ದಾಸ್, ಕಾಂತರಾಜು, ವಿ.ಪಿ.ಶಶಿಧರ್, ಪಿ.ವಿ.ಜಾನ್ಸನ್, ಮತ್ತಿತರರು ಹಾಜರಿದ್ದರು.

ಭಾಷಾ ಸಂಪರ್ಕ ಸೇತುವಾಗಿ ಅನುವಾದ ಕೆಲಸ ಮಾಡುತ್ತದೆ



ಕೊಡವ ಅನುವಾದ ಕೃತಿಯನ್ನು ಲೇಖಕಿ ಐಚಂಡ ರಶ್ಮಿ ಮೇದಪ್ಪ ಬಿಡುಗಡೆ ಮಾಡಿದರು

ಮಡಿಕೇರಿ, ನ22–ಸಾಹಿತ್ಯ ಲೋಕದಲ್ಲಿ ಅನುವಾದ ಕೃತಿಗೆ ಅದರದ್ದೇ ಆದ ಮಹತ್ವವಿದೆ. ಅನುವಾದ ಕೃತಿ ಸಂಸ್ಕೃತಿ ಮತ್ತು ಎರಡು ಭಾಷೆಗಳ ನಡುವೆ ಸಂಪರ್ಕ ಸೇತುವೆಯ ರಾಯಭಾರಿಯಾಗಿ ಕೆಲಸ ಮಾಡುತ್ತದೆ ಎಂದು ಲೇಖಕಿ ಐಚಂಡ ರಶ್ಮಿ ಮೇದಪ್ಪ ಅಭಿಪ್ರಾಯ ಪಟ್ಟಿದ್ದಾರೆ.

ಕೊಡವ ಮಕ್ಕಡ ಕೂಟದ ವತಿಯಿಂದ ನಗರದ ಪತ್ರಿಕಾ ಭವನದಲ್ಲಿ ನಡೆದ ತಾವು ರಚಿಸಿರುವ 'ಕೊಡಗ್ ಸಂಸ್ಥಾನ/ಬ್ರಿಟಿಷ್ ಸಾಮ್ರಾಜ್ಯ' ಕೊಡವ ಅನುವಾದ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೂಲ ಕೃತಿಯ ಲೇಖಕರು ಹಾಗೂ ಅನುವಾದಕರಿಗೂ ಮಹತ್ವ ಇದೆ ಎಂಬುದನ್ನು ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ ದೀಪಬಾಸ್ತಿ ತೋರಿಸಿಕೊಟ್ಟಿದ್ದಾರೆ. ಅನುವಾದ ಎಂದರೆ ಮರುಸೃಷ್ಟಿ ಎಂದರ್ಥ, ಮೂಲ ಕೃತಿಯ ತಿರುಳನ್ನು ನಾವು ಬೇರೆ ಬೇರೆ ಭಾಷೆಗಳಲ್ಲಿ ಹೊರತಂದಾಗ ಅದು ಹೆಚ್ಚು ಹೆಚ್ಚು ಜನರನ್ನು ತಲುಪುತ್ತದೆ ಮತ್ತು ಕೃತಿಗೂ ಉತ್ತಮವಾದ ಸ್ಪಂದನೆ ದೊರೆಯುತ್ತದೆ. ಆದರೆ ಅನುವಾದ ಮಾಡುವವರಿಗೆ ಎರಡೂ ಭಾಷೆಗಳ ಮೇಲೆ ಹಿಡಿತವಿರಬೇಕು ಮತ್ತು ಮೂಲ ಕೃತಿಗೆ ಚ್ಯುತಿ ಬಾರದಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಮಾತನಾಡಿ, ಮುಂದಿನ ವರ್ಷ ಫೆ.13ರಂದು ಕೊಡವ ಮಕ್ಕಡ ಕೂಟದ 13ನೇ ವರ್ಷಾಚರಣೆಯ ಪ್ರಯುಕ್ತ 2 ಪುಸ್ತಕಗಳನ್ನು ಹೊರ ತರಲು ನಿರ್ಧರಿಸಲಾಗಿದೆ ಎಂದರು.

ಬಾಲಸಾಹಿತ್ಯ ಪ್ರಶಸ್ತಿ ಪುರಸ್ಕೃತ ಮೂಕೊಂಡ ನಿತಿನ್ ಕುಶಾಲಪ್ಪ ಮಾತನಾಡಿ, ಪುಸ್ತಕದ ಮೂಲ ಕೃತಿಗೆ ಚ್ಯುತಿ ಬಾರದ ರೀತಿಯಲ್ಲಿ ಕೊಡವ ಭಾಷೆಗೆ ತರ್ಜುಮೆ ಮಾಡಲಾಗಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಕೃತಿಗಳು ಹೊರಬರುವಂತಾಗಲಿ ಎಂದು ಶುಭ ಹಾರೈಸಿದರು.

ಮೈ ರೋಮಾಂಚನಗೊಳಿಸಿದ ಎತ್ತಿನ ಗಾಡಿ ಸ್ಪರ್ಧೆ

ಕುಶಾಲನಗರ, ನ.22–ಜಿಲ್ಲೆಯ ಗಡಿ ಗ್ರಾಮ ಹೆಬ್ಬಾಲೆಯಲ್ಲಿ ಶನಿವಾರ ರಾತ್ರಿ ಗ್ರಾಮ ದೇವತೆ ಶ್ರೀ ಬನಶಂಕರಿ ದೇವಿಯ ವಾರ್ಷಿಕ ಹಬ್ಬದ ಅಂಗವಾಗಿ ಏರ್ಪಡಿಸಿದ್ದ ಚಕ್ರ ಕಟ್ಟಿ ಗಾಡಿ ಓಡಿಸುವ ಸ್ಪರ್ಧೆ ನೋಡುಗರ ಮೈ ರೋಮಾಂಚನಗೊಳಿಸಿತು. ಬನಶಂಕರಿ ಅಮ್ಮನವರ ಹಬ್ಬದ ಅಂಗ ವಾಗಿ ನಡೆದ ಈ ಗಾಡಿ ಓಟದ ಸ್ಪರ್ಧೆಯಲ್ಲಿ ಹೆಬ್ಬಾಲೆ ಸುತ್ತಮುತ್ತಲಿನ ಜನರಲ್ಲದೆ, ಮೈಸೂರು, ಚಿಕ್ಕಮಗಳೂರು, ಮಂಡ್ಯ ಹಾಗೂ ಹಾಸನ ಜಿಲ್ಲೆಗಳ ಗಡಿ ಭಾಗದ ಜನತೆ ಭಾಗವಹಿಸಿದ್ದು ವಿಶೇಷವಾಗಿತ್ತು.



ಹೆಬ್ಬಾಲೆಯಲ್ಲಿ ಗ್ರಾಮ ದೇವತೆ ಶ್ರೀ ಬನಶಂಕರಿ ದೇವಿಯ ವಾರ್ಷಿಕ ಹಬ್ಬದ ಅಂಗವಾಗಿ ಚಕ್ರ ಕಟ್ಟಿ ಗಾಡಿ ಓಡಿಸುವ ಸ್ಪರ್ಧೆ ನಡೆಯಿತು

ಗ್ರಾಮದ ಮಾದರಿ ಯುವಕ ಸಂಘದ ಆಶ್ರಯದಲ್ಲಿ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ನಡೆದ ಸ್ಪರ್ಧೆಯಲ್ಲಿ ಚಕ್ರಕಟ್ಟಿ ಗಾಡಿ ಓಡಿಸುವ ಸ್ಪರ್ಧೆಗೆ 100 ಮೀಟರ್ ದೂರ ನಿಗದಿಪಡಿಸಲಾಗಿತ್ತು. ಎತ್ತಿನ ಗಾಡಿ ಸ್ಪರ್ಧೆಯಲ್ಲಿ ಮೊದಲ 3 ಸ್ಥಾನ ಗಳಿಸಿದ ಎತ್ತಿನ ಗಾಡಿ ಮಾಲೀಕರಿಗೆ ಕ್ರಮವಾಗಿ 5 ಗ್ರಾಂ ಚಿನ್ನ ಹಾಗೂ 3ಗ್ರಾಂ. ಚಿನ್ನ, ತೃತೀಯ ಬಹುಮಾನ ರೂ.10 ಸಾವಿರ ನಗದು ಬಹುಮಾನ ವಿತರಿಸಲಾಯಿತು.

ಸ್ಪರ್ಧೆಯಲ್ಲಿ 20ಕ್ಕೂ ಹೆಚ್ಚಿನ ಎತ್ತಿನ ಗಾಡಿ ಮಾಲೀಕರು ಪಾಲ್ಗೊಂಡಿದ್ದರು. ಸ್ಪರ್ಧೆ ವೀಕ್ಷಿಸಲು ಸಾವಿರಾರು ಸಂಖ್ಯೆಯಲ್ಲಿ ಜನರು ಜಮಾಯಿಸಿದ್ದರು.

ಮಧ್ಯಾಹ್ನ 2 ಗಂಟೆಗೆ ಆರಂಭಗೊಂಡ ಸ್ಪರ್ಧೆ ರಸ್ತೆಯ ಇಕ್ಕೆಲಗಳಲ್ಲಿ ನಿಂತಿದ್ದ ಜನರು ಶಿಳ್ಳೆ ಹೊಡೆಯುತ್ತ ಪ್ರೋತ್ಸಾಹಿಸುವ ಮೂಲಕ ಎತ್ತುಗಳಿಗೆ ಹುರಿದುಂಬಿಸುತ್ತಿದ್ದ ದೃಶ್ಯ ಕಂಡು ಬಂತು. ಜಾತ್ರೆಯ ಅಂಗವಾಗಿ ಏರ್ಪಡಿಸಿದ್ದ ಎತ್ತಿನ ಗಾಡಿ ಓಟ ಸ್ಪರ್ಧೆಯನ್ನು ಉದ್ಯಮಿ ಮೋಹನ್ ಲಾಲ್ ಚೌದರಿ ಉದ್ಘಾಟಿಸಿದರು. ಮಾದರಿ ಯುವಕ ಸಂಘದ ಗೌರವಾಧ್ಯಕ್ಷ ಎಚ್.ಎನ್.ರಾಜಶೇಖರ್, ಅಧ್ಯಕ್ಷ ಎಚ್.ಎಚ್.ಧನಂಜಯ, ಉಪಾಧ್ಯಕ್ಷ ಎಚ್.ಡಿ.ಪುಟ್ಟರಾಜ, ಕಾರ್ಯದರ್ಶಿ ತನುಕುಮಾರ್, ಖಜಾಂಜಿ ಎಚ್.ಸಿ.ಸಂತೋಷ್, ಪದಾಧಿಕಾರಿಗಳು, ಗ್ರಾ. ಪಂ. ಮಾಜಿ ಅಧ್ಯಕ್ಷ ರಘು ಹಾಜರಿದ್ದರು. ತೀರ್ಪುಗಾರರಾಗಿ ದೈಹಿಕ ಶಿಕ್ಷಣ ಶಿಕ್ಷಕ ಕರುಂಬಯ್ಯ, ಬೋಜೇಗೌಡ, ಪ್ರವೀಣ್, ಸಂತೋಷ್ ಕಾರ್ಯ ನಿರ್ವಹಿಸಿದರು.

ಕುದುಪಜೆ ಆನಂದ ನಿಧನ



ನಾಪೋಕ್ಲು: ಕುಶಾಲನಗರ ಗುಡ್ಡೆಹೊಸೂರುವಿನ ನಿವಾಸಿ ಸಿಆರ್‌ಪಿಎಫ್ ನಿವೃತ್ತ ಸಹಾಯಕ ಕಮಾಂಡೆಂಟ್ ಕುದುಪಜೆ ಆನಂದ (80) ನಿನ್ನೆ ನಿಧನರಾದರು.

ಮೃತರು ಮಡಿಕೇರಿ ಚೌಡೇಶ್ವರಿ ಗೌಡ ಕೂಟದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಪತ್ನಿ, ಪುತ್ರಿ, ಸೇರಿದಂತೆ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಕುಶಾಲನಗರ ಗೌಡ ರುದ್ರಭೂಮಿಯಲ್ಲಿ ನೆರವೇರಿತು.

ಕ್ರಿಸ್ಮಸ್ ಗಾನ ತರಂಗ ಭಿತ್ತಿಪತ್ರ ಬಿಡುಗಡೆ

ವಿರಾಜಪೇಟೆ, ನ.22– ಕ್ರಿಸ್ಮಸ್ ಹಬ್ಬದ ಸಮಯದಲ್ಲಿ ಸಂತೋಷ ಮತ್ತು ಸದ್ಭಾವನೆಯನ್ನು ಪ್ರೀತಿ, ಶಾಂತಿ ಮತ್ತು ಏಕತೆಯ ಸಂದೇಶಗಳನ್ನು ಹರ ಡಲು ಸ್ಪರ್ಧೆಯನ್ನು ನಡೆಸಲಾಗುತ್ತಿದೆ ಎಂದು ರೋಮನ್ ಕ್ಯಾಥೋಲಿಕ್ ಅಸೋಸಿಯೇಷನ್‌ನ ವಿರಾಜಪೇಟೆ ಹಾಗೂ ಪೊನ್ನಂಪೇಟೆ ತಾಲೂಕು ಘಟಕದ ಅಧ್ಯಕ್ಷ ಆಂಟೋನಿ ರಾಬಿನ್ ಹೇಳಿದರು.

ರೋಮನ್ ಕ್ಯಾಥೋಲಿಕ್ ಅಸೋಸಿಯೇಷನ್ ಕ್ರಿಸ್ಮಸ್ ಗಾನ ತರಂಗ– 2025 ಕ್ರಿಸ್ಮಸ್ ಗಾಯನ ಸ್ಪರ್ಧೆಯ ಪೋಸ್ಟರ್‌ನ್ನು ಬಿಡುಗಡೆಗೊಳಿಸಿದ ಆಂಟೋನಿ ಗಾಯನ ಸ್ಪರ್ಧೆಯನ್ನು ಡಿ,7ರಂದು ಇಲ್ಲಿನ ಸಂತ ಅನ್ನಮ್ಮ ದೇವಾಲಯದ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಹದಿನೈದು ವರ್ಷಗಳಿಂದ ಸಮುದಾಯದ ಒಗ್ಗಟ್ಟಿಗೆ ಹಾಗೂ ಸಂಸ್ಕೃತಿಯ ಆಚರಣೆಯಲ್ಲಿ ತೊಡಗಿಸಿಕೊಳ್ಳಲು ಶ್ರಮಿಸುತ್ತಿದ್ದು, ಮೂರು ವರ್ಷಗಳಿಂದ ಕ್ರಿಸ್‌ಮಸ್ ಗಾಯನ ಸ್ಪರ್ಧೆಯನ್ನು ಆಯೋಜಿಸಿಕೊಂಡು ಬರುತ್ತಿದ್ದೇವೆ. ಸಮುದಾಯದ ಐಕ್ಯತೆ, ಚರ್ಚ್ ಕಾನ್ವೆಂಟ್‌ಗಳಲ್ಲಿರುವ ಮಕ್ಕಳು, ವಿದ್ಯಾರ್ಥಿಗಳಿಗೆ ವೇದಿಕೆ ಒದಗಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಹಮ್ಮಿಕೊಂಡು ಬರುತ್ತಿದ್ದೇವೆ. ಎಂದರು.

ಅಸೋಸಿಯೇಷನ್ ಉಪಾಧ್ಯಕ್ಷ ಜೋಕಿಂ ರಾಡ್ರಿಗಸ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಮರ್ವಿನ್ ಲೋಬೋ ತಾಲೂಕು ಉಪಾಧ್ಯಕ್ಷ ಆಂತೋನಿ ಜೋಸೆಫ್ ಮತ್ತು ಕಾರ್ಯದರ್ಶಿ ಸ್ಟಾಲಿನ್ ಮಾತನಾಡಿ, ಹಾಡುಗಾರರು ಇದರ ಸದುಪಯೋಗ ಪಡೆದುಕೊಳ್ಳುವಂತಾಗಬೇಕು. ಮುಂದಿನ ದಿನಗಳಲ್ಲಿ ಇನ್ನಷ್ಟು ಉತ್ತಮ ಕಾರ್ಯಕ್ರಮ ನಡೆಸಲು ಇದು ಪ್ರೇರಣೆಯಾಗಬೇಕು ಎಂದರು.



ಕ್ರಿಸ್ಮಸ್ ಗಾಯನ ಸ್ಪರ್ಧೆಯ ಪೋಸ್ಟರ್ ಅನ್ನು ತಾಲೂಕು ಘಟಕದ ಅಧ್ಯಕ್ಷ ಆಂಟೋನಿ ರಾಬಿನ್ ಬಿಡುಗಡೆ ಮಾಡಿದರು

ಹೆಚ್‌ಐವಿ ಸೋಂಕಿತ ಮಹಿಳೆಯರಿಂದ ಅರ್ಜಿ ಆಹ್ವಾನ

ಚಾಮರಾಜನಗರ: ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಧನಶ್ರೀ ಯೋಜನೆಯಡಿ ಹೆಚ್.ಐ.ವಿ ಸೋಂಕಿತ ಮಹಿಳೆಯರು ಸ್ವಯಂ ಉದ್ಯೋಗ ಕೈಗೊಳ್ಳಲು ಪ್ರತಿ ಫಲಾನುಭವಿಗೆ ನೀಡಲಾಗುವ 30 ಸಾವಿರ ರೂ. ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿದಾರರು ರಾಜ್ಯದ ಖಾಯಂ ನಿವಾಸಿಗಳಾಗಿರಬೇಕು. 18 ರಿಂದ 60 ವರ್ಷದೊಳಗಿರಬೇಕು. ಬಿಪಿಎಲ್ ಪಡಿತರ ಚೀಟಿ ಹೊಂದಿರಬೇಕು. ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಕಡ್ಡಾಯವಾಗಿ ಖಾತೆಯನ್ನು ಹೊಂದಿದ್ದು, ಬ್ಯಾಂಕ್ ಖಾತೆಯ ಪ್ರತಿಯನ್ನು ಲಗತ್ತಿಸಬೇಕು. ಬ್ಯಾಂಕ್ ಖಾತೆಯೊಂದಿಗೆ ಆಧಾರ್ ಲಿಂಕ್ ಮಾಡಿಸಿರಬೇಕು. ಯಾವುದೇ ಆರ್ಥಿಕ ಸಂಸ್ಥೆ ಅಥವಾ ಬ್ಯಾಂಕುಗಳಲ್ಲಿ ಸುಸ್ತಿದಾರರಾಗಿಲ್ಲ ಎಂದು ದೃಢೀಕರಣ ಪತ್ರ ಸಲ್ಲಿಸಬೇಕು. ಕುಟುಂಬದಲ್ಲಿ ಹೆಚ್.ಐ.ವಿ ಸೋಂಕಿತ ಒಬ್ಬ ಮಹಿಳೆಯು ಮಾತ್ರ ಯೋಜನೆಯ ಸೌಲಭ್ಯ ಪಡೆಯಬಹುದು.

ಹೆಚ್‌ಐವಿ ಸೋಂಕಿತ ಕುರಿತು ಜಿಲ್ಲೆ, ತಾಲೂಕು ಹತ್ತಿರದ ಆರೋಗ್ಯ ಕೇಂದ್ರದಲ್ಲಿನ ಐಸಿಟಿಸಿ, ಪಿಪಿಟಿಸಿಟಿ ಕೇಂದ್ರದ ವೈದ್ಯಕೀಯ ವರದಿಯನ್ನು ಹೊಂದಿರಬೇಕು ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜ್ಯೋತಿಗೌಡನಪುರ ಪ್ರಕರಣ

ಎಸ್‌ಐಟಿ ತನಿಖೆಗೆ ವಹಿಸಲು ಆಗ್ರಹ

ಚಾಮರಾಜನಗರ, ನ.22–ತಾಲೂಕಿನ ಜ್ಯೋತಿಗೌಡನಪುರ ಗ್ರಾಮದಲ್ಲಿ ನಡೆದಿರುವ ಪ್ರಕರಣವನ್ನು ಎಸ್‌ಐಟಿ ತನಿಖೆಗೆ ವಹಿಸಲು ಶಿಫಾರಸ್ಸು ಮಾಡಬೇಕು ಎಂದು ದಲಿತ ಮುಖಂಡರು ಆಗ್ರಹಿಸಿದ್ದಾರೆ.



ಎಸ್‌ಸಿ, ಎಸ್‌ಟಿ ಜನಾಂಗದ ಕುಂದುಕೊರತೆ ಸಭೆ ನಡೆಯಿತು.

ನಗರದ ಪಟ್ಟಣ ಪೊಲೀಸ್ ಠಾಣೆ ಆವರಣದಲ್ಲಿ ನಡೆದ ಎಸ್‌ಸಿ, ಎಸ್‌ಟಿ ಜನಾಂಗದ ಕುಂದುಕೊರತೆ ಸಭೆಯಲ್ಲಿ ಮಾತನಾಡಿದ ದಲಿತ ಮುಖಂಡರು, ಈ ಕೃತ್ಯವನ್ನು ನಡೆಸಿರುವವರು ಯಾವುದೇ ಜನಾಂಗದವರಾಗಿರಲಿ ನಿಜವಾದ ಅಪರಾಧಿಗಳನ್ನು ಬಂಧಿಸಬೇಕು. ಅಲ್ಲದೆ ಈ ಪ್ರಕರಣವನ್ನು ಎಸ್‌ಐಟಿ ತನಿಖೆಗೆ ವಹಿಸಲು ಶಿಫಾರಸ್ಸು ಮಾಡಬೇಕು ಎಂದು ಒತ್ತಾಯಿಸಿದರು.

ತನಿಖೆ ಪಾರದರ್ಶಕವಾಗಿರಲಿ, ಅಮಾಯಕರನ್ನು ಬಲಿ ಕೊಡುವುದು ಬೇಡ. ರಾಜಕೀಯ ಒತ್ತಡಕ್ಕೆ ಒಳಗಾಗದೆ ತನಿಖೆ ನಡೆಸಬೇಕು. ಈ ಕೃತ್ಯವನ್ನು ಒಬ್ಬ ವ್ಯಕ್ತಿ ಮಾಡಿರಲು ಸಾಧ್ಯವಿಲ್ಲ. ಇದರ ಹಿಂದೆ ಹಲವರ ಕೈವಾಡವಿದೆ. ಪೊಲೀಸರು ಎಲ್ಲಾ ಆಯಾಮಗಳಲ್ಲೂ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ರಾಮಸಮುದ್ರ ಪೂರ್ವ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ನವೀನ್ ಮಾತನಾಡಿ, ಕೃತ್ಯ ಮಾಡಿರುವ ಕುರಿತು ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದರೆ ಊಹಾಪೋಹಗಳು ಬರುತ್ತಿರಲಿಲ್ಲ. ಗ್ರಾಮಗಳಲ್ಲಿ ಮಹಾನ್ ನಾಯಕರ ಪ್ರತಿಮೆ ಬಳಿ ಸಿಸಿ ಕ್ಯಾಮರಾ ಅಳವಡಿಸಲು ಸಹಕರಿಸಬೇಕು ಎಂದರು.

ಮುಖಂಡ ಮಂಜುನಾಥ್ ಮಾತನಾಡಿ, ಇಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಪರಾಧಿಗಳಿಗೆ ಕಠಿಣ ಶಿಕ್ಷೆಯಾದರೆ ಘಟನೆಗಳು ಮರುಕಳಿಸುವುದಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರೆ, ಉಡಿಗಾಲ ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡಲಾಗುತ್ತಿದ್ದು, ಸೂಕ್ತ ಕ್ರಮ ಜರುಗಿಸಬೇಕು ಎಂದು ಗ್ರಾಮದ ಮುಖಂಡರು ಒತ್ತಾಯಿಸಿದರು. ಪಟ್ಟಣ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಜಗದೀಶ್ ಮಾತನಾಡಿ, ಅಕ್ರಮ ಮದ್ಯ ಮಾರಾಟ ಸಂಬಂಧ ಪೊಲೀಸರು ಮಹಜರಿಗೆ ಬಂದ ವೇಳೆ ಸಾಕ್ಷಿಗೆ ಸಹಿ ಹಾಕಿ ಸಹಕರಿಸಬೇಕು ಎಂದು ಸಲಹೆ ನೀಡಿದರು.

ನಗರಸಭಾ ಸದಸ್ಯ ಮಹೇಶ್ ಮಾತನಾಡಿ, ಬಾಲಕಿಯರ ಜೂನಿಯರ್ ಕಾಲೇಜಿಗೆ ಹೋಗುವ ಹೆಣ್ಣು ಮಕ್ಕಳಿಗೆ ರಕ್ಷಣೆ ಬೇಕಿದೆ. ಕಾಲೇಜಿನ ಆವರಣದಲ್ಲಿ ಪುಂಡು ಪೋಕರಿಗಳ ಹಾವಳಿ ಹೆಚ್ಚಾಗಿದ್ದು ಕಾಲೇಜು ಆರಂಭವಾಗುವ ಹಾಗೂ ಬಿಡುವ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿ ನಿಯೋಜಿಸಬೇಕು ಎಂದು ಒತ್ತಾಯಿಸಿದರು. ಸಭೆಯಲ್ಲಿ ಡಿವೈಎಸ್‌ಪಿ ಸ್ನೇಹರಾಜ್, ಸಬ್ ಇನ್ಸ್‌ಪೆಕ್ಟರ್ ಹನುಮಂತ ಉಪ್ಪಾರ್ ಸೇರಿದಂತೆ ಇತರರಿದ್ದರು.

ಜಾತಿ ಬಣ್ಣ ಪಡೆಯುವುದು ಸರಿಯಲ್ಲ

ಚಾಮರಾಜನಗರ: ಜ್ಯೋತಿಗೌಡನಪುರ ಪ್ರಕರಣದ ಮೂಲಕ ಶೋಷಿತರನ್ನು ದಂಗೆ ಏಳಿಸುವ ಹುನ್ನಾರ ನಡೆಸಲಾಗುತ್ತಿದೆ ಎಂದು ವಕೀಲ ಪ್ರಸನ್ನಕುಮಾರ್ ಹೇಳಿದರು.

ಎಸ್‌ಸಿ, ಎಸ್‌ಟಿ ಸಮುದಾಯಗಳು ಶೋಷಿತ ಸಮುದಾಯಗಳಾಗಿವೆ. ಈ ಪ್ರಕರಣ ಜಾತಿ ಬಣ್ಣ ಪಡೆಯುತ್ತಿರುವುದು ವಿಪರ್ಯಾಸ, ನಮ್ಮ ಹೋರಾಟ ನಾಯಕ ಸಮುದಾಯದ ವಿರುದ್ಧವಲ್ಲ ಎಂದು ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು.

ಶೋಷಿತರೇ ಶೋಷಿತರ ವಿರುದ್ಧ ಹೋರಾಟ ಮಾಡುತ್ತಿರುವುದು ನಾಚಿಕೆಗೇಡಿನ ಸಂಗತಿ. ಆ ಮೂಲಕ ಎರಡು ಸಮುದಾಯಗಳನ್ನು ಎತ್ತಿ ಕಟ್ಟುವ ಕೆಲಸವಾಗುತ್ತಿದೆ. ಎಲ್ಲ ಜನಾಂಗದವರು ಸಾಮರಸ್ಯದಿಂದ ಜೀವನ ಸಾಗಿಸಬೇಕು. ಶೋಷಿತರ ಪರ ಹೋರಾಡಿದ ಅಂಬೇಡ್ಕರ್ ಒಂದು ಜಾತಿಗೆ ಸೀಮಿತವಲ್ಲ. ಪೊಲೀಸ್ ತನಿಖೆ ಪ್ರಗತಿಯಲ್ಲಿದ್ದು ಎಲ್ಲರೂ ಸಹಕರಿಸಬೇಕು. ಅಂಬೇಡ್ಕರ್ ಫ್ಲೆಕ್ಸ್ ಹಾಗೂ ಬುದ್ಧನ ಮೂರ್ತಿ ವಿರೂಪಗೊಳಿಸಿರುವವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ವಕೀಲ ಮಹೇಂದ್ರ ಮಾತನಾಡಿ, ಇದೊಂದು ಸೂಕ್ಷ್ಮ ವಿಚಾರವಾಗಿದ್ದು ಸಾಮಾಜಿಕ ಜಾಲತಾಣಗಳಲ್ಲಿ ಹೇಳಿಕೆ ಕೊಡುವಾಗ ಎಚ್ಚರಿಕೆ ವಹಿವಹಿಸುವುದು ಅಗತ್ಯ. ಪ್ರಚೋದನಕಾರಿ ಹೇಳಿಕೆ ಕೊಡುವುದು ಸಮಾಜಕ್ಕೆ ಒಳ್ಳೆಯದಲ್ಲ. ಈ ಪ್ರಕರಣದಲ್ಲಿ ಪೊಲೀಸರು ಸಾಕ್ಷಿಗಳನ್ನು ಕ್ರೋಢೀಕರಿಸಿ ಆರೋಪಿಯನ್ನು ಬಂಧಿಸಿದ್ದಾರೆ ಎಂದರು. ಮುಖಂಡ ಮೋಹನ್ ನಗು ಮಾತನಾಡಿ, ಜ್ಯೋತಿಗೌಡನಪುರ ಪ್ರಕರಣ ಹಿಂದೆ ಹಲವರ ಕೈವಾಡವಿದ್ದು, ನಿಜವಾದ ಆರೋಪಿಗಳನ್ನು ಬಂಧಿಸಿ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿ ಜ್ಯೋತಿಗೌಡನಪುರ ನಾಗರಾಜು, ಆನಂತ್, ಸತೀಶ್, ಅಪ್ಪು, ಇತರರು ಹಾಜರಿದ್ದರು.

ಬಸವನಪುರ ಡೇರಿಗೆ ನಿರ್ದೇಶಕರ ಅವಿರೋಧ ಆಯ್ಕೆ



ಬಸವನಪುರ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನೂತನ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾದವರನ್ನು ಸನ್ಮಾನಿಸಲಾಯಿತು.

ಚಾಮರಾಜನಗರ, ನ.22–ತಾಲೂಕಿನ ಬಸವನಪುರ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನಿರ್ದೇಶಕರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಸಂಘದ ಕಚೇರಿಯಲ್ಲಿ ನಡೆದ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಬಿ.ಎಂ.ಕುಮಾರ, ಮಹದೇವಸ್ವಾಮಿ, ಬಿ.ಸಿ.ಮಹದೇವ ಸ್ವಾಮಿ, ಮಂಜುನಾಥ ಸ್ವಾಮಿ, ಎಸ್.ಶಿವಮೂರ್ತಿ, ಬಿ.ಎಸ್. ಮಹದೇವ ಸ್ವಾಮಿ, ಕುಮಾರಿ, ಶಿವಮ್ಮ ರಾಜಮ್ಮ ರಾಜು, ಸುಧಾ ಶಿವಮೂರ್ತಿ, ಎಲ್. ಮಹದೇವಸ್ವಾಮಿ, ರಾಜಮ್ಮರವರು ಮಾತ್ರ ನಾಮಪತ್ರ ಸಲ್ಲಿಸಿದರು. ಇವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿಯ ಅಧೀಕ್ಷಕ ಎಸ್.ನಾಗೇಶ್ ಇವರನ್ನೇ ಅವಿರೋಧ ಆಯ್ಕೆ ಎಂದು ಘೋಷಿಸಿದರು.

ಸಭೆಯಲ್ಲಿ ಕಾರ್ಯದರ್ಶಿ ಮಹಾದೇವ ಸ್ವಾಮಿ ಭಾಗವಹಿಸಿದ್ದರು. ಸಂಘದ ನೂತನ ನಿರ್ದೇಶಕರನ್ನು ಅಭಿನಂದಿಸಲಾಯಿತು. ಸಂಸ್ಥಾಪಕ ಅಧ್ಯಕ್ಷ ಬಸವನಪುರ ರಾಜಶೇಖರ ಮಾತನಾಡಿ, ಗ್ರಾಮಸ್ಥರ ಒಗ್ಗಟ್ಟಿನ ಮೂಲಕ ಹಾಗೂ ಚಾಮುಲ ನಿರ್ದೇಶಕ ಸದಾಶಿವಮೂರ್ತಿಯವರ ಪರಿಶ್ರಮ ಫಲವಾಗಿ ಸಂಘಕ್ಕೆ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿರುವುದು ತುಂಬಾ ಖುಷಿ ತಂದಿದೆ. ಎಲ್ಲ ನಿರ್ದೇಶಕರು ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾಪಂ ಸದಸ್ಯ ಚಿನ್ನಸ್ವಾಮಿ, ಮಾಜಿ ಸದಸ್ಯ ಪುಟ್ಟಮಾದಯ್ಯ, ಮಾಜಿ ಅಧ್ಯಕ್ಷ ರವಿಕುಮಾರ್, ಸಿದ್ದರಾಜು, ಸ್ವಾಮಿ, ಪುಟ್ಟಣ್ಣ, ಪ್ರಭುಸ್ವಾಮಿ, ನಾಗರಾಜು ಇದ್ದರು.

ಇಂದು ವಿದ್ಯುತ್ ವ್ಯತ್ಯಯ

ಚಾಮರಾಜನಗರ: ಬೇಗೂರು ಉಪವಿಭಾಗ ವ್ಯಾಪ್ತಿಯಲ್ಲಿ ನಾಳೆ ಬೆಳಿಗ್ಗೆ 9ರಿಂದ ಸಂಜೆ 6ಗಂಟೆಯವರೆಗೆ ಹಿರಿಕಾಟಿ, ನಿಟ್ರೆ ಬೇಗೂರು, ವಾಟರ್ ಸಪ್ಲೈ, ಹೆಗ್ಗಡಹಳ್ಳಿ, ಮಂಚಳ್ಳಿ ಎನ್.ಜೆ.ವೈ, ಶೆಟ್ಟಹಳ್ಳಿ, ದೇಸಿಪುರ, ಇಂಡಸ್ಟ್ರಿಯಲ್, ಹೊರೆಯಾಲ, ಹಾಲಳ್ಳಿ, ಕಮರಹಳ್ಳಿ, ಬೊಗ್ಗನಪುರ, ಮರಳಾಪುರ, ರಂಗನಾಥಪುರ, ತೊರವಳ್ಳಿ, ನಿಟ್ರೆ, ಹಿರಿಕಾಟಿ, ಚಿಕ್ಕಾಟಿ, ಅರೆಪುರ, ತೊಂಡವಾಡಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹೆಚ್ಚುವರಿ ಅನುದಾನಕ್ಕೆ ಮನವಿ

ಬೇಗೂರು: ಅಂಬೇಡ್ಕರ್ ಸಮುದಾಯ ಭವನಕ್ಕೆ ಹೆಚ್ಚುವರಿ ಅನುದಾನ ನೀಡಬೇಕು ಎಂದು ಗ್ರಾಮದ ದಲಿತ ಮುಖಂಡರು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್‌ರಿಗೆ ಮನವಿ ಮಾಡಿದರು.

ಶಾಸಕರು ಈಗ 75 ಲಕ್ಷ ಅನುದಾನ ನೀಡಲಾಗಿದೆ. ಹೆಚ್ಚುವರಿ ಅನುದಾನ ಹಂತಹಂತವಾಗಿ ನೀಡುವುದಾಗಿ ಭರವಸೆ ನೀಡಿದರು ಎಂದು ಗ್ರಾಮದ ದಲಿತ ಮುಖಂಡ ಮಲ್ಲಿದಾಸ್, ಸದಾಶಿವ ಮೂರ್ತಿ ಹೇಳಿಕೆ ನೀಡಿದ್ದಾರೆ. ಕೆ.ಶಿವಸ್ವಾಮಿ, ಸೋಮಹಳ್ಳಿ ರವಿ, ಚಂದ್ರಪ್ರಸಾದ್, ಪುಟ್ಟಿ, ಬೇಗೂರು ಗ್ರಾಪಂ ಸದಸ್ಯ ಬಿ.ಎನ್. ಪುನೀತ್ ಕುಮಾರ್ ಸೇರಿದಂತೆ ಹಲವರಿದ್ದರು.

ಕೆರೆಗಳಿಗೆ ನೀರು ತುಂಬಿಸುವಂತೆ ಆಗ್ರಹಿಸಿ ರೈತ ಸಂಘ ಬೃಹತ್ ಸಮಾವೇಶ

ಗುಂಡ್ಲುಪೇಟೆ, ನ.22(ಸೋಮ್.ಜಿ)–ಕೆರೆಗಳಿಗೆ ನೀರು ತುಂಬಿಸುವಂತೆ ಹಾಗೂ ರೈತರಿಗೆ ಸಾಗುವಳಿ ನೀಡಲು ಅರಣ್ಯ ಇಲಾಖೆಯಿಂದ ಎನ್‌ಓಸಿ ನೀಡಲು ಒತ್ತಾಯಿಸಿ ಮಂಗಳವಾರ ಪಟ್ಟಣದ ತಾಲೂಕು ಕಚೇರಿ ಮುಂಭಾಗ ರಾಜ್ಯ ರೈತ ಸಂಘ ಬೃಹತ್ ಸಮಾವೇಶ ನಡೆಸಿತು

ಪಟ್ಟಣದ ಡಿ.ದೇವರಾಜ ಅರಸು ಕ್ರೀಡಾಂಗಣದಿಂದ ಪ್ರಮುಖ ರಸ್ತೆಯಲ್ಲಿ ಸಾಗಿದ ರೈತರು ಕಳೆದ 35 ದಿನಗಳಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸುತ್ತಿದ್ದರೂ ಬೇಡಿಕೆಗಳನ್ನು ಈಡೇರಿಸದ ಜಿಲ್ಲಾಡಳಿತದ ವಿರುದ್ಧ ಘೋಷಣೆ ಕೂಗಿದರು. ನಂತರ ತಾಲೂಕು ಕಚೇರಿ ಎದುರು ಸಮಾವೇಶಗೊಂಡ ಕಾರ್ಯಕರ್ತರನ್ನು ಉದ್ದೇಶಿಸಿ ಸಂಘದ ಜಿಲ್ಲಾಧ್ಯಕ್ಷ ಮಹದೇವಪ್ಪ ಮಾತನಾಡಿದರು. ಗಾಂಧಿ ಗ್ರಾಮ ಏತನೀರಾವರಿ ಯೋಜನೆ ಮತ್ತು ಉತ್ತೂರು ಕೆರೆ ನಾಲ್ಕನೇ ಹಂತದ ಕೆರೆಗಳಿಗೆ ನೀರು ತುಂಬಿಸಬೇಕು. 50–60 ವರ್ಷಗಳಿಂದ ಉಳುಮೆ ಮಾಡುತ್ತಿರುವ ರೈತರಿಗೆ ಸಾಗುವಳಿ ಪತ್ರ ನೀಡಬೇಕು. ಮುಖ್ಯಮಂತ್ರಿಗಳು ಜಿಲ್ಲೆಯಲ್ಲಿ ಸಂಪುಟ ಸಭೆ ನಡೆಸಿದಾಗ ನೀಡಿದ ಭರವಸೆಯಂತೆ 110 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ ನೀಡಬೇಕು.

ಮುಖಂಡ ಹೊಸಕೋಟೆ ಬಸವರಾಜು ಮಾತನಾಡಿ, ಕೇಂದ್ರ ಹಾಗೂ ರಾಜ್ಯಗಳ ರೈತ ವಿರೋಧಿ ಸರ್ಕಾರಗಳು ಜಾತಿ, ಧರ್ಮದ ಹಣ ಹೆಂಡ ಕೊಟ್ಟು ಅಧಿಕಾರಕ್ಕೆ ಬಂದಿವೆ. 36 ದಿನದಿಂದ ರೈತರು ಧರಣಿ ನಡೆಸುತ್ತಿದ್ದರೂ ಸುಮ್ಮನಿರುವ ಸರ್ಕಾರಕ್ಕೆ ನಾಚಿಕೆಯಾಗಬೇಕು. ರೈತರು ಒಗ್ಗಟ್ಟಾಗಿ ಹೋರಾಟ ಮಾಡಿ ಸೌಲಭ್ಯ ಪಡೆದುಕೊಳ್ಳಬೇಕು ಎಂದರು.

ಮಂಡ್ಯ ಜಿಲ್ಲಾಧ್ಯಕ್ಷ ಶೆಟ್ಟಹಳ್ಳಿ ರವಿಕುಮಾರ್, ರಾಮನಗರ ಜಿಲ್ಲಾಧ್ಯಕ್ಷ ತಿಮ್ಮೇಗೌಡ, ಮೈಸೂರು ಜಿಲ್ಲಾಧ್ಯಕ್ಷ ಮರಂಕಯ್ಯ, ಕೃಷ್ಣಪ್ಪ, ಹೆಗ್ಗವಾಡಿಪುರ ಮಹೇಶ್ ಕುಮಾರ್ ಬಡಗಲಪುರ ನಾಗೇಂದ್ರ, ಕಾರ್ಯಾಧ್ಯಕ್ಷ ಎ.ಎಂ.ಮಹೇಶ್ ಪ್ರಭು, ಮುಂತಾದವರು ಮಾತನಾಡಿದರು. ರೈತಮುಖಂಡರಾದ ಮಹದೇವಪ್ಪ, ಕಾಡಾ ಮಾಜಿ ಅಧ್ಯಕ್ಷ ನಂಜಪ್ಪ ಹಾಗೂ ಇತರರು ಶಾಸಕರೊಂದಿಗಿದ್ದರು.

ಪ್ರತಿ ಪ್ರಜೆಗೂ ಮತದಾನದ ಹಕ್ಕು ಕೊಟ್ಟವರು ಬಿ.ಆರ್.ಅಂಬೇಡ್ಕರ್



ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂಬೇಡ್ಕರ್ ಮತ್ತು ಸಂವಿಧಾನ ಕುರಿತ ವಿಚಾರ ಸಂಕಿರಣ ನಡೆಯಿತು


ಚಾಮರಾಜನಗರ, ನ.22– ಪ್ರತಿಯೊಬ್ಬ ಭಾರತೀಯನಿಗೂ ಮತ ಚಲಾಯಿಸುವ ಹಕ್ಕನ್ನು ದೊರಕಿಸಿಕೊಟ್ಟಿದ್ದು, ಡಾ.ಬಿ.ಆರ್. ಅಂಬೇಡ್ಕರ್ ಎಂದು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಪುಟ್ಟಸ್ವಾಮಿ ರಾಮಸಮುದ್ರ ತಿಳಿಸಿದರು.

ಸಂವಿಧಾನ ದಿನಾಚರಣೆ ಹಾಗೂ ಅಂಬೇಡ್ಕರ್ ಹಬ್ಬದ ಅಂಗವಾಗಿ ತಾಲೂಕಿನ ಭೋಗಾಪುರ ಗ್ರಾಮದಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಂಗವಾಹಿನಿ ಸಂಸ್ಥೆಯಿಂದ ಆಯೋಜಿಸಿದ್ದ ಅಂಬೇಡ್ಕರ್ ಮತ್ತು ಸಂವಿಧಾನ ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಮಹಿಳೆಯರು ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಪ್ರಗತಿ ಸಾಧಿಸಲು ಹಾಗೂ ಸ್ವಾವಲಂಬಿ ಜೀವನ ನಡೆಸಲು ಅವರ ಕೊಡುಗೆ ಅಪಾರವಾಗಿದೆ ಎಂದರು.

ಪ್ರಾಚಾರ್ಯ ಡಾ.ಪಿ. ದೇವರಾಜು ಮಾತನಾಡಿ, ಜಗತ್ತಿನಾದ್ಯಂತ ವಿದ್ವತ್ ಲೋಕ ಅಂಬೇಡ್ಕರ್ ಅವರನ್ನು ಇಂದು ಓದತೊಡಗಿದೆ. ಜಗತ್ತಿನ ತುಳಿತಕ್ಕೊಳಗಾದ ಎಲ್ಲರೂ ಸಾಮಾಜಿಕ ನ್ಯಾಯ ಮತ್ತು ಆತ್ಮ ಗೌರವ ಎತ್ತಿ ಹಿಡಿಯಲು ಭಾರತದ ಸಂವಿಧಾನ ಮತ್ತು ಅಂಬೇಡ್ಕರ್ ಅವರನ್ನು ನೆನಯಲೇಬೇಕು ಎಂದು ಹೇಳಿದರು.


ಸಮಾರಂಭದಲ್ಲಿ ಅಂಬೇಡ್ಕರ್ ವಾದಿ ಹಾಗೂ ಸಾಹಿತಿ ಡಾ.ಕೃಷ್ಣಮೂರ್ತಿ ಚಮರಂ, ರಂಗವಾಹಿನಿ ಅಧ್ಯಕ್ಷ ಸಿಎಂ ನರಸಿಂಹಮೂರ್ತಿ, ನಿಸರ್ಗ ಟ್ರಸ್ಟ್‌ನ ನಾಗರಾಜು, ಕಾಲೇಜಿನ ಪ್ರಾಧ್ಯಾಪಕರಾದ ಡಾ.ರಮೇಶ್ ಬಾಬು, ರಂಗಸ್ವಾಮಿ, ದೀಪಕ್ ವಿಲ್ಸನ್ ಯಶೋಧಾ ದೇವಿ, ಸುದರ್ಶನ್, ಹಸನ್ ಮಹಮದ್ ಉಪಸ್ಥಿತರಿದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 23-11-2025



ದಾಖಲೆಯಲ್ಲಿ ಇರುವಂತೆ ಸ್ಥಳೀಯ ಜನರಿಂದ ಪೂಜಿಸಲ್ಪಡುವ ಕಣಿವೆಯ ದೇವತೆ, ಸ್ವರ್ಗದ ಶಿಖರ ಹಾಗೂ ಗೌರಿಶಂಕರ ಶಿಖರ ಎಂದು ಕರೆಯಲಾಗುವ ಮೌಂಟ್ ಎವರೆಸ್ಟ್ ಶಿಖರದ ಎತ್ತರ 29,032 ಅಡಿ(8849ಮೀ.), 1852ರಲ್ಲಿಯೇ ಅದರ ಎತ್ತರವನ್ನು ಒಬ್ಬ ಗಣಿತಜ್ಞ ಅಳೆದು ಜಗತ್ತಿಗೆ ತೋರಿಸಿದನೆಂದರೆ ಆಶ್ಚರ್ಯವಲ್ಲವೇ?

ಮೌಂಟ್ ಎವರೆಸ್ಟ್ ಅಳೆದವರು ಗಣಿತಜ್ಞ ಸಿಕ್ದರ್!



ಮೌಂಟ್ ಎವರೆಸ್ಟ್ ಶಿಖರವು ವಿಶ್ವದಲ್ಲೇ ಮೊದಲನೆಯ ಸ್ಥಾನ ಪಡೆದರೆ (29032ಅಡಿ/8849ಮೀ.), ಪಾಕ್ ಆಕ್ರಮಿತ ಕಾಶ್ಮೀರ ಮತ್ತು ಚೀನಾ ನಡುವೆ ಇರುವ ಕೆ2 ಶಿಖರ, ಇದನ್ನು ಗಾಡ್ವಿನ್-ಆಸ್ಟಿನ್ ನೇತೃತ್ವದ ಯುರೋಪ್ ತಂಡವು ಮೋಜಣಿ ನಡೆಸಿ ಎತ್ತರವನ್ನು (28251ಅಡಿ/8611ಮೀ.) ನಿಖರವಾಗಿ ನಿರ್ಧರಿಸಿದರು, ಹಾಗಾಗಿ ಗಾಡ್ವಿನ್-ಆಸ್ಟಿನ್ ಹೆಸರಿನಿಂದಲೂ ಕರೆಯಲಾಗುತ್ತದೆ. ನೇಪಾಳದ ಕಾಂಚನ್‌ಜುಂಗಾ ಶಿಖರವು ಎತ್ತರದಲ್ಲಿ ಮೂರನೇ ಸ್ಥಾನದಲ್ಲಿದೆ (28169ಅಡಿ/8586 ಮೀ.).

ಇಂದಿನ ದಿನಗಳಲ್ಲಿ ಸಿವಿಲ್ ಇಂಜಿನಿಯರಿಂಗ್ ಕ್ಷೇತ್ರವು ಹೊಸ ಹೊಸ ಸಂಶೋಧನೆಗಳಿಂದ ರಸ್ತೆ, ಕಾಲುವೆ, ಸೇತುವೆಗಳು, ಸುರಂಗ ಮಾರ್ಗ, ಅಣೆಕಟ್ಟೆ, ಆಕಾಶದೆತ್ತರದ ಕಟ್ಟಡಗಳು ಮುಂತಾದ ಎಲ್ಲಾ ವಿಭಾಗಗಳಲ್ಲೂ ಅಗಾಧವಾಗಿ ಅಭಿವೃದ್ಧಿ ಆಗಿದೆ. ಸಾಕಷ್ಟು ಅಭಿವೃದ್ಧಿ ಕಾಣದ ಕೆಲವು ದಶಕಗಳ ಹಿಂದೆ ನಿಖರವಾಗಿ ಅಳತೆ ಮಾಡುವುದಕ್ಕೂ ಕಷ್ಟವಿತ್ತು. ಸರ್ವೆಯರ್ ಚೈನ್, ಮೆಟಾಲಿಕ್ ಅಥವಾ ಸ್ಟೀಲ್ ಟೇಪ್, ಡಂಪಿಲೆವೆಲ್, ಕ್ರಾಸ್ ಸ್ಟಾಫ್, ರೇಂಜಿಂಗ್ ರಾಡ್ ಮುಂತಾದ ಮೆಸರಿಂಗ್ ಇನ್‌ಸ್ಟ್ರುಮೆಂಟ್‌ಗಳನ್ನು ಬಳಸಿ ಅಳತೆಗಳು ಹಾಗೂ ಮೋಜಣಿ ಕೆಲಸಗಳು ನಡೆಯುತ್ತಿತ್ತು.

ಆ ಮೂಲಕ ಒಂದು ನಿರ್ದಿಷ್ಟ ಪ್ರದೇಶದ ವಿಸ್ತೀರ್ಣ, ವಸ್ತುಗಳ ಹಾಗೂ ಕಾಮಗಾರಿಗಳಲ್ಲಿ ನಿರ್ವಹಿಸಿದ ಕೆಲಸಗಳ ಪರಿಮಾಣವನ್ನು ಲೆಕ್ಕಾಚಾರ ಮಾಡಲಾಗುತ್ತಿತ್ತು, ಲೆಕ್ಕಾಚಾರ ಮತ್ತು ನಖಾಶೆಗಳನ್ನು ತಯಾರಿಸಲು ಕಂಪ್ಯೂಟರ್ ಬಳಕೆಯಂತೂ ಇರಲೇ ಇಲ್ಲ. ಆ ದಿನಗಳಲ್ಲಿ ಕಂಡುಹಿಡಿದ ಫಲಿತಾಂಶಗಳು ಒಂದು ಹಂತದವರೆಗೆ ನಿಖರವಾಗಿಯೇ ಇರುತ್ತಿತ್ತು. ಆದರೆ ಇಂದು ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಎಲ್ಲವಕ್ಕೂ ಆವಿಷ್ಕರಿಸಿದ ಕರಾರುವಾಕ್ಕಾಗಿ ಮೈಕ್ರೋ ಲೆವೆಲ್‌ವರೆಗೆ ಅಳೆಯುವುದಕ್ಕೆ ಕಂಪ್ಯೂಟರ್ ತಂತ್ರಾಂಶಗಳೊಂದಿಗೆ ಪ್ರಿಸೈಜ್ ಉಪಕರಣಗಳಿವೆ. ಕಡಿಮೆ ಸಮಯದಲ್ಲಿ ಹೆಚ್ಚು ಕೆಲಸ ಮಾಡುವಂತೆ ತಂತ್ರಜ್ಞಾನ ಬೆಳೆದಿದೆ. ಥಿಯೊಡೋಲೈಟ್, ಟೋಟಲ್ ಸ್ಟೇಷನ್, ಜಿಪಿಎಸ್, ಲೇಸರ್ಸ್, ರೆಡಾರ್ಸ್, ಮೆಸರಿಂಗ್ ವೀಲ್ಸ್ ಮುಂತಾದವು ಇಂದು ಉಪಯೋಗಿಸುತ್ತಿರುವ ಆಧುನಿಕ ಉಪಕರಣಗಳು. ಇವುಗಳ ಜೊತೆಗೆ ಸೆಟೆಲೈಟ್ ಮತ್ತು ತಂತ್ರಾಂಶಗಳನ್ನು ಸಹ ಬಳಕೆ ಮಾಡಿಕೊಳ್ಳಲಾಗುತ್ತದೆ, ಒಟ್ಟಿನಲ್ಲಿ ಸುಲಭವಾಗಿ ಅಳೆದು ಕ್ಯಾಡ್ ತಂತ್ರಾಂಶದಿಂದ ವಿನ್ಯಾಸ (Design) ಮಾಡಿ, ನಕಾಶೆ (Drawing) ತಯಾರಿಸಿ ಪರಿಮಾಣ (Quantity)ವನ್ನು ಕ್ಷಣಾರ್ಧದಲ್ಲಿ ನಿಖರವಾಗಿ ಕಂಡುಹಿಡಿಯುವ ಸ್ಥಿತಿಯಲ್ಲಿ ಇದ್ದೇವೆ, ಹಾಗೆಯೇ ಕೆಲಸದಲ್ಲಿ ನಿರ್ಲಕ್ಷ್ಯ ತೋರಿದರೆ ಬರುವ ಫಲಿತಾಂಶ ಕೂಡ ಘೋರವಾಗಿರುತ್ತದೆ. ಎಲ್ಲವೂ ಡಿಜಿಟಲೈಸ್‌ಮಯವಾಗಿದೆ. ಫೀಲ್ಡ್‌ನಲ್ಲಿ ಸರ್ವೆ ಮಾಡುತ್ತಿರುವಾಗಲೇ ಕಚೇರಿಗೆ ಡೇಟಾ ಕಳುಹಿಸಿ ಫಲಿತಾಂಶ ಪಡೆಯಬಹುದು.

ಇಂಜಿನಿಯರ್‌ಗಳಿಗೆ ಹಳೆಯ ಕಾಲದ ಯಾವೊಂದು ಉಪಕರಣವೂ ಬೇಕಿಲ್ಲ, ಕನಿಷ್ಠ ಇಂಜಿನಿಯರ್‌ಗೆ ಬರೆಯುವ ಲೇಖನಿಯೂ ಅವಶ್ಯಕತೆ ಇಲ್ಲ. ಒಂದು ಕಾಲದಲ್ಲಿ ಪೆನ್ಸಿಲ್‌ನಿಂದ ಡ್ರಾಯಿಂಗ್ ಶೀಟ್ ಅಥವಾ ಗ್ರಾಫ್ ಶೀಟ್‌ಗಳಲ್ಲಿ ನಕಾಶೆಗಳನ್ನು ಬರೆದು, ಇಂಕಿಗೆ ಟ್ರೇಸಿಂಗ್ ಪೆನ್ ಅದ್ದಿ ಅದ್ದಿ ಟ್ರೇಸ್ ಮಾಡುವುದಕ್ಕೆ ದೀರ್ಘ ಸಮಯ ತೆಗೆದುಕೊಂಡು ನಕಾಶೆಗಳನ್ನು ಟ್ರೇಸ್ ಮಾಡಿ ಬೇಕಿರುವಷ್ಟು ಪ್ರತಿಗಳನ್ನು ಕಮಟು ವಾಸನೆಯ ಅಮೋನಿಯಾ ಪ್ರಿಂಟ್ ಮೂಲಕ ತೆಗೆದುಕೊಳ್ಳಲಾಗುತ್ತಿತ್ತು. ಆದರೆ ಈಗ ತಂತ್ರಜ್ಞಾನ ಬೆಳೆದಿದೆ. ಇಲ್ಲಿ ಇದ್ದುಕೊಂಡೇ ನಕಾಶೆ ತಯಾರಿಸಿ ಪ್ರಪಂಚದಲ್ಲಿ ಎಲ್ಲಿ ಬೇಕಾದರೂ ಪ್ರಿಂಟ್ ತೆಗೆದುಕೊಳ್ಳಬಹುದು.

ದಾಖಲೆಯಲ್ಲಿ ಇರುವಂತೆ ಸ್ಥಳೀಯ ಜನರಿಂದ ಪೂಜಿಸಲ್ಪಡುವ ಕಣಿವೆಯ ದೇವತೆ, ವಿಶ್ವದ ದೇವತೆ, ಸ್ವರ್ಗದ ಶಿಖರ ಹಾಗೂ ಗೌರಿಶಂಕರ ಶಿಖರ ಎಂದು ಕರೆಯಲಾಗುವ ಮೌಂಟ್ ಎವರೆಸ್ಟ್ ಶಿಖರದ ಎತ್ತರ 29,032 ಅಡಿ(8849ಮೀ.), 1852ರಲ್ಲಿಯೇ ಅದರ ಎತ್ತರವನ್ನು ಒಬ್ಬ ಗಣಿತಜ್ಞ ಅಳೆದು ಜಗತ್ತಿಗೆ ತೋರಿಸಿದನೆಂದರೆ ಆಶ್ಚರ್ಯವಲ್ಲವೇ?.

ಇವತ್ತಿಗೆ ಎಲ್ಲವೂ ಸರಳ ಹಾಗೂ ತ್ವರಿತವಾಗಿ ಆಗುತ್ತದೆ. ಇಲ್ಲಿ ಪ್ರಸ್ತಾಪಿಸುತ್ತಿರುವುದು 19ನೇ ಶತಮಾನದ ಕಾಲಘಟ್ಟದಲ್ಲಿ ಸರ್ವೆ ಅಥವಾ ಮೋಜಣಿ ಕೆಲಸಗಳು ಹೇಗಿತ್ತು ಎಂಬುದರ ಕುರಿತಾಗಿ. ಹಳೆಯ ಪದ್ಧತಿಯಲ್ಲಿ ಒಬ್ಬ ಭಾರತೀಯ ಗಣಿತಜ್ಞ ಹಾಗೂ ಸಮಾಜ ಸುಧಾರಕ ರಾಧಾನಾಥ್ ಸಿಕ್ದರ್ ಎಂಬ ವ್ಯಕ್ತಿ ಮೌಂಟ್ ಎವರೆಸ್ಟ್‌ನ ಎತ್ತರವನ್ನು 1852ರಲ್ಲಿ ಲೆಕ್ಕ ಹಾಕಿದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಪಾತ್ರವಾದದ್ದು, ಅಂದಿಗೆ ಅದು ಮಹಾನ್ ಸಾಧನೆಯಾಗಿತ್ತು, 1852ರವರೆಗೂ ಭೂಮಿಯ ಮೇಲ್ಮೈನಲ್ಲಿ ಇದು ಅತ್ಯಂತ ಎತ್ತರದ ಬಿಂದು ಎಂದು ತಿಳಿದಿರಲಿಲ್ಲ.

1813, ಅಕ್ಟೋಬರ್ 5ರಂದು ಕೊಲ್ಕತ್ತಾದ ಬಂಗಾಳಿ ಬ್ರಾಹ್ಮಣ ಕುಟುಂಬದಲ್ಲಿ ತಿತುರಾಮ್ ಸಿಕ್ದರ್ ಮತ್ತು ದೇವಕಿ ಸಿಕ್ದರ್ ದಂಪತಿಯ ಪುತ್ರರಾಗಿ ರಾಧಾನಾಥ್ ಸಿಕ್ದರ್ ಜನಿಸಿದರು. ತಂದೆ ಗುಮಾಸ್ತರಾಗಿ ಕೆಲಸ ಮಾಡುತ್ತಿದ್ದರು, ರಾಧಾನಾಥ್‌ರವರಿಗೆ ಶ್ರೀನಾಥ್ ಸಿಕ್ದರ್ ಎಂಬ ಒಬ್ಬ ಸಹೋದರನು ಇದ್ದ. ಹುಡುಗ ರಾಧಾನಾಥ್ ಗಣಿತ ವಿಷಯದಲ್ಲಿ ಅಸಾಧಾರಣ ಸಾಮರ್ಥ್ಯವನ್ನು ಹೊಂದಿದ್ದನು. ಕಾಲೇಜಿನಲ್ಲಿ ಗಣಿತಶಾಸ್ತ್ರದಲ್ಲಿ ಪ್ರಾಧ್ಯಾಪಕರಾಗಿದ್ದ ಜಾನ್ ಟೈಟ್ಲರ್‌ರವರು ಇವರ ಬುದ್ಧಿವಂತಿಕೆಯನ್ನು ಗುರುತಿಸಿ ಮಾರ್ಗದರ್ಶನ ನೀಡುವ ಮೂಲಕ ಅವರ ಬೌದ್ಧಿಕ ಬೆಳವಣಿಗೆಯಲ್ಲಿ ಮುಖ್ಯ ಪಾತ್ರ ವಹಿಸಿದರು.

1830ರಿಂದ 1843ರವರೆಗೆ ಸರ್ ಜಾರ್ಜ್ ಎವರೆಸ್ಟ್ ಎಂಬುವವರು ಭಾರತದ ಬ್ರಿಟಿಷ್ ಸರ್ವೆಯರ್ ಜನರಲ್ ಆಗಿದ್ದರು. ಎವರೆಸ್ಟ್‌ರವರು ಕೊಲ್ಕತ್ತಾ ಪಟ್ಟಣದ ಮ್ಯಾಪಿಂಗ್ ಪ್ರಕ್ರಿಯೆಯಲ್ಲಿ ಇರುವಾಗ ತ್ರಿಕೋನಮಿತಿಯಲ್ಲಿ ಪರಿಣಿತಿ ಹೊಂದಿರುವ ಗಣಿತಜ್ಞರನ್ನು ಹುಡುಕುತ್ತಿದ್ದರು, ಆ ಸಮಯಕ್ಕೆ ಜಾನ್ ಟೈಟ್ಲರ್‌ರವರು ತಮ್ಮ ಶಿಷ್ಯನಾಗಿದ್ದ 18 ವರ್ಷದ ತರುಣ ರಾಧಾನಾಥ್ ಸಿಕ್ದರ್ ಅವರನ್ನು ಶಿಫಾರಸು ಮಾಡಿದರು. ಎವರೆಸ್ಟ್ ಅವರ ನೆಚ್ಚಿನ ಶಿಷ್ಯರಾಗಿದ್ದ ಇವರು ಗಣಿತ ಶಾಸ್ತ್ರದಲ್ಲಿ ಹೆಚ್ಚಿನ ಕೌಶಲ್ಯವನ್ನು ತೋರಿದ ಇವರನ್ನು ತಿಂಗಳಿಗೆ ಮೂವತ್ತು ರೂಪಾಯಿ ಸಂಬಳದ ಉದ್ಯೋಗಕ್ಕೆ ಜಿಟಿಎಸ್‌ನಲ್ಲಿ ಸೇರಿಸಿಕೊಂಡರು. ರಾಧಾನಾಥ್‌ರವರ ಕೆಲಸವೆಂದರೆ ಜಿಯೋಡೆಟಿಕ್ ಸಮೀಕ್ಷೆಗಳನ್ನು ಮಾಡುವುದಾಗಿತ್ತು.

1843ರಲ್ಲಿ ಜಾನ್ ಎವರೆಸ್ಟ್‌ರವರು ನಿವೃತ್ತಿ ಆದ ನಂತರ ಕರ್ನಲ್ ಆಂಡ್ರ್ಯೂ ಸ್ಕಾಟ್ ವಾ ರವರು ಅಧಿಕಾರ ವಹಿಸಿಕೊಂಡರು. ಅವರು ರಾಧಾನಾಥ್ ಅವರ ಪರಿಣಿತಿಯನ್ನು ತಿಳಿದು 1851ರಲ್ಲಿ ಅವರಿಗೆ ಮುಖ್ಯ ಕಂಪ್ಯೂಟರ್ ಹುದ್ದೆಗೆ ಬಡ್ತಿ ನೀಡಿದರು, ಜೊತೆಗೆ ಹೆಚ್ಚುವರಿಯಾಗಿ ಹವಾಮಾನ ಇಲಾಖೆಯ ಅಧೀಕ್ಷಕರು ಕೂಡ ಆಗಿದ್ದರು. ಕರ್ನಲ್ ವಾ ರವರ ಆದೇಶದಂತೆ ರಾಧಾನಾಥ್‌ರವರು ಪರ್ವತಗಳ ಎತ್ತರವನ್ನು ಅಳೆಯಲು ಪ್ರಾರಂಭಿಸಿದರು. ಅಲ್ಲಿಯವರೆಗೂ ಎವರೆಸ್ಟ್ ಶಿಖರವನ್ನು ನೋಡಿರದ ರಾಧಾನಾಥ್‌ರವರು 1852ರಲ್ಲಿ ವಿಶ್ವದ ಅತೀ ಎತ್ತರದ ಶಿಖರವೆಂದು ಪರಿಗಣಿಸಲಾಗಿದ್ದ ಕಾಂಚನಜುಂಗಾ ನಿಜವಾಗಿಯೂ ಅಲ್ಲವೆಂದು ಕಂಡುಹಿಡಿದರು. ರಾಧಾನಾಥ್‌ರವರು ಆರು ಬಗೆಯ ಅವಲೋಕನಗಳಿಂದ ಎವರೆಸ್ಟ್ ಶಿಖರದ ಬಗ್ಗೆ ಅಂಕಿಅಂಶಗಳನ್ನು ಸಂಗ್ರಹಿಸಿ, ಅಂತಿಮವಾಗಿ ವಿಶ್ವದಲ್ಲೇ ಅತಿ ಎತ್ತರದ ಶಿಖರ ಎಂಬ ತೀರ್ಮಾನಕ್ಕೆ ಬಂದರು.

ಗಣಿತಜ್ಞ ರಾಧಾನಾಥ್ ಸಿಕ್ದರ್ ಅಳತೆ ಮಾಡಿದ ಎವರೆಸ್ಟ್ ಶಿಖರವು 29000 ಅಡಿ ಎಂದು ಲೆಕ್ಕ ಹಾಕಲಾಗಿತ್ತು, 1955ರಲ್ಲಿ ಭಾರತೀಯ ಸಮೀಕ್ಷೆಯ ಪ್ರಕಾರ 29032 ಅಡಿ ಅಥವಾ 8849ಮೀ. ಎಂದು ಮರು ಲೆಕ್ಕಾಚಾರ ಮಾಡಿ ಅಧಿಕೃತಗೊಳಿಸಲಾಯಿತು.

ಮೌಂಟ್ ಎವರೆಸ್ಟ್ ಶಿಖರವು ವಿಶ್ವದಲ್ಲೇ ಮೊದಲನೆಯ ಸ್ಥಾನ ಪಡೆದರೆ (29032ಅಡಿ/8849ಮೀ.), ಪಾಕ್ ಆಕ್ರಮಿತ ಕಾಶ್ಮೀರ ಮತ್ತು ಚೀನಾ ನಡುವೆ ಇರುವ ಕೆ2 ಶಿಖರ, ಇದನ್ನು ಗಾಡ್ವಿನ್-ಆಸ್ಟಿನ್ ನೇತೃತ್ವದ ಯುರೋಪ್ ತಂಡವು ಮೋಜಣಿ ನಡೆಸಿ ಎತ್ತರವನ್ನು (28251ಅಡಿ/8611ಮೀ.) ನಿಖರವಾಗಿ ನಿರ್ಧರಿಸಿದರು, ಹಾಗಾಗಿ ಗಾಡ್ವಿನ್-ಆಸ್ಟಿನ್ ಹೆಸರಿನಿಂದಲೂ ಕರೆಯಲಾಗುತ್ತದೆ. ನೇಪಾಳದ ಕಾಂಚನ್‌ಜುಂಗಾ ಶಿಖರವು ಎತ್ತರದಲ್ಲಿ ಮೂರನೇ ಸ್ಥಾನದಲ್ಲಿದೆ (28169ಅಡಿ/8586 ಮೀ.).

ಭಾರತದ ಸರ್ವೆ ಇಲಾಖೆಯಲ್ಲಿ ಅಪಾರ ಸೇವೆ ಸಲ್ಲಿಸಿದ್ದ ಜಾರ್ಜ್ ಎವರೆಸ್ಟ್(1790-1866) ಎಂಬಾತನ ಹೆಸರನ್ನು ಪೂರ್ವ ನೇಪಾಳ-ಚೀನಾ ಎಲ್ಲೆಯಲ್ಲಿರುವ ಮೊದಲ ಸ್ಥಾನದ ಭೂಮಿಯ ಮೇಲ್ಮೈನ ಅತೀ ಎತ್ತರದ ಶಿಖರಕ್ಕೆ ಇಡಲಾಯಿತು, ಎವರೆಸ್ಟ್ ಶಿಖರವನ್ನು ಭಾರತೀಯರು ಗೌರಿಶಂಕರ ಶಿಖರ ಎಂಬುದಾಗಿಯೂ ಕರೆಯುವರು.

ರಾಧಾನಾಥ್ ಸಿಕ್ದರ್‌ರವರು ಮುಖ್ಯ ಕಂಪ್ಯೂಟರ್ ಹುದ್ದೆಯಿಂದ ನಿವೃತ್ತರಾದ ಬಳಿಕ ಗಣಿತಶಾಸ್ತ್ರದ ಉಪನ್ಯಾಸಕರಾಗಿ ನೇಮಕಗೊಂಡರು. ಶಿಖರವನ್ನು ಅಳೆದಿದ್ದು ರಾಧಾನಾಥ್‌ರವರಾಗಿದ್ದರೂ ಇವರ ಆಯ್ಕೆಗೆ ಕಾರಣರಾದ ಹಾಗೂ ಸರ್ವೆ ಇಲಾಖೆಯಲ್ಲಿ ಅಪಾರ ಸೇವೆ ಮಾಡಿದ ಜಾರ್ಜ್ ಎವರೆಸ್ಟ್ ಅವರ ಹೆಸರನ್ನು ಶಿಖರಕ್ಕೆ ಇಡಲಾಗಿದೆ. ಸಿಕ್ದರ್‌ರವರ ಗಣಿತ ಪ್ರತಿಭೆಯನ್ನು ಗುರುತಿಸಿ ಜರ್ಮನ್ ಫಿಲಾಸಫಿಕಲ್ ಸೊಸೈಟಿಯು ನಿವೃತ್ತಿಯ ಎರಡು ವರ್ಷಗಳ ನಂತರ ಸದಸ್ಯರನ್ನಾಗಿ ಮಾಡಿಕೊಂಡಿತು. ಭಾರತ ಸರ್ಕಾರದ ಅಂಚೆ ಇಲಾಖೆಯು 27, ಜೂನ್ 2004ರಲ್ಲಿ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿತು.

ರಾಧಾನಾಥ್‌ರವರು ಅಳೆದ ವಿಶ್ವದ ಅತ್ಯಂತ ಎತ್ತರದ ಮೌಂಟ್ ಎವರೆಸ್ಟ್ ಶಿಖರವನ್ನು 2024ರ ಅಂತ್ಯಕ್ಕೆ 7269 ಸಾಹಸಿಗರು ಏರಿ ತುದಿ ಮುಟ್ಟಿದ್ದಾರೆ. ಪ್ರತೀ ವರ್ಷ ಸಾವಿರದವರೆಗೆ ಪರ್ವತಾರೋಹಿಗಳು ಏರಲು ಶ್ರಮ ಪಡುತ್ತಾರೆ. ಆದರೆ ಏರುವ ಸರಾಸರಿ ನೂರು ಆರೋಹಿಗಳಲ್ಲಿ ಆರವತ್ತು ಮಂದಿ ಮಾತ್ರ ಯಶಸ್ಸು ಗಳಿಸುತ್ತಾರೆ.



ಮಿರ್ಲೆ ಚಂದ್ರಶೇಖರ್
ಮೊ. 99161 29654

ವಾರಭವಿಷ್ಯ



23.11.2025 ರಿಂದ 29.11.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ವೃಶ್ಚಿಕ, ಚಂದ್ರ-ಧನುಸ್ಸು, ಮಕರ, ಕುಂಭ, ಕುಜ-ವೃಶ್ಚಿಕ, ಬುಧ-ತುಲಾ, ಗುರು-ಕಟಕ, ಶುಕ್ರ-ತುಲಾ-ವೃಶ್ಚಿಕ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)
ವಾರದಾರಂಭಕ್ಕೆ ನಿಮಗಾಗದವರು ಪರಾಭವ ಹೊಂದುವರು. ಪ್ರಯಾಣ ಸಮಯದಲ್ಲಿ ತೊಂದರೆಗೆ ಒಳಗಾಗುವಿರಿ. ವಾರಮಧ್ಯೆ ಮನಸ್ಸಿಗೆ ಮುದ ನೀಡುವ ಪ್ರಸಂಗಗಳು ಘಟಿಸುವುದು. ಕಂಪ್ಯೂಟರ್, ಮೊಬೈಲ್ ವ್ಯಾಪಾರಿಗಳಿಗೆ ಅತಿಶಯವಾದ ಧನಲಾಭವಾಗುವುದು. ಯಂತ್ರಗಳೊಡನೆ ಕೆಲಸ ಮಾಡುವಾಗ ಜಾಗ್ರತರಾಗಿರಿ. ತೆರಿಗೆ ಅಧಿಕಾರಿಗಳಿಂದ ತೊಂದರೆ ಉಂಟಾದೀತು.
-ಶ್ರೀ ಯೋಗಾನೃಸಿಂಹಸ್ವಾಮಿ ಉಪಾಸನೆ, ಶುಭ ಸಂಖ್ಯೆ-2

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)
ಹೊಸ ವ್ಯಾಪಾರ ಪ್ರಾರಂಭಿಸುವ ಯೋಚನೆಯನ್ನು ಕೊಂಚ ಕಾಲ ಮುಂದೂಡಿ. ಕೊಡು-ತರುವ ವ್ಯವಹಾರಗಳನ್ನು ಜಾಣ್ಮೆಯಿಂದ ನಿರ್ವಹಿಸಿ, ನಂಬಿಸಿ ಮೋಸ ಮಾಡುವವರಿದ್ದಾರೆ. ಅರ್ಜಿತ ಹಣ ಬೇಡದ್ದಕ್ಕೆ ವ್ಯಯವಾಗಲಿದೆ. ರಾಜಕೀಯ ರಂಗದವರಿಗೆ ಶತ್ರುಗಳು ಪ್ರಬಲರೆನಿಸುವರು. ಮನೆಯಲ್ಲಿ ಹಿರಿಯರ ಆರೋಗ್ಯದ ಕಡೆ ಗಮನಹರಿಸಿ. ವಾರಾಂತ್ಯಕ್ಕೆ ಕುಟುಂಬ ಸಮೇತ ಧರ್ಮಕ್ಷೇತ್ರ ಸಂದರ್ಶನ ಮನಃಶಾಂತಿ ನೀಡುವುದು.
ಶ್ರೀ ದೇವೀ ಮಹಾತ್ಮೆ ಓದಿ. ಶುಭ ಸಂಖ್ಯೆ-6

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)
ಗುರುಕೃಪೆಯಿಂದ ಉನ್ನತ ವ್ಯಾಸಂಗಕ್ಕೆ ಉಂಟಾಗಿದ್ದ ವಿಘ್ನಗಳು ನಿವಾರಣೆ ಆಗುವುದು. ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುದು. ಆಸ್ತಿ ಖರೀದಿಗೆ ಹಣದ ಅನುಕೂಲ ಒದಗಲಿದೆ. ಸತಿ-ಸುತರಲ್ಲಿ ಉಂಟಾಗಿದ್ದ ಅಸಮಾಧಾನಗಳು ನಿವಾರಣೆಯಾಗಲಿವೆ. ವಾಹನ ವ್ಯವಹಾರಗಳಲ್ಲಿ ಧನಲಾಭ. ಮನೆಗೆ ಎಲೆಕ್ಟ್ರಾನಿಕ್ ವಸ್ತುಗಳ ಖರೀದಿ. ಕೆಲವರಿಗೆ ವೇದಾಂತ ಅಧ್ಯಯನದಲ್ಲಿ ಆಸಕ್ತಿ ಮೂಡುವುದು.
ಶ್ರೀ ಹರಿನಾಮ ಸ್ಮರಣೆ. ಶುಭ ಸಂಖ್ಯೆ-4

ಕಟಕ (ಹೊ,ಹು,ಹೆ,ಡ,ಡಿ,ಡು)
'ಸುಖೇ ದುಃಖೇ ಸಮೇಕೃತ್ವಾ' ಎಂಬ ಗೀತಾವಾಣಿ. ಈ ವಾರ ನಿಮಗೆ ಅನ್ವಯವಾಗಲಿದೆ. ವಾರದಾರಂಭಕ್ಕೆ ಬಂಧು-ಬಾಂಧವರ ಮಿಲನ, ಎಲ್ಲರ ವಿಶ್ವಾಸ ಗಳಿಸುವಿರಿ. ವಾಹನ ವ್ಯವಹಾರಗಳನ್ನು ಕೂಲಂಕುಶವಾಗಿ ನೋಡಿ, ಮಾಡಿ, ವಾಹನ ಚಾಲನೆ ಮಾಡುವಾಗಲೂ ಅಷ್ಟೆ ಆತುರ ಬೇಡ. ವಾರಾಂತ್ಯದ 'ಪಾರ್ಟಿ'ಯಿಂದಾಗಿ ಆಹಾರ-ಪಾನೀಯಗಳಲ್ಲಿ ಸಂಯಮವಿರಲಿ. ಕರುಳು ಬೇನೆಯಿಂದ ತೊಂದರೆಯಾದೀತು.
ಶ್ರೀ ಸುದರ್ಶನ ಮಂತ್ರ ಪಠಿಸಿ. ಶುಭ ಸಂಖ್ಯೆ-1

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)
ವಾರದ ಆದಿಗೆ ಕುಟುಂಬ ಕೆಲಸ ಕಾರ್ಯಗಳು ಕುಂಟುತ್ತಾ ಸಾಗುತ್ತವೆ. ಮನಸ್ಸಿಗೆ ಜಢತ್ವ ಆವರಿಸಿರುತ್ತದೆ. ಪುಸ್ತಕ ವ್ಯಾಪಾರ ಹಾಗೂ ಪ್ರಕಾಶಕರಿಗೆ ಉತ್ತಮ ಧನಲಾಭ. ವಾರ ಮಧ್ಯೆ ವಿವಿಧ ರೀತಿಯಲ್ಲಿ ಧನಾಗಮ, ಇಚ್ಛಿತ ವಸ್ತುಗಳ ಖರೀದಿಯಿಂದ ಶ್ರೀಮತಿಗೆ ಸಂತೋಷ. ಆಸ್ತಿ ಖರೀದಿಯ ದಸ್ತಾವೇಜುಗಳನ್ನು ಸರಿಯಾಗಿ ಪರಿಶೀಲಿಸಿ ಮುಂದುವರೆಯಿರಿ. ಪ್ರಯಾಣ ಸಮಯದಲ್ಲಿ ಸಂಕಷ್ಟಗಳು ಎದುರಾಗಬಹುದು.
ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ-9

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)
ಸಪ್ತಾಹದ ಪ್ರಾರಂಭಕ್ಕೆ ಶುಭ ಕಾರ್ಯಗಳಿಗೆ ಹಣದ ಅನುಕೂಲ ಒದಗುವುದು. ವಿದ್ಯಾ ಪ್ರಸಂಗಗಳಲ್ಲಿ ಪ್ರಗತಿಯ ಸಾಧನೆ, ಸಂಶೋಧನೆಗಳಿಂದ ಪುರಸ್ಕಾರಕ್ಕೆ ಭಾಜನರಾಗುವಿರಿ. ವಿದ್ವಜ್ಜನರ ಸಂಪರ್ಕದಿಂದ ವೈಯಕ್ತಿಕ ಸಮಸ್ಯೆಗೆ ಪರಿಹಾರ ದೊರಕುವುದು. ನೌಕರ ವರ್ಗದವರಿಗೆ ಹಿರಿಯ ಅಧಿಕಾರಿಗಳ ಒತ್ತಾಸೆ, ಬಡ್ತಿ ದೊರೆಯುವ ಸಾಧ್ಯತೆ. ಹಲವರಿಗೆ ಕ್ಯಾಂಪಸ್ ಸೆಲೆಕ್ಷನ್ ಯೋಗ ಉಂಟು.
ಶ್ರೀ ಸತ್ಯನಾರಾಯಣ ಕಥೆ ಓದಿ. ಶುಭ ಸಂಖ್ಯೆ-5

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)
'ಧರ್ಮೋ ರಕ್ಷತಿ ರಕ್ಷಿತಃ' ಎಂಬಂತೆ ಧರ್ಮ ಮಾರ್ಗವನ್ನು ಬಿಡಬೇಡಿ. ಮಿತ್ರರು ಸಂಶಯ ದೃಷ್ಟಿಯಿಂದ ನೋಡಬಹುದು. ಹಾಗೂ ಅಸಮಾಧಾನಕ್ಕೆ ಗುರಿಯಾಗುವ ಸಾಧ್ಯತೆ. ವಾರ ಮಧ್ಯೆ ಆರ್ಥಿಕ ಪರಿಸ್ಥಿತಿ ಸುಧಾರಿಸುವುದು. ನೂತನ ವಸ್ತ್ರಾಭರಣ ಖರೀದಿಸುವಿರಿ. ಶ್ರೀಮತಿಯ ಅನುರಾಗ ದೊರೆಯುವುದು. ಪಂಚಮ ರಾಹುವಿನಿಂದ ಮಕ್ಕಳ ವಿರೋಧದಿಂದ ಕಾರ್ಯಗೇಡು. ಆರೋಗ್ಯಕ್ಕೆ ಧಕ್ಕೆ.
ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-7

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)
ವಾರದ ಆದಿಗೆ ಅರ್ಜಿತ ಹಣ ಬೇಡದ್ದಕ್ಕೆ ವ್ಯಯವಾಗಲಿದೆ. ಹೊಸ ಹೂಡಿಕೆಗಳನ್ನು ಮಾಡಲು ಇದು ಸಕಾಲವಲ್ಲ. ಲೇವಾದೇವಿ ವ್ಯವಹಾರಗಳಲ್ಲಿ ಮೋಸ ಹೋಗುವ ಸಾಧ್ಯತೆ ಇದೆ. ತೆರಿಗೆ ಪಾವತಿ ವಿಷಯದಲ್ಲಿ ಲೋಪವಾಗಿದ್ದರೆ ಅಧಿಕಾರಿಗಳಿಂದ ತೊಂದರೆ ಉಂಟಾದೀತು. ಮನೆಯಲ್ಲಿ ಪರಸ್ಪರ ವಾತ್ಸಲ್ಯದಿಂದ ನಡೆದುಕೊಳ್ಳಿ, ಕೋಪ-ತಾಪಗಳಿಂದ ಸಂಬಂಧಗಳು ವಿಷಮವಾದೀತು. ನಿಮ್ಮ ಆರೋಗ್ಯದ ಬಗ್ಗೆಯೂ ಕಾಳಜಿ ಇರಲಿ.
ಶ್ರೀ ಗಣೇಶ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-3

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)
ಪ್ರಯತ್ನ ಇಲ್ಲದೆ ಪ್ರತಿಫಲ ಸಿಗದು. ಸಿಕ್ಕಿದ್ದನ್ನೇ ಸ್ವೀಕರಿಸುವುದು ಜಾಣತನ. ಹೆಚ್ಚಿನ ವ್ಯಾಸಂಗಕ್ಕೆ ವಿದೇಶಕ್ಕೆ ತೆರಳುವ ಯೋಗವಿದೆ. ಚಂದ್ರ ಗ್ರಹದ ಶುಭ ಫಲದ ಪರಿಣಾಮ ಮಕ್ಕಳ ಏಳಿಗೆಯಿಂದ ಹರ್ಷಿತರಾಗುವಿರಿ. ಅರ್ಧಾಷ್ಟಮ ಶನಿದೇವನ ಹೊರತಾಗಿಯೂ ಶುಭ ಫಲಗಳು ನಿಮ್ಮ ಪಾಲಿಗಿವೆ. ಆದರೆ ಸರ್ಕಾರಿ ನೌಕರರಿಗೆ ಬೇಡದ ಊರಿಗೆ ವರ್ಗಾವಣೆಯಾಗುವ ಸಾಧ್ಯತೆ ಇದೆ. ನರ ಸಂಬಂಧಿ ನ್ಯೂನತೆ ಕಾಡಬಹುದು.
ಶ್ರೀ ರಾಘವೇಂದ್ರ ಪೂಜೆ. ಶುಭ ಸಂಖ್ಯೆ-2

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)
ವಾರದ ಆದಿಗೆ ಧನಪ್ರಾಪ್ತಿ. ಹಳೆಯ ಸ್ನೇಹಿತರ ಹಾಗೂ ಪೂರ್ವದ ಉಪಾಧ್ಯಾಯರ ಸಮಾಗಮದಿಂದ ಮನೋಹರ್ಷ. ಬೆಲೆಬಾಳುವ ವಸ್ತುಗಳ ಖರೀದಿಗೆಂದು ಹಣ ವಿನಿಯೋಗ. ವ್ಯಾಪಾರಿಗಳಿಗೆ ನಿರೀಕ್ಷೆಗೂ ಮೀರಿ ವ್ಯಾಪಾರ ಹಾಗೂ ಧನಲಾಭ. ಸದ್ಯದಲ್ಲೇ ಮನೆಯಲ್ಲಿ ಮಂಗಳವಾದ್ಯ ಮೊಳಗಲಿದೆ. ದುರ್ಮಾರ್ಗಿಗಳ ಸಹವಾಸದಿಂದ ದೂರವಿರಿ. ಅನ್ಯಥಾ ಅದಕ್ಕೆ ತುಂಬಾ ಬೆಲೆ ತೆರಬೇಕಾದೀತು.
ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ-8

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)
ವಾರದ ಪ್ರಾರಂಭಕ್ಕೆ ಕಾಣ ಬರುವ ಚಿತ್ತ ಚಂಚಲತೆ, ಸಂಶಯ ಪ್ರವೃತ್ತಿ ಚಂದ್ರಗ್ರಹ ಕೃಪೆಯಿಂದ ನಿವಾರಣೆ ಆಗುವುದು. ವೃತ್ತಿ ಕ್ಷೇತ್ರದಲ್ಲಿ ಗೌರವಾದರಗಳನ್ನು ಸಂಪಾದಿಸುವಿರಿ. ಮನೆ ಮಂದಿಯಲ್ಲಿ ವಾತ್ಸಲ್ಯ, ಅನುರಾಗಗಳು ವೃದ್ಧಿಸುವುದು. ಅಪಮಾರ್ಗಗಳಿಂದಲೂ ಧನ ಗಳಿಕೆ ಆಗುವುದು. ಸಾಡೇಸಾತಿ ಶನಿದೇವ ಮನೆಯ ಸುಖ ಶಾಂತಿಗಳಿಗೆ ಭಂಗ ತರುವನು. ತಾಳ್ಮೆಯಿಂದ ವರ್ತಿಸಿ.
ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-4


ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)
ಸಾಡೇಸಾತಿಯ ಪ್ರಭಾವ ಇದ್ದಾಗ್ಯೂ ನಿಮ್ಮ ರಾಶ್ಯಾಧಿಪತಿ ಗುರುದೇವ ಹಾಗೂ ಚಂದ್ರದೇವನ ಕೃಪೆಯಿಂದ ಜೀವನದಲ್ಲಿ ಎದುರಾಗುವ ಎಡರು-ತೊಡರುಗಳನ್ನು ಧೈರ್ಯದಿಂದ ನಿಭಾಹಿಸುವಿರಿ. ನಿಮ್ಮ ಮಹತ್ವದ ಯೋಜನೆಗಳನ್ನು ಮರು ಹೊಂದಾಣಿಕೆ ಮಾಡಿಕೊಳ್ಳಲು ಅಡ್ಡಿ ಇಲ್ಲ. ವನಿತಾಮಣಿಯರು ಶೃಂಗಾರ ಸಾಧನಗಳಿಗೆ ಹೆಚ್ಚಿನ ಹಣ ವ್ಯಯಿಸುವರು. ನದಿ, ಜಲಾಶಯಗಳ ಹತ್ತಿರ ಹುಡುಗಾಟ ಸಲ್ಲದು.
ಶ್ರೀ ಗುರು ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-3

ಮಕ್ಕಳ ಚಿತ್ರಕಥೆ
ನನಗಾಗಿ ನೀನೇನು ಕೊಟ್ಟಿರುವೆ...!?


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಕ್ಷತ್ರಿಯ ವಂಶದ ದತ್ತ ಮನೆತನದ ವಕೀಲ ತಂದೆ ವಿಶ್ವನಾಥದತ್ತ ಅವರಿಗೆ 6ನೇ ಮಗುವಾಗಿ ಕೋಲ್ಕತ್ತಾದಲ್ಲಿ 1863ರ ಜನವರಿ 12ರಂದು, ಪವಿತ್ರ ಮಕರ ಸಂಕ್ರಾಂತಿಯ ದಿನ ಸ್ವಾಮಿ ವಿವೇಕಾನಂದರು ಜನಿಸಿದರು.



ಒಮ್ಮೆ ವಿವೇಕಾನಂದರು ತಂದೆಯ ಬಳಿ ಕುಳಿತು, 'ನನಗಾಗಿ ನೀನೇನು ಕೊಟ್ಟಿರುವಿರಿ?' ಎಂದು ಪ್ರಶ್ನಿಸಿದರು.



ಈ ಮಾತು ಕೇಳಿದ ತಂದೆ ವಿಶ್ವನಾಥದತ್ತರು ನಿಲುವು ಕನ್ನಡಿಯನ್ನು ತೋರಿಸಿ ಅದರ ಮುಂದೆ ಹೋಗಿ ನಿಲ್ಲಲು ಸೂಚಿಸಿದರು.



ತಂದೆಯವರ ಸೂಚನೆಯಂತೆ ವಿವೇಕಾನಂದರು ಆ ನಿಲುವು ಕನ್ನಡಿಯ ಮುಂದೆ ನಿಂತಾಗ ಕಂಡಿದ್ದು ತನ್ನದೇ ಆರೋಗ್ಯ ಪೂರ್ಣ ಶರೀರ ಹಾಗೂ ಸ್ಪುರದ್ರೂಪ..!



ತಂದೆಯು ಕೊಟ್ಟಿರುವ ದಿವ್ಯಭಾಗ್ಯ ಇದೇ ಎಂದು ಅರಿಯಲು ವಿವೇಕಾನಂದರಿಗೆ ಹೆಚ್ಚು ಸಮಯ ಬೇಕಾಗಲಿಲ್ಲ.



ಮೌನವಾಗಿಯೇ ತಂದೆಗೆ ತನ್ನ ಅನಂತಾನಂತ ಕೃತಜ್ಞತೆಯನ್ನು ಹೇಳಿದರು.

ತಿ.ನರಸೀಪುರ, ಬನ್ನೂರಲ್ಲಿ ಜೆಡಿಎಸ್ ಬೆಳ್ಳಿ ಮಹೋತ್ಸವ ಆಚರಣೆ

● ರಾಜ್ಯದಲ್ಲಿ ಕನ್ನಡಿಗರ ಧ್ವನಿಯಾಗಿ ನಿಂತಿರುವ ಪಕ್ಷ ಜೆಡಿಎಸ್: ರಾಮಸ್ವಾಮಿ ● ಇತಿಹಾಸದಲ್ಲಿ ಅಪರೂಪದ ಸಾಧನೆ ಮಾಡಿದ ಪ್ರಾದೇಶಿಕ ಪಕ್ಷ ಜೆಡಿಎಸ್: ಚಿನ್ನಸ್ವಾಮಿ



ತಿ.ನರಸೀಪುರದಲ್ಲಿ ಜೆಡಿಎಸ್ ಕಾರ್ಯಕರ್ತರಿಂದ ಬೆಳ್ಳಿ ಮಹೋತ್ಸವದ ಸಂಭ್ರಮಾಚರಣೆ.



ಬನ್ನೂರಿನಲ್ಲಿ ಜೆಡಿಎಸ್ ಬೆಳ್ಳಿ ಹಬ್ಬದ ಸಂಭ್ರಮದಲ್ಲಿ ಮಾತನಾಡುತ್ತಿರುವ ಮುಖಂಡರುಗಳು.

ತಿ.ನರಸೀಪುರ/ಬನ್ನೂರು, ನ.22– ಜಾತ್ಯಾತೀತ ಜನತಾದಳ (ಜೆಡಿಎಸ್) ಸ್ಥಾಪನೆಯಾಗಿ 25 ವರ್ಷ ತುಂಬಿದ ಹಿನ್ನೆಲೆಯಲ್ಲಿ ತಿ.ನರಸೀಪುರ ಮತ್ತು ಬನ್ನೂರಿನಲ್ಲಿ ಪ್ರತ್ಯೇಕ ವಾಗಿ ಅದ್ದೂರಿಯಾಗಿ ಬೆಳ್ಳಿ ಮಹೋತ್ಸ ವವನ್ನು ಆಚರಿಸಲಾಯಿತು.

ಈ ವೇಳೆ ಬನ್ನೂರಿನ ಸಂತೇ ಮಾಳದಲ್ಲಿ ನಡೆದ ಜೆಡಿಎಸ್ ಬೆಳ್ಳಿ ಹಬ್ಬದ ಸಂಭ್ರಮದ ಕಾರ್ಯಕ್ರಮದಲ್ಲಿ ಮಾತನಾಡಿದ ಜೆಡಿಎಸ್ ರಾಜ್ಯ ಕಾರ್ಯದರ್ಶಿ ಬನ್ನೂರು ಬೈಎನ್. ರಾಮಸ್ವಾಮಿ ಜಾತ್ಯಾತೀತ ಜನತಾದಳ ಪಕ್ಷವು ಕರ್ನಾಟಕ ರಾಜ್ಯ ರಾಜಕೀಯದ ಇತಿಹಾಸದಲ್ಲಿ ಕನ್ನಡಿಗರ ಧ್ವನಿಯಾಗಿ, ಕಳೆದ 25 ವರ್ಷಗಳಿಂದ ಈ ನಾಡಿನ ಸರ್ವತೋಮುಖ ಅಭಿವೃದ್ಧಿಗೆ ಕಟಿಬದ್ಧವಾಗಿ ಹೋರಾಟ ಮಾಡುತ್ತಾ ಬಂದಿದೆ ಎಂದರು.

ಮಾಜಿ ಪ್ರಧಾನಿ ಹಾಗೂ ಪಕ್ಷದ ಸ್ಥಾಪಕರಾದ ಹೆಚ್.ಡಿ.ದೇವೇಗೌಡರ ಅವಿರತ ಪರಿಶ್ರಮದಿಂದ ಪ್ರಾದೇಶಿಕ ಪಕ್ಷವೊಂದು 25 ವರ್ಷ ಪೂರೈಸಲು ಕಾರಣೀಭೂತವಾಗಿದೆ ಮಾಜಿ ಮುಖ್ಯಮಂತ್ರಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ನೇತೃತ್ವವು ಪಕ್ಷವನ್ನು ಮತ್ತಷ್ಟು ಬೇರೂರುವಂತೆ ಮಾಡಿದೆ ಜೆಡಿಎಸ್ ಪಕ್ಷವು, ಅನೇಕ ಸವಾಲುಗಳನ್ನು ಎದುರಿಸಿ, ಅನೇಕ ರಾಜಕೀಯ ಕುತಂತ್ರಗಳನ್ನು ಮೆಟ್ಟಿನಿಂತು, ಇವತ್ತು ಬಲಿಷ್ಠ ಪ್ರಾದೇಶಿಕ ಪಕ್ಷವಾಗಿ ಬೆಳೆದಿದೆ. ಇದಕ್ಕೆ ಪೂರಕವಾಗಿ ಅನೇಕ ನಾಯಕರು ಪಕ್ಷ ಕಟ್ಟುವಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ ಎಂದರು.

ಮುಂದೆ ಸ್ಥಳೀಯ ಸಂಸ್ಥೆ ಚುನಾವಣೆಗಳು ಬರಲಿದ್ದು ಕಾರ್ಯಕರ್ತರು ಈಗಿನಿಂದಲೇ ತಮ್ಮ ತಮ್ಮ ವ್ಯಾಪ್ತಿಯಲ್ಲಿ ಪಕ್ಷ ಸಂಘಟನೆಯಲ್ಲಿ ತೊಡಗಿಕೊಳ್ಳುವ ಮೂಲಕ ಜೆಡಿಎಸ್ ಪಕ್ಷದ ವರಿಷ್ಠರಿಗೆ ಗೆಲುವಿನ ಉಡುಗೊರೆ ನೀಡಲು ಶ್ರಮಿಸಬೇಕಿದೆ ಎಂದರು.

ರಜತ ಮಹೋತ್ಸವ ಆಚರಣೆ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಚಿಕನ್ ಪಲಾವ್ ವಿತರಿಸಲಾಯಿತು. ಸ್ಥಳೀಯ ಮುಖಂಡರು ಕೇಕ್ ಕತ್ತರಿಸಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಬನ್ನೂರು ಪುರಸಭಾ ಮಾಜಿ ಅಧ್ಯಕ್ಷ ಎಂ ಕೃಷ್ಣೇಗೌಡ, ಹೋಬಳಿ ಅಧ್ಯಕ್ಷ ಕೆ ಕುಮಾರಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ಬಿ.ಎಲ್. ವೆಂಕಟೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಬಸವನಹಳ್ಳಿ ವೆಂಕಟೇಶ್, ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಮಧು, ರಾಜು, ಸಿದ್ದಪ್ಪ ಹನುಮಂತೇಗೌಡ, ಮಹೇಶ್, ಸುರೇಶ್, ವಿಜಯ್ ಕುಮಾರ್, ಚನ್ನೇಗೌಡ, ಕೊಡಗಳ್ಳಿ ಚಿಕ್ಕಜವರಪ್ಪ ಜಯರಾಮೇಗೌಡ, ಬಿ.ಆರ್.ಮಂಜುನಾಥ್, ದೇವರಾಜು, ಬೀಡನಹಳ್ಳಿ ಶಿವಕುಮಾರ್, ನಾರಾಯಣಸ್ವಾಮಿ, ಕುಂತನಹಳ್ಳಿ ಚೆಲುವರಾಜು ಮಂಜುನಾಥ್, ಮೇಗಳಕೊಪ್ಪಲು ಜಯರಾಮ್, ಬೀಡನಹಳ್ಳಿ ದೇವರಾಜು, ಬಾಣಗೋಡಿ ನಾರಾಯಣಸ್ವಾಮಿ, ದೇವರಾಜ್, ಹೆಗ್ಗೂರು ದೀಪು, ಅತ್ತಹಳ್ಳಿ ರವಿ, ಹನುಮನಾಳು ಮಾದೇಗೌಡ ಇದ್ದರು.

ತಿ.ನರಸೀಪುರದಲ್ಲೂ ಸಂಭ್ರಮ: ತಿ.ನರಸೀಪುರದಲ್ಲೂ ಜೆಡಿಎಸ್ ಬೆಳ್ಳಿ ಹಬ್ಬ ಆಚರಿಸಲಾಯಿತು. ಈ ವೇಳೆ ತಿ.ನರಸೀಪುರ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ ಮಾತನಾಡಿ, ಕನ್ನಡನಾಡಿನ ಧ್ವನಿಯಾಗಿ ನಾಲ್ಕು ದಶಕಗಳಿಂದ ಜನಪರ ಹೋರಾಟ ನಡೆಸುತ್ತಿರುವ ಜೆಡಿಎಸ್ ಪಕ್ಷವು ಪ್ರಾದೇಶಿಕ ಪಕ್ಷಗಳ ಇತಿಹಾಸದಲ್ಲಿ ಅಪರೂಪದ ಸಾಧನೆ ಮಾಡಿದೆ ಎಂದರು.

ಜೆಡಿಎಸ್ ಪಕ್ಷದ ರಜತ ಮಹೋತ್ಸವ ಸಂಭ್ರಮದ ಹಿನ್ನೆಲೆಯಲ್ಲಿ ಪಟ್ಟಣದ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ನೂರಾರು ಕಾರ್ಯಕರ್ತರೊಂದಿಗೆ ಪಕ್ಷದ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ಪಕ್ಷದ ಪ್ರಧಾನ ಕಾರ್ಯದರ್ಶಿ ಹೆಮ್ಮಿಗೆ ಹೊನ್ನನಾಯಕ ಮಾತನಾಡಿದರು. ಇದಕ್ಕೂ ಮೊದಲು ಪಕ್ಷ 25 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಜೆಡಿಎಸ್ ಕಚೇರಿ ಮುಂದೆ ಕಾರ್ಯಕರ್ತರು, ಪಕ್ಷದ ಅಭಿಮಾನಿಗಳ ಸಮಕ್ಷಮದಲ್ಲಿ ಕೇಕ್ ಕತ್ತರಿಸಿ ಸಂಭ್ರಮಿಸಲಾಯಿತು. ಇದೇ ವೇಳೆ ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ಹಣ್ಣು ಬ್ರೆಡ್ ವಿತರಣೆ ಮಾಡುವ ಮೂಲಕ ಪಕ್ಷದ ಬೆಳ್ಳಿ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಜಿ.ಪಂ. ಮಾಜಿ ಸದಸ್ಯ ಜಯಪಾಲ್ ಭರಣಿ, ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಎನ್.ಲಿಂಗಪ್ಪಾಜಿ, ದೊಡ್ಡೇಬಾಗಿಲು ಪಿಎಸಿಎಸ್ ಅಧ್ಯಕ್ಷ ಕೃಷ್ಣಾಪುರ ಮರಿಸ್ವಾಮಿ, ಯುವ ಮುಖಂಡ ಮಾವಿನಹಳ್ಳಿ ರಾಜೇಶ್, ಗ್ರಾಪಂ ಮಾಜಿ ಅಧ್ಯಕ್ಷ ಎಂ.ರಮೇಶ್, ಸೋಸಲೆ ರಾಜಣ್ಣ, ಬಡ್ಡು ಶಿವಕುಮಾರ್, ಜಿಲ್ಲಾ ಜನಜಾಗೃತಿ ವೇದಿಕೆಯ ಜಿಲ್ಲಾಧ್ಯಕ್ಷ ಕೆ.ಎನ್. ಪ್ರಭುಸ್ವಾಮಿ, ಕನ್ನಹಳ್ಳಿ ಮಹದೇವ್, ಜಯರಾಮು, ಮೂಗೂರು ಎಂ.ಆರ್ ಶಿವಮೂರ್ತಿ, ಎಂ.ಕೆ.ಸಿದ್ದರಾಜು, ರಾಜಶೇಖರ್, ಕುಕ್ಕೂರು ಉಮಾಪತಿ, ಕನ್ನಹಳ್ಳಿ ಚಿನ್ನಸ್ವಾಮಿ, ಡಿ. ಮಹದೇವ, ಕೆಬ್ಬೇಹುಂಡಿ ಮಹದೇವಸ್ವಾಮಿ, ಜನ ಕಲ್ಯಾಣ ಟ್ರಸ್ಟ್ ಮಾಜಿ ಅಧ್ಯಕ್ಷ, ಕೃಷ್ಣಾಪುರ ರಾಮ ಶೆಟ್ಟಿ ಮೂಗೂರು ರೇವಣ್ಣ, ಹಿರಿಯೂರು ಸೋಮಣ್ಣ ಸೋಮನಾಥಪುರ ಗಣೇಶ್, ತಲಕಾಡು ನಾಗರಾಜ ಮೂರ್ತಿ ಸೇರಿದಂತೆ ಇತರರು ಹಾಜರಿದ್ದರು.

ಹುಣಸೂರಿನ ಏಕತಾ ಯಾತ್ರೆಯಲ್ಲಿ ಸಾವಿರಾರು ವಿದ್ಯಾರ್ಥಿಗಳು ಭಾಗಿ



ಹುಣಸೂರು, ನ.22– ಸರ್ದಾರ್ ವಲ್ಲಭ ಭಾಯಿ ಪಟೇಲರ 150ನೇ ಜನ್ಮ ದಿನಾಚರಣೆ ಅಂಗವಾಗಿ ಹುಣಸೂರಲ್ಲಿ ನಡೆದ ಏಕತಾಯಾತ್ರೆಯಲ್ಲಿ ನಗರದ ವಿವಿಧ ಕಾಲೇಜುಗಳ ಸಾವಿರಾರು ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ ಏಕತೆ ಸಾರಿದರು.

ಮೈ ಭಾರತ್ ಕೇಂದ್ರ, ಮೈಸೂರು ವಿವಿ ಹಾಗೂ ಹುಣಸೂರು ಮಹಿಳಾ ಕಾಲೇಜಿನ ಸಹಯೋಗದಲ್ಲಿ ನಡೆದ ಏಕತಾಯಾತ್ರೆಗೆ ನಗರದ ಮುನೇಶ್ವರಕಾವಲ್ ಮೈದಾನದಲ್ಲಿ ಸಂಸದ ಯಧುವೀರ್ ಒಡೆಯರ್ ಚಾಲನೆ ನೀಡಿದರು.

ವಿದ್ಯಾರ್ಥಿಗಳು ಕೈಯಲ್ಲಿ ತ್ರಿವರ್ಣಧ್ವಜ ಹಿಡಿದು ಭಾರತ್ ಮಾತಾಕಿ ಜೈ, ಸರ್ದಾರ್ ವಲ್ಲಭಭಾಯ್ ಕೀ ಜೈ, ವಂದೇ ಮಾತರಂ ಘೋಷಣೆ ಮೊಳಗಿಸುತ್ತಾ ಮೆರವಣಿಗೆ ಮೂಲಕ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಮಹಿಳಾ ಕಾಲೇಜು ಆವರಣಕ್ಕೆ ಆಗಮಿಸಿದರು.

ದೇಶ ಒಗ್ಗೂಡಿಸಿದ ಸರದಾರ: ಕಾಲೇಜು ಆವರಣದಲ್ಲಿ ನಡೆದ ಸಮಾರಂಭದಲ್ಲಿ ಸಂಸದ ಯಧುವೀರ್ ಮಾತನಾಡಿ, ಸರ್ದಾರ್ ವಲ್ಲಭಭಾಯಿ ಪಟೇಲರು ಖ್ಯಾತ ವಕೀಲರಾಗಿದ್ದು, ಸ್ವಾತಂತ್ರ್ಯ ಪೂರ್ವದಲ್ಲಿ ಮಹಾತ್ಮ ಗಾಂಧಿಜಿಯವರ ಸ್ವರಾಜ್ಯ ಹೋರಾಟಕ್ಕೆ ಕೈಜೋಡಿಸಿದ್ದಲ್ಲದೆ ಕಾಂಗ್ರೆಸ್‌ನ ಅಧ್ಯಕ್ಷರಾಗಿ ಬ್ರಿಟಿಷರ ವಿರುದ್ಧ ನಡೆದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರು. ಸ್ವಾತಂತ್ರ್ಯ ನಂತರ ರಾಜರ ಆಳ್ವಿಕೆಯ ಪ್ರಾಂತ್ಯಗಳನ್ನು ಒಗ್ಗೂಡಿಸಲು ಶ್ರಮಿಸಿದ್ದರು. ಪಾಕಿಸ್ತಾನ ಸೇರುತ್ತೇವೆಂದು ಪಟ್ಟುಹಿಡಿದಿದ್ದ ಹೈದರಾಬಾದ್ ನಿಜಾಮ, ನವಾಬರನ್ನು ಸೈನ್ಯದ ಮೂಲಕ ಮಣಿಸಿ, ಅಖಂಡ ಭಾರತ ನಿರ್ಮಿಸುವಲ್ಲಿ ಮಹತ್ತರ ಪಾತ್ರವಹಿಸಿದ್ದರು ಎಂದರು.

ಪಟೇಲರಿಗೆ ರಾಜರ ವಿಮಾನ ಕೊಡುಗೆ: ಅಂದಿನ ಮೈಸೂರು ಪ್ರಾಂತ್ಯದ ಜಯಚಾಮರಾಜ ಒಡೆಯರ್ ಅವರು ಅಖಂಡ ಭಾರತ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದ ಪಟೇಲರಿಗೆ ತಮ್ಮ ವಿಮಾನವನ್ನು ಕೊಡುಗೆಯಾಗಿ ನೀಡಿದ್ದರೆಂದು ಮಹಾರಾಜರ ಕೊಡುಗೆಯನ್ನು ಸ್ಮರಿಸಿದರು.

ಪ್ರತಿಮೆಗೆ ಎಡ ಪಂಥೀಯರ ವಿರೋಧ: ಮೂಲತಃ ಗುಜರಾತಿನವರಾದ ಪಟೇಲರ ಸಾಧನೆಯನ್ನು ಸ್ಮರಣೀಯವಾಗಿಸಲು ಪ್ರಧಾನಿ ಮೋದಿಯವರು ನರ್ಮದಾ ನದಿದಂಡೆ ಮೇಲೆ ಪಟೇಲರ ಪ್ರತಿಮೆಯನ್ನು ನಿರ್ಮಿಸಲು ಹೊರಟಾಗ ಎಡಪಂಥೀಯರು ವಿರೋಧಿಸಿದ್ದರು. ವಿರೋಧದ ನಡುವೆಯೂ 182 ಅಡಿ ಎತ್ತರದ ಪ್ರತಿಮೆ ನಿರ್ಮಿಸಿತ್ತು. ಇಂದು ಅದು ಪ್ರವಾಸೋದ್ಯಮ ತಾಣವಾಗಿ ಅಭಿವೃದ್ಧಿಗೊಂಡಿದೆ. 650ಕಿ.ಮೀ. ಅರಣ್ಯ ಪ್ರದೇಶ ಹೆಚ್ಚಳವಾಗಿದೆ. ಅಲ್ಲಿನ ಬುಡಕಟ್ಟು ಮಹಿಳೆಯರಿಗೆ ಬದುಕು ಕಟ್ಟಿಕೊಟ್ಟಿದ್ದಾರೆ. ಇಂತ ದೇಶಪ್ರೇಮಿಯ ಬಗ್ಗೆ ಕಾಲೇಜು ವಿದ್ಯಾರ್ಥಿಗಳು ತಿಳಿಯಬೇಕೆಂದರು.

ಮೈಸೂರು ವಿ.ವಿ.ಯ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಪ್ರೊ.ಎಂ.ಬಿ.ಸುರೇಶ್ ಏಕತೆಯ ಪ್ರಮಾಣ ವಚನ ಬೋಧಿಸಿದರು. ಮಹಿಳಾ ಕಾಲೇಜು ಪ್ರಾಚಾರ್ಯ ಪ್ರೊ.ರವಿ, ಎನ್.ಎಸ್.ಎಸ್. ಸಂಚಾಲಕ ಡಾ.ಪ್ರಸನ್ನ ಮಾತನಾಡಿದರು.

ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆ ಅಧ್ಯಕ್ಷ ಕಲ್ಕುಣಿಕೆ ರಘು, ತಾ.ಪಂ. ಇ.ಓ. ಹೊಂಗಯ್ಯ, ನಗರಸಭೆ ಮಾಜಿ ಅಧ್ಯಕ್ಷ ಗಣೇಶ್‌ಕುಮಾರಸ್ವಾಮಿ, ಜಿಲ್ಲಾ ಬಿಜೆಪಿ ಅಧ್ಯಕ್ಷ ಸುಬ್ಬಣ್ಣ, ತಾಲೂಕು ಅಧ್ಯಕ್ಷ ಕಾಂತರಾಜ್, ನಗರಾಧ್ಯಕ್ಷ ನಾರಾಯಣ್, ಮುಖಂಡರಾದ ರಮೇಶ್‌ಕುಮಾರ್, ನಾಗರಾಜ ಮಲ್ಲಾಡಿ, ಬಿಳಿಕೆರೆಪ್ರಸನ್ನ, ಸೋಮಶೇಖರ್, ಹನಗೋಡು ಮಂಜುನಾಥ್, ಪ್ರಫುಲ್ಲ ಮಲ್ಲಾಡಿ, ವೆಂಕಟಮ್ಮ, ನಾಗಣ್ಣ, ಅರುಣ್ ಚೌಹ್ವಾಣ್ ಸೇರಿದಂತೆ ಅನೇಕರಿದ್ದರು.

ಚಿನ್ನದ ಪದಕ ಪಡೆದ ವಿದ್ಯಾರ್ಥಿನಿಗೆ ಸನ್ಮಾನ



ಹೆಚ್.ಡಿ.ಕೋಟೆ: ಆದಿಚುಂಚನಗಿರಿ ಕಾಲೇಜು ವಿದ್ಯಾರ್ಥಿನಿ ವರ್ಣಿಕಗೆ ಮೈಸೂರು ವಿವಿಯ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ 4 ಚಿನ್ನದ ಪದಕ, ಆರು ನಗದು ಬಹುಮಾನ ಪಡೆದುಕೊಂಡಿದ್ದು, ಪಟ್ಟಣದ ಶ್ರೀ ಆದಿಚುಂಚನಗಿರಿ ಕಾಲೇಜಿನ ವತಿಯಿಂದ ಅಭಿನಂದಿಸಲಾಯಿತು.

ಪಟ್ಟಣದ ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿಎ ಪದವಿಯನ್ನು ವ್ಯಾಸಂಗ ಮಾಡಿದ್ದ ಕೆ.ಬೆಳತೂರು ಗ್ರಾಮದ ಸಿದ್ದನಾಯಕ ಅವರ ಪುತ್ರಿ ಬಿ.ಎಸ್.ವರ್ಣಿಕ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅರ್ಥಶಾಸ್ತ್ರ ವಿಷಯದಲ್ಲಿ 1400 ಅಂಕಗಳಿಗೆ 1339 ಅಂಕಗಳನ್ನು ಪಡೆದು 4 ಚಿನ್ನದ ಪದಕ ಹಾಗೂ 6 ನಗದು ಬಹುಮಾನಗಳನ್ನು ಪಡೆದಿದ್ದಾರೆ.

ಹಲವಾರು ನಗದು ಬಹುಮಾನ ಮತ್ತು ಚಿನ್ನದ ಪದಕವನ್ನು ತನ್ನದಾಗಿಸಿಕೊಂಡಿವ ವಿದ್ಯಾರ್ಥಿನಿಯ ಸಾಧನೆಯನ್ನು ಮೆಚ್ಚಿ, ಮೈಸೂರಿನ ಆದಿಚುಂಚನಗಿರಿ ಶಾಖಾ ಮಠದಲ್ಲಿ ಶ್ರೀ ಶ್ರೀ ಸೋಮೇಶ್ವರ ನಾಥಸ್ವಾಮೀಜಿರವರು ಅಭಿನಂದಿಸಿದ್ದಾರೆ.

ಇದೇ ಸಂದರ್ಭದಲ್ಲಿ ಆಡಳಿತ ಅಧಿಕಾರಿ ಪ್ರೊ.ಕೆ.ಪಿ.ಬಸವೇಗೌಡರು, ಪ್ರಾಂಶುಪಾಲರಾದ ಡಾ. ಜೆ.ಎನ್.ವೆಂಕಟೇಶ್, ಉಪನ್ಯಾಸಕರಾದ ಅವೀನ, ರವೀಶ್, ರಾಜೇಶ್ ಮತ್ತು ಸಿಬ್ಬಂದಿ ವರ್ಗದವರು ಇದ್ದರು.

ತಿ.ನರಸೀಪುರದಲ್ಲಿ ಕಣ್ಮರೆಯಾದ ಸಾರ್ವಜನಿಕ ರಸ್ತೆ

ರಸ್ತೆಯನ್ನು ಅತಿಕ್ರಮಿಸಿಕೊಂಡು ಅಕ್ರಮವಾಗಿ ಕಟ್ಟಡ, ಕಾಂಪೌಂಡ್ ನಿರ್ಮಾಣ



ತಿ.ನರಸೀಪುರ, ನ.22– ಸಾರ್ವಜನಿಕ ರಸ್ತೆ ಒತ್ತುವರಿ ಮಾಡಿ ಮನೆ, ಕಟ್ಟಡ ಕಟ್ಟುತ್ತಿರುವುದರಿಂದ ಸಾರ್ವಜನಿಕರಿಗೆ ತೀವ್ರ ತೊಂದರೆ ಎದುರಾಗಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಟಿ.ನರಸೀಪುರ–ಕೊಳ್ಳೇಗಾಲ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತಿರುವ ಶ್ರೀ ರಾಘವೇಂದ್ರ ಸ್ವಾಮಿ ದೇವಸ್ಥಾನ ಹಾಗೂ ಯಮಹಾ ಬೈಕ್ ಷೋರೂಂ (ಷೋರೂಂ ಈಗ ಮುಚ್ಚಿದೆ) ನಡುವೆ ಸಾರ್ವಜನಿಕ ಓಡಾಟಕ್ಕೆ ಬಿಡಲಾಗಿದ್ದ ಸುಮಾರು 8 ರಿಂದ 10 ಅಡಿ ರಸ್ತೆಯನ್ನು ಅಲ್ಲಿನ ನಿವಾಸಿಗಳು ಆಕ್ರಮಿಸಿಕೊಂಡು ಅಕ್ರಮವಾಗಿ ಕಟ್ಟಡ, ಕಾಂಪೌಂಡ್ ಕಟ್ಟುತ್ತಿರುವುದರಿಂದ ಸಾರ್ವಜನಿಕ ರಸ್ತೆಯೇ ಕಣ್ಮರೆಯಾಗಿದೆ.

ಈ ಮೊದಲು ರಾಷ್ಟ್ರೀಯ ಹೆದ್ದಾರಿಯಿಂದ ರಾಘವೇಂದ್ರ ಸ್ವಾಮಿ ದೇವಸ್ಥಾನದ ಪಕ್ಕದಲ್ಲಿದ್ದ 8 ರಿಂದ 10 ಅಡಿ ಜಾಗವನ್ನು ಸಾರ್ವಜನಿಕ ಓಡಾಟಕ್ಕಾಗಿ ಉಪಯೋಗಿಸಲಾಗುತ್ತಿತ್ತು. ರಸ್ತೆಯು ದೇವಸ್ಥಾನದ ಮಗ್ಗಲಿನಿಂದ ನೇರವಾಗಿ ಹೋಗಿ ಎಡಕ್ಕೆ ತಿರುಗಿ ಮತ್ತೆ ಬಲಕ್ಕೆ ತಿರುವು ಪಡೆದುಕೊಂಡು ತಲಕಾಡು ಮುಖ್ಯ ರಸ್ತೆಗೆ ಸೇರುತ್ತಿತ್ತು. ಆದರೀಗ ಅಲ್ಲಿನ ನಿವಾಸಿಗಳು ಮನೆ, ಕಟ್ಟಡ, ಕಾಂಪೌಂಡ್ ಕಟ್ಟಿಕೊಂಡಿರುವುದರಿಂದ ಅಲ್ಲಿ ರಸ್ತೆ ಇತ್ತೆಂಬುದೇ ಗೊತ್ತಾಗದಂತಾಗಿದೆ. ರಸ್ತೆ ಕಿರಿದಾಗಿದ್ದರೂ ಸಾರ್ವಜನಿಕರು ಓಡಾಟಕ್ಕೆ ಬಳಕೆಯಾಗುತ್ತಿತ್ತು. ಆದರೆ ಅಕ್ರಮವಾಗಿ ಕಟ್ಟಡಗಳನ್ನು ಒಬ್ಬರನ್ನು ಒಬ್ಬರು ನೋಡಿ ಕಟ್ಟುತ್ತಿರುವುದರಿಂದ ರಸ್ತೆ ಮುಚ್ಚಿಹೋಗಿದ್ದು ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

ಈ ರಸ್ತೆಯ ಆಸುಪಾಸಿನಲ್ಲಿ ಮನೆಗಳನ್ನು ಕಟ್ಟಲಾಗಿದ್ದು, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮನೆಗಳು ನಿರ್ಮಾಣವಾಗುತ್ತಿವೆ, ಆದರೆ ಅಲ್ಲಿ ಒಳ ಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ಪ್ರತಿ ಮನೆಯವರು ಶೌಚಕ್ಕಾಗಿ ಗುಂಡಿ ತೆಗೆದುಕೊಂಡಿರುವದರಿಂದ ಅದರ ವಿಲೇವಾರಿಗೆ ಕೂಡ ಕಷ್ಟವಾಗಬಹುದಾಗಿದೆ. ಕನಿಷ್ಠ ಪಕ್ಷ ವಿಲೇವಾರಿ ವಾಹನ ಹೋಗಲು ಸಾಧ್ಯ ವಿಲ್ಲದಷ್ಟೂ ಜಾಗ ಅತಿ ಕ್ರಮಣವಾದ್ದರಿಂದ ಮುಂದಿನ ದಿನಗಳಲ್ಲಿ ಅಲ್ಲಿನ ನಿವಾಸಿಗಳೇ ತೀವ್ರ ತೊಂದರೆ ಎದುರಿಸಬೇಕಾಗಿಬರಬಹುದು. ಹಾಗಾಗಿ ಸಂಬಂಧಪಟ್ಟ ಇಲಾಖೆ ಹಾಗೂ ಪುರಸಭೆಯವರು ಮಧ್ಯೆ ಪ್ರವೇಶಿಸಿ ಸಾರ್ವಜನಿಕ ರಸ್ತೆಗಾಗಿ ಬಿಡಲಾಗಿದ್ದ ಜಾಗದಲ್ಲಿ ಅತಿಕ್ರಮವಾಗಿ ಮನೆ, ಕಾಂಪೌಂಡ್ ಕಟ್ಟಿರುವುದನ್ನು ತೆರವುಗೊಳಿಸಿ ಸಾರ್ವಜನಿಕರು ಹಾಗು ಭಕ್ತಾದಿಗಳಿಗೆ ಅನುಕೂಲ ಕಲ್ಪಿಸಿಕೊಡಬೇಕೆಂಬುದು ಸಾರ್ವಜನಿಕರ ಒತ್ತಾಯವಾಗಿದೆ.

ನಾಳೆ ಜಿಎಸ್‌ಎಸ್ ವಿದ್ಯಾರ್ಥಿ ರನ್

ಮೈಸೂರು: ಮೈಸೂರಿನ ಬೋಗಾದಿ ರೈಲ್ವೆ ಬಡಾವಣೆಯ ಹರಿ ವಿದ್ಯಾಲಯದಲ್ಲಿ ನ.23 ರಂದು 4ನೇ ಆವೃತ್ತಿಯ ಜಿಎಸ್‌ಎಸ್ ವಿದ್ಯಾರ್ಥಿ ರನ್ 2025 ನಡೆಯಲಿದ್ದು, 1ಕಿಲೋ ಮೀಟರ್, 3 ಕಿಲೋ ಮೀಟರ್ ಮತ್ತು 5 ಕಿಲೋ ಮೀಟರ್ ಓಟದ ಸ್ಪರ್ಧೆಗಳನ್ನು ಒಳಗೊಂಡಿದೆ.

ವಿಜೇತ ಸ್ಪರ್ದಿಗಳಿಗೆ ನಗದು ಬಹುಮಾನವನ್ನು ನೀಡಿ ಗೌರವಿಸಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 8095444056, 7406652773 ಸಂಪರ್ಕಿಸಬಹುದು.

ಮುಂದಿನ ಬಾರಿ ಜೆಡಿಎಸ್ ಸ್ವತಂತ್ರವಾಗಿ ಅಧಿಕಾರಕ್ಕೆ

ನಂಜನಗೂಡಿನಲ್ಲಿ ಜೆಡಿಎಸ್ ಬೆಳ್ಳಿಹಬ್ಬ ಆಚರಣೆ

ನಂಜನಗೂಡು: ಪ್ರಾದೇಶಿಕ ಪಕ್ಷವಾದ ಜೆಡಿಎಸ್ ಪಕ್ಷ ರೈತರ, ಕಾರ್ಮಿಕರ, ದಲಿತರ ಪರವಾಗಿ ಧ್ವನಿಯಾಗುವ ಮೂಲಕ ರಾಜ್ಯದಲ್ಲಿ ಸದೃಢ ಪಕ್ಷವಾಗಿ ಹೊರಹೊಮ್ಮಿದ್ದು, ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಜೆಡಿಎಸ್ ಪಕ್ಷ ಸ್ವತಂತ್ರವಾಗಿ ಅಧಿಕಾರ ಹಿಡಿಯಲಿದೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಎನ್.ನರಸಿಂಹಸ್ವಾಮಿ ಭವಿಷ್ಯ ನುಡಿದರು.

ಜೆಡಿಎಸ್ ಪಕ್ಷ ಸ್ಥಾಪನೆಯಾಗಿ 25 ವರ್ಷ ತುಂಬಿದ ಹಿನ್ನೆಲೆಯಲ್ಲಿ ನಂಜನಗೂಡಿನಲ್ಲಿ ಜೆಡಿಎಸ್ ಕಾರ್ಯಕರ್ತರು ಬೆಳ್ಳಿ ಹಬ್ಬದ ಸಂಭ್ರಮಾಚರಣೆ ನಡೆಸಿ, ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು–ಬ್ರೆಡ್ ವಿತರಿಸಿ ಮಾತನಾಡಿದರು.

ಈರೇಗೌಡನಹುಂಡಿ ಸತೀಶ್ ಮಾತನಾಡಿದರು. ಇದೇ ಸಂದರ್ಭದಲ್ಲಿ ಜೆಡಿಎಸ್ ತಾಲೂಕು ಅಧ್ಯಕ್ಷ, ಆರ್.ವಿ. ಮಹದೇವಸ್ವಾಮಿ, ಈರೇಗೌನಹುಂಡಿ ಸತೀಶ್, ದೀಪಕ್, ರಜತ್‌ಗೌಡ, ಶಿವಕುಮಾರ್, ರಾಜಶೇಖರ್ ಮೂರ್ತಿ, ಆನಂದ್, ಶಾಮ್, ಸುರೇಶ್ ಬಾಬು, ನಂಜಪ್ಪ, ಪ್ರಕಾಶ್, ಜಗದೀಶ್, ಅಭಿ, ನಗರಸಭಾ ಸದಸ್ಯ ಖಾಲಿದ್ ಅಹಮದ್ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ವಿಜೃಂಭಣೆಯ ದಂಡಿನಮಾರಮ್ಮನ ಜಾತ್ರಾ ಮಹೋತ್ಸವ

ಜೆಡಿಎಸ್ ಮುಖಂಡ ಕೃಷ್ಣನಾಯಕ ಭಾಗಿ, ಗ್ರಾಮಸ್ಥರಿಂದ ಬೆಂಬಲದ ಘೋಷಣೆ



ಜೆಡಿಎಸ್ ನಾಯಕ ಕೃಷ್ಣನಾಯಕರನ್ನು ಅಭಿನಂದಿಸಿದ ಗ್ರಾಮಸ್ಥರು.

ಸರಗೂರು: ತಾಲೂಕಿನ ನೆಮ್ಮನಹಳ್ಳಿ ಗ್ರಾಮದಲ್ಲಿ ಶ್ರೀ ದಂಡಿನಮಾರಮ್ಮನ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ರವರಿಗೆ ಹೂವಮಾಲೆ ಹಾಕಿ ಪಟಾಕಿ ಸಿಡಿಸಿ ಜೈಕಾರ ಹಾಕಿ ಮೆರವಣಿಗೆ ಮೂಲಕ ಶ್ರೀ ದಂಡಿನಮಾರಮ್ಮನವರ ದೇವಸ್ಥಾನಕ್ಕೆ ಕರೆತರಲಾಯಿತು,

ಕೆ.ಎಂ.ಕೃಷ್ಣನಾಯಕ ದೇವರ ದರ್ಶನ ಪಡೆದರು. ನಂತರ ಮಾತನಾಡಿದ ಅವರು, ಭಕ್ತರ ಇಷ್ಟಾರ್ಥ ಸಿದ್ಧಿಗೆ ಶ್ರಮಿಸುವ ದಂಡಿ ಮಾರಮ್ಮನ ದರ್ಶನ ಪಡೆದುದು ಸಂತಸವಾಗಿದೆ. ತಾಲೂಕಿನಲ್ಲಿ ಉತ್ತಮ ಮಳೆಯಾಗಿ, ಬೆಳೆಯಾಗಲಿ, ತಾಲೂಕು ಆರ್ಥಿಕವಾಗಿ ಅಭಿವೃದ್ಧಿ ಹೊಂದಲಿ ನಿಮ್ಮಗಳ ಸೇವೆ ಮಾಡಲು ನಮಗೂ ತಾಯಿ ಹೆಚ್ಚು ಶಕ್ತಿ ನೀಡಲಿ ಎಂದು ದೇವರಲ್ಲಿ ಪ್ರಾರ್ಥಿಸಿದರು.

ನೆಮ್ಮನಹಳ್ಳಿ ಗ್ರಾಮದ ಯಜಮಾನರಾದ ಮಹದೇವನಾಯಕ, ಮಲ್ಲೇಶ್‌ನಾಯಕ, ಯೋಗೇಶ್ ನಾಯಕ, ಹಾಗೂ ಗ್ರಾಮಸ್ಥರು ಮಾತನಾಡಿ ಕರೋನಾ ಕಸ್ಟಕಾಲದಲ್ಲಿ ಜನರಿಗೆ ಅಹಾರ ಕಿಟ್ ನೀಡಿ ಜನಪರ ನಾಯಕರಾಗಿದ್ದಾರೆ. ಕೆ.ಕೃಷ್ಣನಾಯಕರ ಜೆಡಿಎಸ್ ಪಕ್ಷಕ್ಕೆ ನಾವು ಬೆಂಬಲ ನೀಡುವುದಾಗಿ ದೇವಸ್ಥಾನದ ಮುಂದೆ ಗ್ರಾಮಸ್ಥರು ತಿಳಿಸಿದರು.

ಸರಗೂರು ಜೆಡಿಎಸ್ ತಾಲೂಕು ಅಧ್ಯಕ್ಷ ಗೋಪಾಲಸ್ವಾಮಿ, ಕೋಟೆ ಜೆಡಿಎಸ್ ತಾಲೂಕು ಅಧ್ಯಕ್ಷ ರಾಜೇಂದ್ರ, ಮುಖಂಡರಾದ ಹೆಚ್.ಹನು, ನರಸಿಂಹೇಗೌಡ, ಮಳಲಿ ಶಾಂತಕುಮಾರ್, ಹಿರೇಹಳ್ಳಿ ರಮೇಶ್, ಬಿ.ಮಟಕೆರೆ ಉದಯ್ ಕುಮಾರ್, ತಿಮ್ಮನಾಯಕ, ಸಾಗರೆ ಶಂಕರ್, ಹೆಗ್ಗನೂರು ಸುದೀರ್, ರವಿಗೌಡ, ಚಿಕ್ಕತಿಮ್ಮನಾಯಕ, ಪುಟ್ಟಹನುಮಯ್ಯ ಶ್ರೀನಿವಾಸ್, ಮಹೇಂದ್ರ, ಚಂದ್ರು, ಬಸವಣ್ಣ, ರಾಮರಾಜ, ಅಭಿಮಾನಿ ಬಳಗದ ಅಧ್ಯಕ್ಷ ವಕೀಲ ಪ್ರಶಾಂತ್‌ಗೌಡ, ಲೇಖನ, ವಿಜಯ್, ಚಾಮನಾಯಕ, ಚೆನ್ನನಾಯಕ ಹಾಗೂ ಜೆಡಿಎಸ್ ಪಕ್ಷದ ಮುಖಂಡರು, ನೆಮ್ಮನಹಳ್ಳಿ ಗ್ರಾಮಸ್ಥರು, ಬಾಗಿಯಾಗಿದ್ದರು.

ಸುತ್ತೂರು ಶಾಲೆಯಲ್ಲಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ



ನಂಜನಗೂಡು ತಾಲೂಕು ಸುತ್ತೂರಿನ ಸರ್ಕಾರಿ ಶಾಲೆಯಲ್ಲಿ ಕ್ಲಸ್ಟರ್ ಹಂತದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಸುತ್ತೂರು ಗ್ರಾಮ ಪಂಚಾಯತಿ ಅಧ್ಯಕ್ಷ ರಂಗಸ್ವಾಮಿ ಉದ್ಘಾಟಿಸಿದರು. ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಪ್ರತಿಭಾ ಪರಮೇಶ್ ಬಹುಮಾನ ವಿತರಿಸಿದರು. ಶಾಲೆಯ ಮುಖ್ಯ ಶಿಕ್ಷಕ ನಾಗರಾಜ್ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಸಿಆರ್‌ಪಿ ಉಮೆ ಅಸ್ಮ, ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ರವಿ, ಉಪಾಧ್ಯಕ್ಷರು, ಸುತ್ತೂರು ಕ್ಲಸ್ಟರ್ ಮಟ್ಟದ 13 ಗ್ರಾಮಗಳ ಶಾಲೆಯ ವಿದ್ಯಾರ್ಥಿಗಳು ಶಿಕ್ಷಕರು ಭಾಗವಹಿಸಿದ್ದರು.

ನಂಜನಗೂಡಲ್ಲಿ ಎರಡು ಗುಂಪುಗಳ ನಡುವೆ ಬೀದಿ ಕಾಳಗ

● ರೌಡಿ ಶೀಟರ್‌ಗೆ ತೀವ್ರ ಗಾಯ, ಆಸ್ಪತ್ರೆಗೆ ದಾಖಲು ● ಹಳೆ ಚುನಾವಣಾ ದ್ವೇಷದ ಹಿನ್ನೆಲೆಯಲ್ಲಿ ಘಟನೆ



ಧನರಾಜ್ ಬೂಲಾ

ನಂಜನಗೂಡು: ನಂಜನಗೂಡಿನಲ್ಲಿ ಮತ್ತೆ ಲಾಂಗು, ಮಚ್ಚು ಸದ್ದು ಮಾಡಿದ್ದು, ನಗರದ ಶಂಕರಪುರ ಬಡಾವಣೆಯ ಎರಡು ಗುಂಪುಗಳ ನಡುವೆ ನಡೆದ ಘರ್ಷಣೆಯಲ್ಲಿ ರೌಡಿ ಶೀಟರ್ ಒಬ್ಬನ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಲಾಗಿದೆ.

ನಗರದ ಶಂಕರಪುರ ಹೊಸ ಬಡಾವಣೆಯ ನಿವಾಸಿ ರೌಡಿ ಶೀಟರ್ ಧನರಾಜ್ ಬೂಲಾ (34) ಎಂಬಾತನೇ ಹಲ್ಲೆಯಿಂದ ತೀವ್ರವಾಗಿ ಗಾಯಗೊಂಡವನಾಗಿದ್ದು, ಆತನನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಸೇರಿಸಲಾಗಿದೆ.

ಬಡಾವಣೆಯಲ್ಲಿ ಕಳೆದ ರಾತ್ರಿ 9 ಗಂಟೆ ಸಮಯದಲ್ಲಿ ಬೂಲಾ ಸ್ನೇಹಿತನನ್ನು ನೋಡಲು ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ನಗರಸಭಾ ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ, ಆತನ ಬಾಮೈದ ರಘು ಅಲಿಯಾಸ್ ಕೊತ್ತಿ ರಘು ಸೇರಿದಂತೆ ಆರು ಜನರ ಗುಂಪು ರೌಡಿ ಶೀಟರ್ ಧನರಾಜ್ ಬೂಲಾನನ್ನು ಅಡ್ಡಗಟ್ಟಿ ಕಾರದ ಪುಡಿ ಎರಚಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದೆ. ಇದರಿಂದ ಪಟ್ಟಣದಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ.

ಹಲ್ಲೆಯಿಂದ ರೌಡಿಶೀಟರ್ ಧನರಾಜ್ ಬೂಲಾನ ಎಡಗೈ ಮಧ್ಯದ ಬೆರಳು ತುಂಡಾಗಿದ್ದು, ಮೈ, ಕೈಗಳಿಗೆ ಮಚ್ಚಿನ ಏಟು ಬಿದ್ದಿದೆ. ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಘಟನೆ ವಿವರ: ಕಳೆದ 28 ವರ್ಷಗಳ ಹಿಂದೆ ಶಂಕರಪುರದ ನಂಜುಂಡಸ್ವಾಮಿ ಅವರು ಪುರಸಭೆ ಚುನಾವಣೆಗೆ ಸ್ಪರ್ಧಿಸಿದ್ದು, ಅವರಿಗೆ ಧನರಾಜು ಬೂಲಾ ಅವರ ತಂದೆ ಬೆಂಬಲ ನೀಡಿದ್ದರು. ನಂಜುಂಡಸ್ವಾಮಿ ಎದುರು ಶ್ರೀಕಂಠಸ್ವಾಮಿಯವರ ಚಿಕ್ಕಪ್ಪ ಬಸವರಾಜು ನಿಂತಿದ್ದರು. ಆ ಚುನಾವಣೆಯಲ್ಲಿ ನಂಜುಂಡಸ್ವಾಮಿ ಗೆದ್ದಿದ್ದರು.

ಚುನಾವಣೆ ಮುಗಿದ ಸುಮಾರು ಒಂದು ತಿಂಗಳ ನಂತರ ಶ್ರೀಕಂಠಸ್ವಾಮಿ ಮತ್ತು ಅವರ ಕಡೆಯವರು ಧನರಾಜ್ ಬೂಲಾನ ತಂದೆ ಬಸವರಾಜು ಅವರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ, ಕೊಲೆ ಪ್ರಯತ್ನ ಮಾಡಿದ್ದರು. ಈ ಸಂಬಂಧ ದೂರು ದಾಖಲಾಗಿತ್ತು. ಇದಾದ ಒಂದು ವರ್ಷದ ನಂತರ ಚುನಾವಣೆಯಲ್ಲಿ ಗೆದ್ದಿದ್ದ ನಂಜುಂಡಸ್ವಾಮಿ ಕೊಲೆ ಮಾಡಲಾಗಿದ್ದು, ಈ ಕೊಲೆ ಪ್ರಕರಣ ಸಂಬಂಧ ಶ್ರೀಕಂಠಸ್ವಾಮಿ ಮತ್ತು ಅವರ ಕಡೆಯವರ ಮೇಲೆ ಪ್ರಕರಣ ದಾಖಲಾಗಿತ್ತು.

ಗ್ರಾಮದಲ್ಲಿ ಯಜಮಾನಿಕೆ ವಿಚಾರ ಬಂದಾಗ ಶ್ರೀಕಂಠಸ್ವಾಮಿ ಮತ್ತು ಅವರ ಕಡೆಯವರು ರೌಡಿಶೀಟರ್ ಧನರಾಜ್ ಬೂಲಾನ ಮೇಲೆ ಆಗಾಗ ಗಲಾಟೆ ಮಾಡುತ್ತಿದ್ದರು. ಬೂಲಾ ಬೈಕ್‌ನಲ್ಲಿ ಹೋಗುವಾಗ ಅಪಘಾತಕ್ಕೆ ಪ್ರಯತ್ನಿಸುತ್ತಿದ್ದರು, ಈ ವಿಚಾರವಾಗಿ ಎರಡು ಗುಂಪುಗಳ ನಡುವೆ ಮಾತಿಗೆ ಮಾತು ಬೆಳೆದಿತ್ತು.

ಇದನ್ನೇ ಮನಸ್ಸಿನಲ್ಲಿಟ್ಟುಕೊಂಡು ನ.21 ರಂದು ರಾತ್ರಿ ಧನರಾಜ್ ಬೂಲಾ ತನ್ನ ಸ್ನೇಹಿತ ಅಭಿಷೇಕ್ ಜೊತೆಗೂಡಿ ಬೈಕ್‌ನಲ್ಲಿ ಶಂಕರಪುರ ಹೊಸ ಬಡಾವಣೆಯಲ್ಲಿರುವ ತನ್ನ ಸ್ನೇಹಿತನನ್ನು ನೋಡಲು ತೆರಳುತ್ತಿದ್ದ ವೇಳೆ ಮಾಜಿ ನಗರಸಭಾ ಅಧ್ಯಕ್ಷ ಶ್ರೀಕಂಠಸ್ವಾಮಿ @ ಚಪಾತಿ, ಆತನ ಬಾಮೈದ ರಘು@ಕೊತ್ತಿ, ರಾಜು@ಧತ್ತುರಾಜು, ಚೇತನ್, ಕಿರಣ್ ಮತ್ತು ರಾಘು ಅವರುಗಳು ಧನರಾಜ್ ಬೂಲಾನನ್ನು ಸುತ್ತುವರೆದು ಕಣ್ಣಿಗೆ ಕಾರದ ಪುಡಿ ಎರಚಿ ಮಾರಾಕಾಯುಧಗಳಿಂದ ಹಲ್ಲೆ ನಡೆಸಿದರು ಎನ್ನಲಾಗಿದೆ.

ಇದರಿಂದ ಧನರಾಜ್ ಬೂಲಾನ ಎಡಗೈನ ಮಧ್ಯದ ಬೆರಳು ಕಟ್ಟಾಗಿದೆ, ಜೊತೆಗೆ ಉಳಿದ ಬೆರಳುಗಳಿಗೂ ಏಟಾಗಿದೆ. ಹೊಟ್ಟೆಗೆ ಡ್ರ್ಯಾಗನ್‌ನಿಂದ ಚುಚ್ಚಿರುವುದರಿಂದ ತೀವ್ರ ಸ್ವರೂಪದ ಗಾಯಗಳಾಗಿದೆ. ಧನರಾಜಬೂಲಾ ಪೊಲೀಸರಿಗೆ ದೂರು ನೀಡುವುದರೊಂದಿಗೆ ತನ್ನ ಮೇಲೆ ನಡೆದ ಹಲ್ಲೆ ಬಗ್ಗೆ ಹೇಳಿಕೆ ನೀಡಿದ್ದಾರೆ.

ಘಟನೆ ಸಂಬಂಧ ಮಾಜಿ ನಗರಸಭಾ ಅಧ್ಯಕ್ಷ ಶ್ರೀಕಂಠಸ್ವಾಮಿ, ರಘು, ರಾಜು, ಚೇತನ್, ಕಿರಣ್, ರಾಘು ಸೇರಿದಂತೆ ಆರು ಜನರ ಮೇಲೆ ದೂರು ದಾಖಲಾಗಿದೆ.

ದೂರು ದಾಖಲಿಸಿಕೊಂಡಿರುವ ನಂಜನಗೂಡು ಪಟ್ಟಣ ಪೊಲೀಸರು ಆರೋಪಿಗಳಾದ ರಘು @ ಕೊತ್ತಿ ರಘು, ಕಾರ್ತಿಕ್ ಎಂಬಾತನನ್ನು ವಶಕ್ಕೆ ಪಡೆದು ತನಿಖೆ ಮುಂದುವರಿಸಿದ್ದಾರೆ.

ನಾಲೆಗೆ ಹಾರಿ ಮೈಸೂರಿನ ಗುತ್ತಿಗೆದಾರ ಆತ್ಮಹತ್ಯೆ



ನಂಜನಗೂಡು/ಹುಲ್ಲಹಳ್ಳಿ: ಹುಲ್ಲಹಳ್ಳಿ ಬಲದಂಡೆ ನಾಲೆಗೆ ಬಿದ್ದು ಗುತ್ತಿಗೆದಾರ ಅತ್ಮಹತ್ಯೆಗೆ ಶರಣಾದ ಘಟನೆ ಜರುಗಿದೆ.

ಮೈಸೂರು ನಗರದ ಕುರುಬರಹಳ್ಳಿ ನಿವಾಸಿ ನಾಗೇಶರಾವ್ ರವರ ಪುತ್ರ ಕಿರಣ್‌ರಾವ್(40) ಆತ್ಮಹತ್ಯೆ ಮಾಡಿಕೊಂಡ ಗುತ್ತಿಗೆದಾರ.

ಗುತ್ತಿಗೆದಾರನಾಗಿ ಕೆಲಸ ನಿರ್ವಹಿಸುತ್ತಿದ್ದ ಕಿರಣ್‌ರಾವ್ ನ.20ರ ಗುರುವಾರ ತಾಲೂಕಿನ ಹುರ ಗ್ರಾಮದಲ್ಲಿ ರಸ್ತೆ ಕಾಮಗಾರಿಯ ಮೇಲ್ವಿಚಾರಣೆ ನಡೆಸಿ ಬಳಿಕ ಹುಲ್ಲಹಳ್ಳಿ ಗ್ರಾಮದ ಬಳಿಯಲ್ಲಿ ಕಬಿನಿ ಬಲದಂಡೆ ನಾಲೆಯ ಬಳಿ ತನ್ನ ಬೈಕ್ ಮತ್ತು ಹೆಲ್ಮೆಟ್ ಬಿಟ್ಟು ನಾಲೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಕಾಣೆಯಾಗಿರುವ ಬಗ್ಗೆ ದೂರು ದಾಖಲಾಗಿತ್ತು, ನ.22ರ ಶನಿವಾರ ತಾಲೂಕಿನ ಕಳಲೆ ಗ್ರಾಮದಲ್ಲಿ ಮೃತ ಕಿರಣ್ ರಾವ್ ಶವ ಸಿಕ್ಕಿದ್ದು, ನಂಜನಗೂಡು ಗ್ರಾಮಾಂತರ ಪೊಲೀಸರು ಶವವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿ ವಾರಸುದಾರರಿಗೆ ಹಸ್ತಾಂತರಿಸಿದರು.

ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಅಹವಾಲು ಸಲ್ಲಿಕೆ



ಕೇಂದ್ರ ಸಚಿವ ವಿ ಸೋಮಣ್ಣ ಅವರನ್ನು ವರುಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಯುವ ಮುಖಂಡ ಕೆಂಪಯ್ಯನ ಹುಂಡಿ ಅಂದಾನಿ ಗೌಡರು ಕ್ಷೇತ್ರದ ಅಭಿವೃದ್ಧಿ ವಿಚಾರವಾಗಿ ಭೇಟಿ ಮಾಡಿ ಅಹವಾಲು ಸಲ್ಲಿಸಿದರು.

ಕೃಷ್ಣ ಬಾಯಿ ನಿಧನ



ಹುಣಸೂರು: ಅಭಿಯೋಗ ಉಪ ನಿರ್ದೇಶಕರಾದ ರಮೇಶ್ ಬಾಬು ಅವರ ತಾಯಿ ಕೃಷ್ಣ ಬಾಯಿ (93) ಶನಿವಾರ ಮಧ್ಯಾಹ್ನ ನಿಧನ ಹೊಂದಿದ್ದಾರೆ. ಇವರು ತಾಲೂಕಿನ ಕಟ್ಟೆಮಳಲವಾಡಿ ಗ್ರಾಮದ ನಿವಾಸಿಯಾಗಿದ್ದು, ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ ಭಾನುವಾರ ಸ್ವಗ್ರಾಮದಲ್ಲಿ ನೆರವೇರಲಿದೆ.

ಮೈಸೂರು ಮಿತ್ರ

ಭಾನುವಾರ 23 ನವೆಂಬರ್ 2025

ಮಾಹಿತಿ ಹಕ್ಕು ಕಾಯ್ದೆ ಬಳಸಿ ಬ್ಲಾಕ್‌ಮೇಲ್ ಮಾಡುವವರನ್ನು ಅಧಿಕಾರಿಗಳು ಪೋಷಿಸಬಾರದು

ರಾಜ್ಯ ಮಾಹಿತಿ ಆಯೋಗದ ಅಧ್ಯಕ್ಷ ರುದ್ರಣ್ಣ ಹರ್ತಿಕೋಟೆ ಸಲಹೆ

ಮೈಸೂರು,ನ.22(ಎಂಟಿವೈ)– ಸರ್ಕಾರ ಹಾಗೂ ಜನರ ನಡುವೆ ಸೇತುವೆಯಂತೆ ಕೆಲಸ ಮಾಡುವ ಮಾಹಿತಿ ಹಕ್ಕು ಕಾಯ್ದೆ ಪರಿಣಾಮಕಾರಿಯಾದ ಕಾಯ್ದೆಯಾಗಿದ್ದು, ಇದನ್ನು ಬಳಸಿಕೊಂಡು ಬ್ಲಾಕ್ ಮೇಲ್ ಮಾಡುವವರನ್ನು ಅಧಿಕಾರಿ ವರ್ಗ ಪೋಷಿಸಬಾರದು ಎಂದು ರಾಜ್ಯ ಮಾಹಿತಿ ಆಯೋಗದ ಆಯುಕ್ತ ರುದ್ರಣ್ಣ ಹರ್ತಿಕೋಟೆ ಸಲಹೆ ನೀಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಶನಿವಾರ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ 'ಸಾಧಕ ಪತ್ರಕರ್ತರಿಗೆ ಅಭಿನಂದನಾ ಸಮಾರಂಭ ಹಾಗೂ ಮಾಹಿತಿ ಆಯೋಗದ ಆಯುಕ್ತರಿಂದ ಸಂವಾದ ಕಾರ್ಯಕ್ರಮ'ದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಡಾ.ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದ ವೇಳೆ 2005ರಲ್ಲಿ ಜಾರಿಗೆ ತಂದ ಮಾಹಿತಿ ಹಕ್ಕು ಕಾಯ್ದೆ ಪ್ರಬಲ ಕಾಯ್ದೆಯಾಗಿದೆ. ಭ್ರಷ್ಟಾಚಾರ ನಿರ್ಮೂಲನೆ ಮಾಡಲು, ಸರ್ಕಾರ ಮತ್ತು ಜನರ ನಡುವೆ ಸೇತುವೆಯಂತೆ ಕೆಲಸ ಮಾಡಲು, ಅಭಿವೃದ್ಧಿ ಕಾರ್ಯಗಳು ಪರಿಣಾಮಕಾರಿಯಾಗಿ ನಡೆಸುವುದಕ್ಕೆ ಸಹಕಾರಿಯಾಗುವ ದೃಷ್ಟಿಕೋನದೊಂದಿಗೆ ಜಾರಿಗೊಳಿಸಿದ ಮಾಹಿತಿ ಹಕ್ಕು ಕಾಯ್ದೆಯ ಸದುಪಯೋಗ ಮಾಡಿಕೊಳ್ಳಲು ಜನ ಮುಂದಾಗಬೇಕು ಎಂದರು.

ಯಾವುದೇ ಕಾಯ್ದೆ ದುರುಪಯೋಗವಾಗುವಂತೆ ಮಾಹಿತಿ ಹಕ್ಕು ಕಾಯ್ದೆಯೂ ದುರುಪಯೋಗವಾಗುತ್ತಿದೆ. ಈ ಕಾಯ್ದೆಯನ್ನು ದುರುಪಯೋಗ ಮಾಡಿಕೊಳ್ಳುವವರನ್ನು ಪೋಷಿಸಬಾರದು. ಅಲ್ಲದೆ, ಬ್ಲಾಕ್‌ಮೇಲರ್‌ಗಳನ್ನು ಬೆಂಬಲಿಸಬಾರದು. ಇಲ್ಲದಿದ್ದರೆ ಮುಂದೆ ಇಂತಹವರನ್ನು ಸದೆ ಬಡಿಯುವುದು ಕಷ್ಟವಾಗುತ್ತದೆ ಎಂದು ವಿಷಾದಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಶನಿವಾರ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಸಾಧಕ ಪತ್ರಕರ್ತರಿಗೆ ಅಭಿನಂದನಾ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾಮಟ್ಟದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರನ್ನು ಸನ್ಮಾನಿಸಲಾಯಿತು.

ಊಹಾ ಪತ್ರಿಕೋದ್ಯಮ ಬೇಡ: ಇತ್ತೀಚಿನ ದಿನಗಳಲ್ಲಿ ತನಿಖಾ ಮತ್ತು ಅಭಿವೃದ್ಧಿ ಪತ್ರಿಕೋದ್ಯಮ ಮೂಲೆಗೆ ಸೇರಿದೆ. ಇಂತಹ ಸಂದರ್ಭದಲ್ಲಿ ಪತ್ರಕರ್ತರು ಮಾಹಿತಿ ಹಕ್ಕು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಅಭಿವೃದ್ಧಿ ಪತ್ರಿಕೋದ್ಯಮವನ್ನು ಮುನ್ನಲೆಗೆ ತರಬಹುದು. ಕೇವಲ 10 ರೂ. ನೀಡಿ ಮಾಹಿತಿ ಹಕ್ಕು ಕಾಯ್ದೆಯಲ್ಲಿ ಅರ್ಜಿ ಸಲ್ಲಿಸಿ, ಬೇಕಾದ ಮಾಹಿತಿ ಪಡೆದು ಜನರ ಒಳಿತಿಗಾಗಿ ನೈಜ ಪತ್ರಿಕೋದ್ಯಮದಲ್ಲಿ ಮುನ್ನುಗ್ಗ ಬೇಕು. ಯಾರಿಗೂ ಪ್ರಯೋಜನಕ್ಕೆ ಬಾರದ ಊಹಾ ಪತ್ರಿಕೋದ್ಯಮಕ್ಕೆ ತಿಲಾಂಜಲಿ ನೀಡಬೇಕು ಎಂದು ಕಿವಿಮಾತು ಹೇಳಿದರು.

ತ್ವರಿತ ವಿಲೇವಾರಿ: ಮಾಹಿತಿ ಹಕ್ಕು ಆಯೋಗದ ರಾಜ್ಯ ಆಯುಕ್ತ ಕೆ.ಬದ್ರುದ್ದೀನ್ ಮಾತನಾಡಿ, ಕೊರೊನಾ ಸೇರಿದಂತೆ ವಿವಿಧ ಕಾರಣದಿಂದ ನೆನೆಗುದಿಗೆ ಬಿದ್ದಿದ್ದ 50 ಸಾವಿರಕ್ಕೂ ಹೆಚ್ಚು ಮೇಲ್ಮನವಿ ಅರ್ಜಿಗಳ ತ್ವರಿತ ವಿಲೇವಾರಿಗೆ ಕ್ರಮ ಕೈಗೊಳ್ಳಲಾಗಿದೆ. ಇದುವರೆಗೆ 25 ಸಾವಿರಕ್ಕೂ ಹೆಚ್ಚು ಮೇಲ್ಮನವಿ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಎಲ್ಲಾ ಜಿಲ್ಲೆಗಳಲ್ಲಿ ಸಭೆ ಮಾಡಿ, ಕೆಡಿಪಿ ಸಭೆಯಲ್ಲಿ ಮಾಹಿತಿ ಹಕ್ಕು ಕಾಯ್ದೆ ಅರ್ಜಿಗಳ ವಿಲೇವಾರಿ ಕುರಿತಂತೆ ಚರ್ಚಿಸಲು ಮನವಿ ಸಲ್ಲಿಸಲಾಗುತ್ತಿದೆ ಎಂದು ತಿಳಿಸಿದರು.

ಮಾಹಿತಿ ನೀಡಲೇಬೇಕು: ಮಾಹಿತಿ ಹಕ್ಕು ಕಾಯ್ದೆಯ ರಾಜ್ಯ ಆಯುಕ್ತ ಎಸ್.ರಾಜಶೇಖರ್ ಮಾತನಾಡಿ, ಮಾಹಿತಿ ಹಕ್ಕು ಕಾಯ್ದೆಯಲ್ಲಿ ಅರ್ಜಿ ಸಲ್ಲಿಸಿದವರಿಗೆ ನಿಗದಿತ ಸಮಯದಲ್ಲಿ ಮಾಹಿತಿ ನೀಡಬೇಕು. ಇಲ್ಲದಿದ್ದರೆ ಮೇಲ್ಮನವಿ ಸಲ್ಲಿಸಬಹುದು. ಕೆಲವರು ಅರ್ಜಿ ಸಲ್ಲಿಸಿದಾಗ ಕೋರಿದ ಮಾಹಿತಿಗಳು ಅನುಮಾನ ಹುಟ್ಟಿಸುವಂತೆ ಇರುತ್ತವೆ. ಈ ಹಿನ್ನೆಲೆಯಲ್ಲಿ ಅರ್ಜಿ ಸಲ್ಲಿಸುವಾಗ ನಿಖರವಾಗಿ ಸಲ್ಲಿಸಬೇಕು ಎಂದು ಸಲಹೆ ನೀಡಿದರು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಉದ್ಘಾಟಿಸಿ ಮಾತನಾಡಿ, ಮೈಸೂರಿನ ಪತ್ರಕರ್ತರು ಮಾದರಿ ಪತ್ರಕರ್ತರಾಗಿದ್ದಾರೆ. ನೈತಿಕತೆ ಉಳಿಸಿಕೊಂಡು ಕೆಲಸ ಮಾಡುವ ಮೂಲಕ ರಾಜ್ಯದ ಗಮನ ಸೆಳೆದಿದ್ದಾರೆ ಎಂದರು.

> **ಬಲಾಢ್ಯರನ್ನು ಪ್ರಶ್ನೆ ಮಾಡುವ ಅಸ್ತ್ರ**
>
> ಶ್ರೀಸಾಮಾನ್ಯರನ್ನು ಮುಖ್ಯ ವಾಹಿನಿ ತರುವ ನಿಟ್ಟಿನಲ್ಲಿ ಮಾಹಿತಿ ಹಕ್ಕು ಕಾಯ್ದೆ ಸಹಕಾರಿಯಾಗಿದೆ. ಸರ್ಕಾರದ ವ್ಯವಸ್ಥೆಯನ್ನು ಪ್ರಶ್ನೆ ಮಾಡುವುದಕ್ಕೆ ಈ ಕಾಯ್ದೆ ಅವಕಾಶ ಮಾಡಿಕೊಟ್ಟಿದೆ. ಬಲಾಢ್ಯರನ್ನು ಪ್ರಶ್ನೆ ಮಾಡುವ ಅಸ್ತ್ರವೂ ಆಗಿದೆ.
>
> **ಡಾ.ಹರೀಶ್ ಕುಮಾರ್**
> ಮಾಹಿತಿ ಹಕ್ಕು ಆಯೋಗದ ರಾಜ್ಯ ಆಯುಕ್ತ

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ರಾಜ್ಯಮಟ್ಟದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಜಿಲ್ಲಾಮಟ್ಟದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ 'ಮೈಸೂರು ಮಿತ್ರ' ಹಿರಿಯ ವರದಿಗಾರ ಎಂ.ಟಿ.ಯೋಗೇಶ್ ಕುಮಾರ್, ಪತ್ರಕರ್ತರಾದ ದಯಾಶಂಕರ ಮೈಲಿ, ಮಹೇಶ್ ಭಗೀರಥ, ಧರ್ಮಾಪುರ ನಾರಾಯಣ್, ಕೆ.ಬಿ. ರಮೇಶ್‌ನಾಯಕ, ವೀರಭದ್ರಪ್ಪ ಬಿಸ್ಲಳ್ಳಿ, ಹೆಚ್.ಎಸ್. ದಿನೇಶ್ ಕುಮಾರ್, ಹಂಪಾ ನಾಗರಾಜ್, ಎಂ.ಎ. ಶ್ರೀರಾಮ್, ಸುಧೀಂದ್ರಕುಮಾರ್, ಶೇಖರ್ ಕಿರಗುಂದ, ಈ ಕಾರ್ತಿಕ್, ರಾಜ್ಯ ಸಮಿತಿಗೆ ನೂತನವಾಗಿ ಆಯ್ಕೆಯಾದ ಬಿ. ರಾಘವೇಂದ್ರ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷ ರವಿ ಪಾಂಡವಪುರ, ಗ್ರಾಮಾಂತರ ಕಾರ್ಯದರ್ಶಿ ದಾ.ರಾ. ಮಹೇಶ್, ಕಾರ್ಯಕಾರಿ ಸಮಿತಿ ಸದಸ್ಯ ಶಿವಣ್ಣ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ತಿಯಾವರ್ ಕುಲಾಯಿ ನಡುಂಗಾ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಮಸ್ತಿ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರಾಧೇಯ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಧೇಯ (ಕ)	4 ಪ್ರದರ್ಶನಗಳು
ರಾಜಕಮಲ್	
ತಿಯಾವರ್ ಕುಲಾಯಿ ನಡುಂಗಾ (ತ)	4 ಪ್ರದರ್ಶನಗಳು
ಸಂಗಂ	
ಕಂಗ್ರಾಜುಲೇಷನ್ ಬ್ರದರ್(ಕ)	4 ಪ್ರದರ್ಶನಗಳು
ಲಿಡೋ	
ಬ್ರ್ಯಾಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಟಾಸ್ಕ್ (ಕ)	4 ಪ್ರದರ್ಶನಗಳು

ರೈತರು, ಕಾರ್ಮಿಕರು, ಜನರ ಸಮಸ್ಯೆ ಬಗ್ಗೆ ಗಮನ ಸೆಳೆಯಲು

ನ.26 ಬೃಹತ್ ಬೆಂಗಳೂರು ಚಲೋ


ಮೈಸೂರು,ನ.22(ಜಿಎ)–ಜನ ಸಾಮಾನ್ಯರು, ರೈತರು ಹಾಗೂ ಕಾರ್ಮಿಕರು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ಬಗ್ಗೆ ರಾಜ್ಯ ಸರ್ಕಾರದ ಗಮನ ಸೆಳೆಯಲು ನ.26 ರಂದು ಬೃಹತ್ ಬೆಂಗಳೂರು ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯಿಂದಲೂ ಸುಮಾರು ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆಂದು ಕಾರ್ಮಿಕ ಮುಖಂಡ ಜಗದೀಶ್ ಸೂರ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಕಾರಣಿಗಳಿಗೆ ಕುರ್ಚಿಯ ಚಿಂತೆಯಾಗಿದೆ. ಹಣವಂತರಿಗೆ ಆಸ್ತಿ ಚಿಂತೆ. ಆದರೆ ದುಡಿಯುವವರಿಗೆ ಅನ್ನ, ಸೂರಿನ ಚಿಂತೆ ಕಾಡುತ್ತಿದೆ. ಈ ಬಗ್ಗೆ ಕೇಂದ್ರವಾಗಲೀ, ರಾಜ್ಯ ಸರ್ಕಾರವಾಗಲೀ ಗಮನಹರಿಸಿಲ್ಲ. ಹೀಗಾಗಿ ಅಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುವ ಸಮಾವೇಶದಲ್ಲಿ ರಾಜ್ಯದ ವಿವಿಧೆಡೆಯಿಂದ ಸುಮಾರು 50 ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆ ಎಂದರು.

ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಬಗರ್ ಹುಕುಂ ಸಮಸ್ಯೆ, ವಸತಿ ಸಮಸ್ಯೆ, ವಿದ್ಯುತ್ ಮೀಟರ್ ಅಳವಡಿಕೆಯ ಸಂಕಷ್ಟಗಳು ಅಂದಿನ ಪ್ರಮುಖ ವಿಷಯಗಳಾಗಿವೆ. ಈ ಕುರಿತು ಸರ್ಕಾರದ ಎಲ್ಲ ಪ್ರಮುಖರಿಗೂ ಮಾಹಿತಿ ನೀಡಿದ್ದು, ಅಂದು ಅವರು ಫ್ರೀಡಂ ಪಾರ್ಕ್‌ಗೆ ಆಗಮಿಸಿದಾಗ ಅಹವಾಲು ಸಲ್ಲಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪಿ. ಮರಂಕಯ್ಯ, ಕಂದೇಗಾಲ ಶ್ರೀನಿವಾಸ್ ಉಪಸ್ಥಿತರಿದ್ದರು.

ಮೈಸೂರಿಗೆ ಫ್ಲೈ ಓವರ್ ಅವಶ್ಯವಿಲ್ಲ

ಸಂಸದ ಯದುವೀರ್‌ಗೆ ಮೈಗ್ರಾಪ ಮನವರಿಕೆ



ಮೈಸೂರು, ನ.22– ಸಾಂಸ್ಕೃತಿಕ ನಗರಿ ಮೈಸೂರಿಗೆ ಫ್ಲೈ ಓವರ್ ಅವಶ್ಯಕತೆ ಬಗ್ಗೆ ಪರಾಮರ್ಶಿಸುವಂತೆ ಮೈಸೂರು ಗ್ರಾಹಕರ ಪರಿಷತ್(ಮೈಗ್ರಾಪ) ನಿಯೋಗ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಒತ್ತಾಯಿಸಿದೆ.

ಮೈಗ್ರಾಪ ಸಂಸ್ಥಾಪಕ ಭಾಮಿ ವಿ.ಶೆಣೈ, ಸಂಚಾಲಕರಾದ ಮೇಜರ್ ಜನರಲ್ ಒಂಬತ್ಕೆರೆ, ಡಿ.ವಿ.ದಯಾನಂದ್ ಸಾಗರ್ ಹಾಗೂ ಸದಸ್ಯ ನಾಗಭೂಷಣ್ ಅವರು ಸಂಸದರನ್ನು ಭೇಟಿಯಾಗಿ, ನಗರದ ಹೃದಯ ಭಾಗದಲ್ಲಿ ಹಸಿರು ವಲಯವನ್ನು ನಾಶಮಾಡಿ ಫ್ಲೈ ಓವರ್ ನಿರ್ಮಾಣ ಮಾಡುವುದರ ಸಾಧಕ ಬಾಧಕಗಳನ್ನು ಸಂಸದರ ಜೊತೆ ಚರ್ಚಿಸಿದರು.

ಇದೇ ವೇಳೆ ಈ ಯೋಜನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಹಲವು ಪ್ರಮುಖ ಅಂಶಗಳನ್ನು ಸಂಸದರ ಗಮನಕ್ಕೆ ತಂದು, ಶೀಘ್ರದಲ್ಲೇ ಇಂಜಿನಿಯರ್‌ಗಳು ಹಾಗೂ ಹೈವೇ ಪರಿಣಿತರೊಂದಿಗೆ ಚರ್ಚಿಸಿ, ನಂತರ ನಾಗರೀಕರ ಸಲಹೆ ಪಡೆದು ಸೂಕ್ತ ನಿರ್ಧಾರಕ್ಕೆ ಬರಬೇಕೆಂದು ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಂಸದರು, ಶೀಘ್ರದಲ್ಲಿ ಸಭೆ ಕರೆಯುವ ಭರವಸೆ ನೀಡಿದರಲ್ಲದೆ, ಮೈಗ್ರಾಪ ಕಳಕಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಬಂಡೀಪುರ, ನಾಗರಹೊಳೆ ಪ್ರದೇಶದಲ್ಲಿ ಸಫಾರಿ ಪುನರಾರಂಭಕ್ಕೆ ಮೈಸೂರು ಹೋಟೆಲ್ ಮಾಲೀಕರ ಸಂಘ ಆಗ್ರಹ

ಮೈಸೂರು, ನ. 22– ದಕ್ಷಿಣ ಭಾರತದ ಪ್ರಮುಖ ಅಭಯಾರಣ್ಯ ಹಾಗೂ ಹುಲಿ ಸಂರಕ್ಷಿತ ಪ್ರದೇಶಗಳಾದ ಬಂಡೀಪುರ ಹಾಗೂ ನಾಗರಹೊಳೆ ದೇಶ–ವಿದೇಶ ಪ್ರವಾಸಿಗಳ ಪ್ರವಾಸಿ ತಾಣಗಳಾಗಿದ್ದು, ಪ್ರತಿನಿತ್ಯವೂ ಅಪಾರ ಪ್ರವಾಸಿಗರು ಈ ಅರಣ್ಯಗಳ ನೋಡಲು ಹಾಗೂ ಸಫಾರಿಗೆ ಭೇಟಿ ನೀಡುತ್ತಾರೆ. ಈಗ ಸಫಾರಿ ಸ್ಥಗಿತಗೊಂಡಿರುವ ಕಾರಣ ಸಾಕಷ್ಟು ಪ್ರವಾಸಿಗರು ನಿರಾಸೆಗೊಳಗಾಗಿದ್ದಾರೆ.



ನಾರಾಯಣಗೌಡ

ಮೈಸೂರಿಗೆ ಬರುವ ಪ್ರವಾಸಿಗರು ಅರಮನೆ, ಝೂ, ಚಾಮುಂಡಿಬೆಟ್ಟ ನಂತರ ಮುಖ್ಯವಾಗಿ ಭೇಟಿ ನೀಡುವುದು, ಬಂಡೀಪುರ ಹಾಗೂ ನಾಗರಹೊಳೆ. ಮೈಸೂರಿಗೆ ಬರುವ ಬಹುತೇಕ ಎಲ್ಲ ಪ್ರವಾಸಿಗರು ಇಲ್ಲಿಗೆ ಭೇಟಿ ಕೊಡುವ ಪರಿಪಾಠವಿದೆ. ಇದರಿಂದ ನಮ್ಮ ನಾಡಿನ ಭವ್ಯ ಅರಣ್ಯ ಸಂಪತ್ತಿನ ಪರಿಚಯ ಜನರಿಗೆ ಆಗುವ ಜೊತೆಗೆ ನಮ್ಮ ಆರ್ಥಿಕತೆಯೂ ಉತ್ತಮಗೊಳ್ಳುತ್ತದೆ. ಸಫಾರಿ ವಿಭಾಗದಲ್ಲಿ ಕೆಲಸ ಮಾಡುವ ಸಾವಿರಾರು ಜನರ ಕುಟುಂಬಗಳು ಇದರ ಮೇಲೆ ಅವಲಂಬಿತವಾಗಿವೆ. ಸಫಾರಿ ನಿಂತರೆ ಅವರೆಲ್ಲರ ಕುಟುಂಬಗಳಿಗೂ ಆದಾಯಕ್ಕೆ ಬೇರೆ ದಿಕ್ಕು ಇಲ್ಲದಂತಾಗುತ್ತದೆ. ಈ ಭಾಗದಲ್ಲಿ ಪ್ರವಾಸೋದ್ಯಮ ದಡಿಯೇ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ, ಎಲ್ಲ ಹೋಟೆಲ್‌ಗಳ ಸ್ಥಾಪನೆ ಮಾಡಲಾಗಿದೆ. ಇಂತಹ ಹೋಟೆಲ್ ಮಾಲೀಕರು ಇಲ್ಲಿನ ಪ್ರವಾಸೋದ್ಯಮವನ್ನೇ ನಂಬಿ ಬ್ಯಾಂಕ್‌ಗಳಲ್ಲಿ ಕೋಟ್ಯಾಂತರ ರೂಪಾಯಿ ಸಾಲ ಮಾಡಿ ರೆಸಾರ್ಟ್‌ಗಳನ್ನು ನಡೆಸುತ್ತಿದ್ದಾರೆ. ಈಗಾಗಲೇ ಮುಂಗಡ ಬುಕ್ ಆಗಿದ್ದ ರೂಂಗಳೂ ಕ್ಯಾನ್ಸಲ್ ಆಗುತ್ತಿದ್ದು, ಹೋಟೆಲ್ ಹಾಗೂ ರೆಸಾರ್ಟ್ ಮಾಲೀಕರು ಪರದಾಡುವಂತಾಗಿದೆ. ಈ ಹೋಟೆಲ್‌ಗಳು, ರೆಸಾರ್ಟ್‌ಗಳಿಗೆ ಜನರನ್ನು ಕರೆದುಕೊಂಡು ಬರುವ ಟ್ರಾವೆಲ್ ಏಜೆಂಟ್‌ಗಳು ಹಾಗೂ ವಾಹನ ಚಾಲಕರಿಗೂ ದೊಡ್ಡ ಹೊಡೆತ ಬಿದ್ದಂತಾಗಿದೆ. ಇದಕ್ಕೆ ಪೂರಕವಾಗಿ ಪ್ರವಾಸಿ ಗೈಡ್‌ಗಳಿಗೂ ಸಮಸ್ಯೆಯಾಗಿದೆ.

ಟ್ರಾವೆಲ್ ಏಜೆಂಟ್‌ಗಳು, ಪ್ರವಾಸಿ ವಾಹನ ಚಾಲಕರು, ಹೋಟೆಲ್ ಮಾಲೀಕರು, ಪ್ರವಾಸಿ ಗೈಡ್‌ಗಳೆಲ್ಲರೂ ನಿಯಮದ ಪ್ರಕಾರ ಅಗತ್ಯವಿರುವ ಪರವಾನಗಿ ಮಾನ್ಯತೆಗಳ ಪಡೆದು ಉದ್ಯಮಗಳನ್ನು ನಡೆಸಿದರೂ ಈಗ ಸಫಾರಿ ಸ್ಥಗಿತಗೊಂಡಿರುವ ಕಾರಣ ಎಲ್ಲರಿಗೂ ಆರ್ಥಿಕ ಹೊಡೆತ ಬೀಳುತ್ತಿದೆ. ಈವರೆಗೂ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳೊಂದಿಗೆ ಸಫಾರಿ ನಡೆಸಲಾಗುತ್ತಿದ್ದು, ಯಾವುದೇ ದುರ್ಘಟನೆಗಳೂ ಸಫಾರಿ ಸಮಯದಲ್ಲಿ ನಡೆದಿಲ್ಲ. ಹಾಗೂ ಬೇಕಾದಲ್ಲಿ ಹೊಸ ಎಸ್.ಒ.ಪಿ. ರಚನೆ ಮಾಡಿ ಅದರ ಪ್ರಕಾರ ಸಫಾರಿ ಮುಂದುವರೆಸುವ ಕೆಲಸ ಆಗಬೇಕಾಗಿರುತ್ತದೆ. ಸರ್ಕಾರ ಈ ಬಗ್ಗೆ ಗಮನಹರಿಸಿ ಸಫಾರಿ ಪುನರಾರಂಭಿಸಬೇಕು ಎಂದು ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಸರಕಾರವನ್ನು ಒತ್ತಾಯಿಸಿದ್ದಾರೆ.

250ನೇ ಸೇವಾ ಸಂಭ್ರಮದ ಪೋಸ್ಟರ್ ಬಿಡುಗಡೆ



ಎಸ್.ಪ್ರಕಾಶ್ ಪ್ರಿಯಾ ದರ್ಶನ್ ಸ್ನೇಹ ಬಳಗದ 250ನೇ ಸಂಭ್ರಮಾಚರಣೆ ಪೋಸ್ಟರ್ ಅನ್ನು ಮಾಜಿ ಸಚಿವ ಸಾ.ರಾ. ಮಹೇಶ್ ಬಿಡುಗಡೆ ಮಾಡಿದರು. ಶಾಸಕ ಜಿ.ಡಿ. ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಮಾಜಿ ಶಾಸಕರಾದ ಅಶ್ವಿನ್ ಕುಮಾರ್, ಮಹದೇವ್, ಮಾಜಿ ಮೇಯರ್ ಆರ್.ಲಿಂಗಪ್ಪ, ಎಂ.ಜೆ. ರವಿಕುಮಾರ್, ರಾಜ್ಯ ವಕ್ತಾರ ರವಿಚಂದ್ರ ಗೌಡ, ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್ ಪ್ರಕಾಶ್ ಪ್ರಿಯಾದರ್ಶನ್, ಮೈಲ್ಯಾಕ್ ಮಾಜಿ ಅಧ್ಯಕ್ಷ ಕೃಷ್ಣ, ನಗರ ಪಾಲಿಕೆ ಮಾಜಿ ಸದಸ್ಯರಾದ ಎಸ್‌ಬಿಎಂ ಮಂಜು, ಅಶ್ವಿನಿ ಅನಂತು, ಶೋಭಾ, ಕೆ.ಆರ್. ಕ್ಷೇತ್ರದ ಅಧ್ಯಕ್ಷ ಬಿ.ಜಿ. ಸಂತೋಷ್, ನರಸಿಂಹರಾಜ ಬ್ಲಾಕ್ ಅಧ್ಯಕ್ಷರಾದ ಎಂ.ಎನ್.ರಾಮು, ರಿಜ್ವಾನ್, ಚಾಮರಾಜ ಕ್ಷೇತ್ರದ ಅಧ್ಯಕ್ಷ ಮಂಜುನಾಥ್ ಮುಖಂಡರಾದ ಅಶೋಕ್, ಸತ್ಯನಾರಾಯಣ ಇನ್ನಿತರ ಮುಖಂಡರು ಹಾಜರಿದ್ದರು.

ಬಂಡೀಪುರದ ಹೆದ್ದಾರಿಗಳಲ್ಲಿ ಸಿಸಿ ಕ್ಯಾಮರಾ ಕಣ್ಗಾವಲು: ಪ್ರಾಣಿಗಳ ಮುಂದೆ ಶೋ ನೀಡುವವರಿಗೆ ದಂಡಾಸ್ತ್ರ ಕಾದಿದೆ

● ಕಾಡಿನ ರಸ್ತೆಯಲ್ಲಿ ಅನಗತ್ಯವಾಗಿ ವಾಹನ ನಿಲ್ಲಿಸುವವರ ವಿರುದ್ಧವೂ ಕ್ರಮ ● ಬಂಡೀಪುರ ಹಳೆ ಕ್ಯಾಂಪಸ್‌ನಿಂದ ಮದುಮಲೈ ಬಾರ್ಡರ್‌ವರೆಗೆ ಪ್ರಾಯೋಗಿಕವಾಗಿ ಸೋಲಾರ್ ಕ್ಯಾಮರ ಅಳವಡಿಕೆ



ಬಂಡೀಪುರ ಅರಣ್ಯದ ಊಟಿ ರಸ್ತೆಯಲ್ಲಿ ಸೋಲಾರ್ ಸಿಸಿ ಕ್ಯಾಮರಾ ಅಳವಡಿಸುತ್ತಿರುವುದು.

ಮೈಸೂರು,ನ.22(ಎಂಟಿವೈ)– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಡುವೆ ಹಾದು ಹೋಗಿರುವ ಊಟಿ ಮತ್ತು ವೈಯನಾಡು ಹೆದ್ದಾರಿಯಲ್ಲಿ ವಾಹನ ಸವಾರರು ಪ್ರಾಣಿಗಳ ಮುಂದೆ ಮಾಡುವ ಚೇಷ್ಟೆ ತಡೆಗಟ್ಟಲು ಅರಣ್ಯ ಇಲಾಖೆ ಸೋಲಾರ್ ಸಿಸಿ ಕ್ಯಾಮರಾ ಅಳವಡಿಸಿದ್ದು, ಅರಣ್ಯ ಪ್ರದೇಶದಲ್ಲಿ ವಾಹನ ನಿಲ್ಲಿಸುವವರಿಗೆ ತಕ್ಕ ಪಾಠ ಕಲಿಸಲು ಮುಂದಾಗಿದೆ.

ಬಂಡೀಪುರ ಅಭಯಾರಣ್ಯದಲ್ಲಿ ಊಟಿ ರಾಷ್ಟ್ರೀಯ ಹೆದ್ದಾರಿ 67 ಹಾಗೂ ಕೇರಳದ ವೈಯನಾಡಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 766(212)ರಲ್ಲಿ ಪ್ರತಿದಿನ ಬೆಳಗ್ಗೆ 6 ರಿಂದ ರಾತ್ರಿ 9 ಗಂಟೆವರೆಗೆ ಸಾವಿರಾರು ವಾಹನ ಸಂಚರಿಸಲಿದ್ದು, ಈ ವೇಳೆ ಕೆಲ ಪ್ರವಾಸಿಗರು ರಸ್ತೆ ಬದಿ ನಿಲ್ಲುವ ಆನೆಗಳ ಮುಂದೆ ಸೆಲ್ಫಿ ತೆಗೆದುಕೊಳ್ಳಲು ಹೋಗಿ ಅಪಾಯಕ್ಕೀಡಾಗುವ ಪರಿಸ್ಥಿತಿ ಹೆಚ್ಚಾಗುತ್ತಿವೆ. ಕಳೆದ ತಿಂಗಳು ನಂಜನಗೂಡು ಮೂಲದ ವ್ಯಕ್ತಿ ಹೀಗೆ ಹುಚ್ಚಾಟ ಮೆರೆದು ಒಂಟಿ ಸಲಗ ನಡೆಸಿದ ದಾಳಿಯಲ್ಲಿ ಕೂದಲೆಳೆ ಅಂತರದಲ್ಲಿ ಪಾರಾಗಿದ್ದ.

ಈ ವ್ಯಕ್ತಿಯ ಹುಚ್ಚಾಟದ ವೀಡಿಯೊ ವೈರಲ್ ಆಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ್ದ ಅಧಿಕಾರಿಗಳು ಆ ವ್ಯಕ್ತಿಯನ್ನು ಪತ್ತೆ ಮಾಡಿ, ದಂಡ ವಿಧಿಸಿದ್ದರು. ಈಗಲೂ ನಿಯಮ ಉಲ್ಲಂಘಿಸಿ ಅರಣ್ಯ ಪ್ರದೇಶದಲ್ಲಿ ಹಾದು ಹೋಗುವ ರಸ್ತೆಗಳಲ್ಲಿ ವಾಹನ ನಿಲುಗಡೆ ಮಾಡಿ, ಪುಂಡಾಟ ಮೆರೆಯುವವರಿಗೆ ತಕ್ಕಶಾಸ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಊಟಿ ರಸ್ತೆಯಲ್ಲಿ ಆಯಕಟ್ಟಿನ ಪ್ರದೇಶದಲ್ಲಿ ವಾಹನ ಸವಾರರು ವಾಹನ ನಿಲುಗಡೆ ಮಾಡುವ ಸ್ಥಳವನ್ನು ಗುರುತಿಸಿರುವ ಅರಣ್ಯ ಸಿಬ್ಬಂದಿ, ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ನಾಲ್ಕು ಸೋಲಾರ್ ಸಿಸಿ ಕ್ಯಾಮರಾ ಅಳವಡಿಸಿದ್ದಾರೆ.

ರಸ್ತೆ ಬದಿ ಇರುವ ಮರ ಹಾಗೂ ಸೂಚನಾ ಫಲಕದ ಕಂಬಗಳಿಗೂ ಸೋಲಾರ್ ಸಿಸಿ ಕ್ಯಾಮರಾ ಅಳವಡಿಸಲಾಗಿದ್ದು, ರಸ್ತೆಯಲ್ಲಿ ಸಂಚರಿಸುವ ಹಾಗೂ ಅರಣ್ಯದಲ್ಲಿ ನಿಲುಗಡೆ ಮಾಡುವ ವಾಹನಗಳ ಚಿತ್ರಣ ಸೆರೆ ಹಿಡಿಯುತ್ತವೆ. ರಸ್ತೆಯಲ್ಲಿ ಪ್ರಾಣಿಗಳ ಮುಂದೆ ಚೆಲ್ಲಾಟವಾಡುವವರು, ನಿಯಮ ಉಲ್ಲಂಘಿಸಿ ವಾಹನ ನಿಲ್ಲಿಸುವವರು ಹಾಗೂ ಪ್ರಾಣಿ–ಪಕ್ಷಿಗಳಿಗೆ ನಿಯಮ ಉಲ್ಲಂಘಿಸಿ ಆಹಾರ ಪದಾರ್ಥ ನೀಡುವವರನ್ನು ಪತ್ತೆ ಮಾಡಿ ಮುಲಾಜಿಲ್ಲದೆ ದಂಡ ವಿಧಿಸಲು ಈ ಸೋಲಾರ್ ಸಿಸಿ ಕ್ಯಾಮರಾ ಸಹಕಾರಿಯಾಗಿದೆ

> **ಸಾಫ್ಟ್‌ವೇರ್ ಸಿದ್ಧಪಡಿಸಿ, ಲೈವ್ ಚಿತ್ರಣ ವೀಕ್ಷಿಸಲಾಗುವುದು**
>
> 
>
> ಮೊದಲ ಹಂತದಲ್ಲಿ ಊಟಿ ರಸ್ತೆಯಲ್ಲಿ ನಾಲ್ಕು ಸೋಲಾರ್ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಪ್ರತಿದಿನ ಅದರಲ್ಲಿ ದಾಖಲಾಗುವ ಚಿತ್ರಣ ವೀಕ್ಷಿಸಿ, ಯಾರಾದರೂ ನಿಯಮ ಉಲ್ಲಂಘಿಸಿದ್ದರೆ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ. ಮುಂದಿನ ದಿನಗಳಲ್ಲಿ ಸಿಸಿ ಕ್ಯಾಮರಾಗಳಿಗಾಗಿ ಸಾಫ್ಟ್‌ವೇರ್‌ವೊಂದನ್ನು ಅಭಿವೃದ್ಧಿ ಪಡಿಸಿ, ಸೋಲಾರ್ ಸಿಸಿ ಕ್ಯಾಮರಾದಲ್ಲಿ ದಾಖಲಾಗುವ ಚಿತ್ರಣವನ್ನು ಲೈವ್ ಆಗಿ ವೀಕ್ಷಿಸುವ ವ್ಯವಸ್ಥೆ ಮಾಡಲು ಚಿಂತನೆ ನಡೆಸಲಾಗಿದೆ. ಈ ವ್ಯವಸ್ಥೆಯಿಂದ ಅರಣ್ಯ ಪ್ರದೇಶದಲ್ಲಿ ವಾಹನ ಸವಾರರ ಪುಂಡಾಟಕ್ಕೆ ಪೂರ್ಣ ಪ್ರಮಾಣದಲ್ಲಿ ಕಡಿವಾಣ ಹಾಕುವುದಕ್ಕೆ ಸಹಕಾರಿಯಾಗಿದೆ.
>
> - **ಎಸ್.ಪ್ರಭಾಕರನ್,** ನಿರ್ದೇಶಕರು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ


ಆನೆಗಳಿಂದ ರಕ್ಷಣೆ: ಸೋಲಾರ್ ಸಿಸಿ ಕ್ಯಾಮರಾ ಅಳವಡಿಸಿರುವುದರಿಂದ ಅರಣ್ಯ ಇಲಾಖೆಗೆ ವರದಾನವಾಗಿ ಪರಿಣಮಿಸಿದೆ. ಸೋಲಾರ್ ಪ್ಯಾನಲ್ ಇರುವುದರಿಂದ ಸೌರಶಕ್ತಿಯಿಂದ ಸಿಸಿ ಕ್ಯಾಮರಾಗಳು ಚಾಲನೆಯಾಗಲಿವೆ. ಇದರಿಂದ ವಿದ್ಯುತ್ ಸಂಪರ್ಕ ಕಲ್ಪಿಸುವ ಗೋಜು ಇಲ್ಲ. ಅಲ್ಲದೆ, ಕ್ಯಾಮರಾಗಳನ್ನು ಮರದ ಕೊಂಬೆ ಹಾಗೂ ಸೂಚನಾ ಫಲಕಕ್ಕೆ ಅಳವಡಿಸಿರುವುದರಿಂದ ಅವುಗಳಿಗೆ ಹಾನಿಯಾಗದು.

ಸ್ಪಷ್ಟತೆ: ಉತ್ತಮವಾದ ಹೈ ರೆಸಿಲ್ಯೂಷನ್ ಸಾಮರ್ಥ್ಯದ ಸಿಸಿ ಕ್ಯಾಮರಾ ಅಳವಡಿಸಿರುವುದರಿಂದ ಆ ಕ್ಯಾಮರಾದಲ್ಲಿ ಸೆರೆಯಾಗುವ ಚಿತ್ರ ಹಾಗೂ ವೀಡಿಯೊ ಸ್ಪಷ್ಟವಾಗಿ ಗೋಚರಿಸುತ್ತಿವೆ. ಇದರಲ್ಲಿ ವಾಹನದ ನೋಂದಣಿ ಸಂಖ್ಯೆ, ವಾಹನ ಸವಾರರ ಚಿತ್ರಗಳು ಸ್ಪಷ್ಟವಾಗಿ ಕಾಣುತ್ತವೆ. ಇದರಿಂದ ಅರಣ್ಯ ಅಪರಾಧದಲ್ಲಿ ಪಾಲ್ಗೊಳ್ಳುವವರು ಹಾಗೂ ವನ್ಯಜೀವಿಗಳ ಮುಂದೆ ಸೆಲ್ಫಿ ತೆಗೆದುಕೊಳ್ಳಲು ಮುಂದಾಗುವವರನ್ನು ಪತ್ತೆ ಮಾಡಿ, ತಕ್ಕ ಶಾಸ್ತಿ ಮಾಡಲು ಸೋಲಾರ್ ಸಿಸಿ ಕ್ಯಾಮರ ಉತ್ತಮ ಮಾರ್ಗವಾಗಿದೆ. 256 ಜಿಬಿ ಸಾಮರ್ಥ್ಯ ಮೈಕ್ರೋ ಚಿಪ್ ಇರಲಿದೆ. ನಿತ್ಯವೂ ಸಿಸಿ ಕ್ಯಾಮರಾದಲ್ಲಿ ದಾಖಲಾಗಿರುವ ಚಿತ್ರ, ವೀಡಿಯೊ ಪರಿಶೀಲಿಸಲಾಗುತ್ತದೆ.

ಎಚ್ಚರಗೊಂಡ ಸವಾರರು: ಸಿಸಿ ಕ್ಯಾಮರಾ ಅಳವಡಿಸಿರುವುದನ್ನು ಕಂಡು ವಾಹನ ಸವಾರರು ಎಚ್ಚೆತ್ತಿದ್ದು, ನಿಯಮ ಉಲ್ಲಂಘಿಸುವ ಧೈರ್ಯ ಮಾಡುತ್ತಿಲ್ಲ. ಸಿಸಿ ಕ್ಯಾಮರಾದೊಂದಿಗೆ ಗಸ್ತು ವಾಹನದಲ್ಲಿ ಸಿಬ್ಬಂದಿ ಕಣ್ಗಾವಲು ಇಟ್ಟಿರುವುದರಿಂದ ಕಳೆದ ಒಂದು ತಿಂಗಳಿಂದ ಅರಣ್ಯದ ನಡುವೆ ಹಾದು ಹೋಗಿರುವ ರಸ್ತೆಗಳಲ್ಲಿ ಪುಂಡರ ಹಾವಳಿಗೆ ಬ್ರೇಕ್ ಬಿದ್ದಂತಾಗಿದೆ.

ಕುಕ್ಕರಹಳ್ಳಿ ಕೆರೆ ಸುಸ್ಥಿತಿ ಕಾಪಾಡಿ, ಪೂರ್ಣಯ್ಯ ನಾಲೆ ತೆರವುಗೊಳಿಸಿ

ಮೈಸೂರು ಗ್ರಾಹಕ ಪರಿಷತ್ತು ಒತ್ತಾಯ



ಮೈಸೂರು ಗ್ರಾಹಕ ಪರಿಷತ್ತು(ಮೈಗ್ರಾಪ) ವತಿಯಿಂದ ಮೈಸೂರು ವಿಶ್ವವಿದ್ಯಾನಿಲಯ ಕುಲಸಚಿವೆ ಎಂ.ಕೆ.ಸವಿತ ಅವರಿಗೆ ಕುಕ್ಕರಹಳ್ಳಿ ಕುರಿತಂತೆ ವರದಿ ಸಲ್ಲಿಸಲಾಯಿತು.

ಮೈಸೂರು, ನ.22(ಜಿಎ)– ಕುಕ್ಕರಹಳ್ಳಿ ಕೆರೆಯ ಸುಸ್ಥಿತಿ ಕಾಪಾಡಿ ಜೊತೆಗೆ ಪೂರ್ಣಯ್ಯ ನಾಲೆ ತೆರವು ಸಂಬಂಧಿಸಿದಂತೆ ಕ್ರಮ ವಹಿಸುವಂತೆ ಮೈಸೂರು ಗ್ರಾಹಕ ಪರಿಷತ್ತು(ಮೈಗ್ರಾಪ) ಒತ್ತಾಯಿಸಿದೆ.

ಮೈಸೂರು ವಿಶ್ವವಿದ್ಯಾನಿಲಯ ಕುಲಸಚಿವೆ ಎಂ.ಕೆ.ಸವಿತ ಅವರನ್ನು ಗ್ರಾಹಕ ಪರಿಷತ್‌ನ ಸಂಸ್ಥಾಪಕ ಅಧ್ಯಕ್ಷ ಭಾಮಿ ಶೆಣೈ ಭೇಟಿ ಮಾಡಿ, ಕುಕ್ಕರಹಳ್ಳಿ ಕೆರೆಯ ವಾಸ್ತವ ಸ್ಥಿತಿಯನ್ನು ಮನವರಿಕೆ ಮಾಡಿ ಕೆರೆಯ ಸುಸ್ಥಿತಿಯನ್ನು ಉಳಿಸುವ ಜೊತೆಗೆ ಬಹು ಮುಖ್ಯವಾಗಿ ಪೂರ್ಣಯ್ಯ ನಾಲೆ ತೆರವು ಮಾಡಿ ಸಂಬಂಧ ಪಟ್ಟ ಇಲಾಖೆಗೆ ಪತ್ರ ಬರೆದು ಕಾರ್ಯ ಪ್ರವೃತ್ತರಾದರೇ ಕೆರೆಯ ನೀರು ಸುಧಾರಿಸುತ್ತದೆ. ಮಳೆಗಾಲದ ಮುಂಚೆ ಈ ಕಾರ್ಯಗಳು ಪೂರ್ಣಗೊಂಡರೆ ಕೆರೆಯ ಸಂರಕ್ಷಣೆಗೆ ಅನುಕೂಲವಾಗುತ್ತದೆ ಎಂದರು.

ಜಿಲ್ಲಾಧಿಕಾರಿ, ವಿವಿ ಕುಲಪತಿಗಳು, ಕುಲಸಚಿವರನ್ನು ಒಳಗೊಂಡಂತೆ ಪರಿಣಿತರ ಪಟ್ಟಿಯನ್ನು ಮೈಗ್ರಾಪ ಸಿದ್ಧಪಡಿಸಿ ಕೆಲವು ಪ್ರಮುಖ ಅಂಶಗಳನ್ನು ಒಳಗೊಂಡಂತೆ ಐದು ಪುಟಗಳ ವರದಿಯನ್ನು ಈ ಸಂದರ್ಭದಲ್ಲಿ ಕುಲಸಚಿವರಿಗೆ ನೀಡಿದರು.

ಈ ವೇಳೆ ಕುಲಸಚಿವೆ ಎಂ.ಕೆ.ಸವಿತಾ ಪ್ರತಿಕ್ರಿಯಿಸಿ, ಮೈಸೂರು ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಶೀಘ್ರವೇ ಒಂದು ಸಭೆ ನಿಗದಿ ಮಾಡಿ ಚರ್ಚಿಸಿ ಮುಂದಿನ ಕಾರ್ಯಗಳನ್ನು ಸಾಧಕ ಬಾದಕಗಳನ್ನು ಪರಿಶೀಲಿಸಿ ಯೋಜನೆಗಳನ್ನು ರೂಪಿಸುವ ಎಂಬ ಧನಾತ್ಮಕ ಮಾತು ಹೇಳಿದರು.

ಕುಕ್ಕರಹಳ್ಳಿ ಕೆರೆಗೆ ಒಂದು (ಬೋಟ್) ಹೊಸ ದೋಣಿಯನ್ನು ತರಿಸುತ್ತಿದ್ದೇವೆ ಹಾಗೂ ಶೀಘ್ರದಲ್ಲೇ ದೋಣಿ ವಿಹಾರವನ್ನು ಪ್ರಾರಂಭಿಸಿ ಮೈ ವಿವಿ ಸಿಬ್ಬಂದಿಯನ್ನು ನಿಯೋಜಿಸಿ ಸ್ವಚ್ಛತೆ ಹಾಗೂ ಶೌಚಾಲಯಗಳ ದುರಸ್ತಿ ಕಾರ್ಯಗಳು ನಡೆಯುತ್ತವೆ. ಕೆರೆಯ ಸೌಂದರ್ಯವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಮೈ ಗ್ರಾ ಪ ಮನವಿಗೆ ಕೃತಜ್ಞತೆ ಸಲ್ಲಿಸಿ ಸಹಕಾರ ನೀಡುತ್ತೇವೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಮೈಗ್ರಾಪ ನಿಯೋಗದಲ್ಲಿ ಸಂಚಾಲಕ ಡಿ.ವಿ.ದಯಾನಂದ್ ಸಾಗರ್, ಸದಸ್ಯೆ ಸುಮನ್ ಶೆಣೈ ಉಪಸ್ಥಿತರಿದ್ದರು.

ವಿಜಯನಗರ ಮೂರನೇ ಹಂತ ಬಡಾವಣೆ ಸಮಸ್ಯೆ ಪರಿಹಾರಕ್ಕೆ ಶೀಘ್ರ ಜನಸಂಪರ್ಕ ಸಭೆ

● ಶಾಸಕ ಜಿ.ಟಿ.ದೇವೇಗೌಡ ಭರವಸೆ ● 3, 4ನೇ ಹಂತ ಸೇರಿಸಿ ಸುಂದರ ಬಡಾವಣೆ ರೂಪಿಸುವ ಭವಿಷ್ಯದ ಯೋಜನೆ



ಮೈಸೂರು ವಿಜಯನಗರ ಮೂರನೇ ಹಂತದಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು. ಸಮಿತಿ ಅಧ್ಯಕ್ಷ ಎಸ್.ಮಂಜಪ್ಪ, ವಿಜಯ ಕಾಲೇಜು ಪ್ರಾಂಶುಪಾಲ ಡಾ.ಕೆ.ಸಿ.ಶಿವರಾಮಯ್ಯ, ಕಾರ್ಯದರ್ಶಿ ಚೈತನ್ಯ ಕುಮಾರ್, ಖಜಾಂಚಿ ಟಿ.ಟಿ.ರಮೇಶ್, ನಿರ್ದೇಶಕರಾದ ಡಾ.ಬಿ.ಪಿ.ಪರಶಿವಮೂರ್ತಿ, ಡಾ.ಮಹದೇವಯ್ಯ ಮತ್ತಿತರರಿದ್ದರು.

ಮೈಸೂರು, ನ22– ಮೈಸೂರಿನ ವಿಜಯನಗರ ಮೂರನೇ ಹಂತ ಬಡಾವಣೆಯ ಸಮಸ್ಯೆಗಳ ಪರಿಹಾರಕ್ಕೆ ಶೀಘ್ರದಲ್ಲೇ ಜನಸಂಪರ್ಕ ಸಭೆ ನಡೆಸುವುದಾಗಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ವಿಜಯನಗರ ಮೂರನೇ ಹಂತ, ಸಿ ಬ್ಲಾಕ್ ಪಾರ್ಕ್ ನಂ.8ರ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಜಯನಗರ ಮೂರು ಮತ್ತು ನಾಲ್ಕನೇ ಹಂತವನ್ನು ಮೈಸೂರು ಮಹಾನಗರ ಪಾಲಿಕೆಗೆ ಸೇರಿಸಿ, ಸುಂದರ ಬಡಾವಣೆಗಳನ್ನಾಗಿ ರೂಪಿಸಲಾಗುವುದು. ಸದ್ಯಕ್ಕೆ ಅಧಿಕಾರಿಗಳೊಂದಿಗೆ ಜನಸಂಪರ್ಕ ಸಭೆ ನಡೆಸುವ ಮೂಲಕ ಮೂಲ ಸಮಸ್ಯೆಗಳ ಪರಿಹಾರಕ್ಕೆ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಈ ಎರಡು ಬಡಾವಣೆಗಳನ್ನು ನಗರ ಪಾಲಿಕೆಗೆ, ನಂತರ ನಗರ ಸಭೆಗೆ ಸೇರಿಸಲು ಪ್ರಯತ್ನಿಸಿದಾಗ ಸಹಕಾರ ಸಿಗಲಿಲ್ಲ. ಪರಿಣಾಮ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಇಂದಿನ ಎಂಡಿಎ)ದ ಮೂಲಕ ರಸ್ತೆಗಳ ಅಭಿವೃದ್ಧಿ ಮಾಡಿಸಿದ್ದೆ. ನಂತರ ವಿಜಯನಗರ ಬಡಾವಣೆಗೆ ಸಮರ್ಪಕ ನೀರು ಕಲ್ಪಿಸಲು ಶ್ರಮಿಸಿದ್ದು, ಉಂಡುವಾಡಿ ಯೋಜನೆ ಕಾಮಗಾರಿ ಶೀಘ್ರದಲ್ಲೇ ಪೂರ್ಣಗೊಳ್ಳಲಿದೆ. ಗ್ರೇಟರ್ ಮೈಸೂರು ವ್ಯಾಪ್ತಿಗೆ ಸೇರಿಸಲು ಕೆಲವರ ವಿರೋಧ ವಿದ್ದರೂ ಸರ್ಕಾರದ ಮೇಲೆ ನಿರಂತರವಾಗಿ ಒತ್ತಡ ತರುತ್ತಿದ್ದೇನೆ ಎಂದರು.

ಪಾರ್ಕ್‌ಗಳ ಅವ್ಯವಸ್ಥೆ ಸೇರಿದಂತೆ ಇಲ್ಲಿನ ಸಮಸ್ಯೆಗಳ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ನಗರ ಪಾಲಿಕೆ ಆಯುಕ್ತರು, ಎಂಡಿಎ ಆಯುಕ್ತರು, ಇಂಜಿನಿಯರ್‌ಗಳು ಮತ್ತಿತರ ಅಧಿಕಾರಿಗಳ ಪ್ರತ್ಯೇಕ ಸಭೆ ಕರೆದು ಚರ್ಚಿಸುತ್ತೇನೆ. ಕುಡಿಯುವ ನೀರು, ರಸ್ತೆ, ಯುಜಿಡಿ, ಬೀದಿದೀಪ, ಉದ್ಯಾನವನಗಳ ನಿರ್ವಹಣೆ ಬಗ್ಗೆ ಸೂಕ್ತ ಕ್ರಮ ವಹಿಸಲಾಗುವುದು. ಬೋಗಾದಿ ಎರಡನೇ ಹಂತ ಉತ್ತರ ಸೇರಿದಂತೆ ಇನ್ನಿತರ ಬಡಾವಣೆಗಳ ಅಭಿವೃದ್ಧಿಗೂ ಒತ್ತು ನೀಡಲಾಗುವುದು ಎಂದರು.

ಬಡಾವಣೆಗಳನ್ನು ಯೋಜನಾಬದ್ಧವಾಗಿ ನಿರ್ಮಾಣ ಮಾಡಿಲ್ಲ ಪರಿಣಾಮ ಹಲವು ಬಡಾವಣೆಗಳಲ್ಲಿ ಮೂಲ ಸೌಕರ್ಯಗಳ ಕೊರತೆ ಇದೆ. ಇದಕ್ಕೆ ನೂರಾರು ಕೋಟಿ ಅನುದಾನದ ಅಗತ್ಯವಿದೆ. ಆದ್ದರಿಂದಲೇ ಬಡಾವಣೆಗಳ ದುಸ್ಥಿತಿಯನ್ನು ನಿರಂತರವಾಗಿ ಸರ್ಕಾರದ ಗಮನಕ್ಕೆ ತಂದು, ಅನುದಾನ ನೀಡುವಂತೆ ಒತ್ತಾಯಿಸುತ್ತಿದ್ದೇನೆ ಎಂದು ತಿಳಿಸಿದರು.

ಕನ್ನಡ ಭಾಷೆ ಕಲಿಸಬೇಕು: ಕನ್ನಡ ರಾಜ್ಯೋತ್ಸವ ಒಂದು ಮಾಸಕ್ಕೆ ಸೀಮಿತವಾಗದೆ ನಿತ್ಯ ಆಚರಣೆಯಾಗಬೇಕು. ಈ ನಾಡಿನಲ್ಲಿ ಜೀವನ ನಡೆಸುವ ಪ್ರತಿಯೊಬ್ಬರೂ ಕನ್ನಡ ಕಲಿಯಬೇಕು. ಕನ್ನಡಿಗರೆಲ್ಲಾ ಒಂದೇ ಎನ್ನುವ ಭಾವನೆ ಹೊಂದಬೇಕು. ಮೈಸೂರು ಕನ್ನಡ ಭಾಷೆ, ನೆಲ, ಜಲದ ಹೋರಾಟಗಳಲ್ಲಿ ಮಹತ್ವದ ಪಾತ್ರ ವಹಿಸಿದೆ. ಬೆಂಗಳೂರಿನಲ್ಲಿ ಹೊರರಾಜ್ಯದವರ ಸಂಖ್ಯೆಯೇ ಹೆಚ್ಚಾಗುತ್ತಿದೆ. ಅವರಿಗೆ ಕನ್ನಡ ಕಲಿಸುವ ಬದಲು ನಾವೇ ಅವರ ಭಾಷೆ ಕಲಿತು, ವ್ಯವಹರಿಸುವುದು ಅಪಾಯಕಾರಿ. ಈಗಿನಿಂದಲಾದರೂ ಹೊರ ರಾಜ್ಯದಿಂದ ಬಂದವರಿಗೆ ಕನ್ನಡ ಕಲಿಸಿ, ಅವರೊಂದಿಗೆ ನಮ್ಮ ಭಾಷೆಯಲ್ಲೇ ಮಾತನಾಡುವ ಸಂಕಲ್ಪ ತೊಡಬೇಕೆಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಸಮಿತಿ ಅಧ್ಯಕ್ಷ ಎಸ್.ಮಂಜಪ್ಪ, ವಿಜಯ ಕಾಲೇಜಿನ ಪ್ರಾಂಶುಪಾಲ ಡಾ.ಕೆ.ಸಿ.ಶಿವರಾಮಯ್ಯ, ಕಾರ್ಯದರ್ಶಿ ಚೈತನ್ಯ ಕುಮಾರ್, ಮುಖಂಡರಾದ ರವಿಕುಮಾರ್, ವಿಜಯನಗರ ಮಂಜು, ಕುಮಾರ್, ಸಮಿತಿಯ ಖಜಾಂಚಿ ಟಿ.ಟಿ.ರಮೇಶ್, ನಿರ್ದೇಶಕರಾದ ಡಾ.ಬಿ.ಪಿ.ಪರಶಿವಮೂರ್ತಿ, ಡಾ.ಮಹದೇವಯ್ಯ, ಕೆ.ನಂಜುಂಡಯ್ಯ, ಕೆ.ಸಿ.ಜವರೇಗೌಡ, ಶಿವಕುಮಾರ, ಆರ್.ಎನ್.ಶ್ರೀನಿವಾಸಮೂರ್ತಿ, ಸುವರ್ಣರೆಡ್ಡಿ, ವಿಜಯಕುಮಾರಿ, ಲತಾ ತಂಗಮ್ಮ ಮತ್ತಿತರರು ಭಾಗವಹಿಸಿದ್ದರು.

ಭಾರತ–ದ.ಆಫ್ರಿಕಾ ದ್ವಿತೀಯ ಟೆಸ್ಟ್

ದಕ್ಷಿಣ ಆಫ್ರಿಕಾ ಆರು ವಿಕೆಟ್‌ಗೆ 247 ರನ್

ಗುವಾಹಟಿ, ನ.22(ವಿವಿಹೆಚ್)– ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ಎರಡನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಅಲ್ಪ ಮುನ್ನಡೆ ಸಾಧಿಸಿದೆ.

ಇಲ್ಲಿನ ಬಾರ್ಸಪರ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ನಿರ್ಣಾಯಕ ಪಂದ್ಯದಲ್ಲಿ ಗೆಲ್ಲಲೇ ಬೇಕಾದ ಒತ್ತಡದಲ್ಲಿರುವ ಭಾರತಕ್ಕೆ ದಕ್ಷಿಣ ಆಫ್ರಿಕಾ ಸವಾಲಾಗಿ ಪರಿಣಮಿಸಿದೆ.

2ನೇ ಟೆಸ್ಟ್ ಪಂದ್ಯದಲ್ಲಿ ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತ್ತು. ಅದರಂತೆ ಮೊದಲ ಇನ್ನಿಂಗ್ಸ್ ಬ್ಯಾಟಿಂಗ್ ನಡೆಸಿದ ಟೆಂಬಾ ಬವುಮಾ ಪಡೆ ಮೊದಲ ದಿನದಾಟದ ಅಂತ್ಯಕ್ಕೆ 6 ವಿಕೆಟ್ ನಷ್ಟಕ್ಕೆ 247 ರನ್ ಗಳಿಸಿದೆ.

ಆಫ್ರಿಕಾ ಪರ ಮರ್ಕ್ರಮ್ 38, ರ್ಯಾನ್ ರಿಕಲ್ಟನ್ 35, ಸ್ಟಬ್ಸ್ 49, ನಾಯಕ ಟೆಂಬಾ ಬವುಮಾ 41, ಜೋರ್ಜಿ 28, ವಿಯಾನ್ ಮುಲ್ಡರ್ 13 ರನ್ ಗಳಿಸಿ ಔಟಾದರು.

ಬಳಿಕ ಬ್ಯಾಟಿಂಗ್ ಬಂದ ಸೆನುರಾನ್ ಮುತ್ತುಸಾಮಿ ಅಜೇಯ 25, ಕೈಲ್ ವೆರ್ರೆನ್ ಅಜೇಯ 1 ರನ್ ಗಳಿಸಿ 2ನೇ ದಿನಕ್ಕೆ ಕ್ರೀಸ್ ಕಾಯ್ದುಕೊಂಡಿದ್ದಾರೆ.

ಇನ್ನು ಭಾರತದ ಪರ ಭರ್ಜರಿ ಬೌಲಿಂಗ್ ಪ್ರದರ್ಶನ ನೀಡಿದ ಕುಲದೀಪ್ ಯಾದವ್ 3 ವಿಕೆಟ್ ಪಡೆದರೆ, ಬುಮ್ರಾ, ಸಿರಾಜ್ ಮತ್ತು ಜಡೇಜಾ ತಲಾ 1 ವಿಕೆಟ್ ಪಡೆದರು.



ವಿಕೆಟ್ ಕಿತ್ತ ಸಂಭ್ರಮದಲ್ಲಿ ಕುಲ್ದೀಪ್ ಯಾದವ್

ಶಿಕ್ಷಕರ ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ಶಿಬಿರ

ಮೈಸೂರು,ನ.22–ಮೈಸೂರಿನ ಕೃಷಿಕ್ ಸರ್ವೋದಯ ಫೌಂಡೇಷನ್ ವತಿಯಿಂದ ಶಿಕ್ಷಕರ ನೇಮಕಾತಿಯ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ಶಿಬಿರ ಆಯೋಜಿಸಲಾಗಿದೆ. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯು 18,500ಕ್ಕೂ ಹೆಚ್ಚು ಶಾಲಾ ಶಿಕ್ಷಕರ ನೇಮಕಾತಿಗೆ ಸದ್ಯದಲ್ಲೇ ಅಧಿಸೂಚನೆ ಹೊರಡಿಸಲಿದ್ದು, ಕೇಂದ್ರ ಶಿಕ್ಷಣ ಇಲಾಖೆ 14,967ಕ್ಕಿಂತ ಹೆಚ್ಚು ನವೋದಯ ಶಾಲಾ ಶಿಕ್ಷಕರ ನೇಮಕಾತಿಗೆ ಅರ್ಜಿ ಆಹ್ವಾನಿಸಿದೆ.

ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಈ ನೇಮಕಾತಿಗಳು ನಡೆಯಲಿರುವುದರಿಂದ ಕೃಷಿಕ್ ಸರ್ವೋದಯ ಫೌಂಡೇಷನ್ ಡಿ.1ರಿಂದ ಮೂರು ತಿಂಗಳ ಕಾಲ ಈ ಪರೀಕ್ಷೆಗಳಲ್ಲಿ ಹಾಜರಾಗುವವರಿಗೆ ತರಬೇತಿ ಏರ್ಪಡಿಸಿದೆ. ಆಸಕ್ತರು, ಕೃಷಿಕ್ ಸರ್ವೋದಯ ಫೌಂಡೇಷನ್, ಕೃಷಿಕ್ ಭವನ, ಸಿಎ 25, ಜನರಲ್ ಕೆ.ಎಸ್.ತಿಮ್ಮಯ್ಯ ರಸ್ತೆ, ವಿಜಯನಗರ 2ನೇ ಹಂತ, ಮೈಸೂರು ಈ ವಿಳಾಸದಲ್ಲಿ ಹೆಸರು ನೋಂದಾಯಿಸಿಕೊಳ್ಳಬಹುದು. ಮಾಹಿತಿಗಾಗಿ ಕಚೇರಿಯ ಶೈಕ್ಷಣಿಕ ಸಂಯೋಜಕಿ ಎಂ.ವಿ.ಜ್ಯೋತಿ ಅವರನ್ನು ದೂ.ಸಂಖ್ಯೆ 0821-2301564 ಅಥವಾ ಮೊಬೈಲ್ ಸಂಖ್ಯೆ 8296031570 ಮೂಲಕ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಅಥ್ಲೆಟಿಕ್ಸ್‌ನಲ್ಲಿ ಹುಣಸೂರು ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಆಯ್ಕೆ



ಹುಂಡಿಮಾಳ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ವಿವಿಧ ಕ್ರೀಡೆಯಲ್ಲಿ ಉತ್ತಮ ಪ್ರದರ್ಶನ ನೀಡಿ, ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಮೈಸೂರು, ನ.22(ಎಸ್‌ಪಿಎನ್)– ಮೈಸೂರು ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾಮಟ್ಟದ ಅಥ್ಲೆಟಿಕ್ಸ್ ಸ್ಪರ್ಧೆಗಳಲ್ಲಿ ಹುಣಸೂರು ತಾಲೂಕಿನಿಂದ ಹುಂಡಿಮಾಳ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಉತ್ತಮ ಪ್ರದರ್ಶನ ನೀಡಿ, ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಬಾಲಕರ ವಿಭಾಗದಲ್ಲಿ 400 ಮೀ. ಹರ್ಡಲ್ಸ್ 10ನೇ ತರಗತಿಯಲ್ಲಿ ಆದಿತ್ ಗೌಡ ಪ್ರಥಮ ಹಾಗೂ 110ಮೀ ಹರ್ಡಲ್ಸ್ ತೃತೀಯ ಸ್ಥಾನ ಪಡೆದಿದ್ದಾರೆ. 1500 ಮೀಟರ್ ಸ್ಪರ್ಧೆಯಲ್ಲಿ 10ನೇ ತರಗತಿ ವಿದ್ಯಾರ್ಥಿ ಕಿರಣ್ ಪ್ರಥಮ ಸ್ಥಾನಗಳಿಸಿದ್ದಾರೆ.

800 ಮೀ ಆದರ್ಶ 9ನೇ ತರಗತಿ ತೃತೀಯ ಸ್ಥಾನ, 3000 ಮೀ, ಸ್ಪರ್ಧೆಯಲ್ಲಿ 10ನೇ ತರಗತಿ ವಿದ್ಯಾರ್ಥಿ ವಸಂತ್ ತೃತೀಯ ಸ್ಥಾನ, 5 ಕಿ.ಮೀ ನಡಿಗೆ ಸ್ಪರ್ಧೆಯಲ್ಲಿ ವಿದ್ಯಾರ್ಥಿ ಚಿರಂತ್ ತೃತೀಯ ಸ್ಥಾನ ಪಡೆದಿದ್ದಾರೆ. ಬಾಲಕಿಯರ ವಿಭಾಗದಲ್ಲಿ 100 ಮೀ ಹರ್ಡಲ್ಸ್‌ನಲ್ಲಿ 10ನೇ ತರಗತಿ ಗೌರಿ ದ್ವಿತೀಯ ಸ್ಥಾನ, 400 ಮೀ ಹರ್ಡಲ್ಸ್ 10ನೇ ತರಗತಿಯ ವಿದ್ಯಾರ್ಥಿನಿ ಯು.ಸಿ.ಅಂಜಲಿ ಪ್ರಥಮ, 10ನೇ ತರಗತಿಯ ವಿದ್ಯಾರ್ಥಿನಿ ಅಭಿನಯ ಪ್ರಥಮ ಸ್ಥಾನಗಳಿಸಿದ್ದಾರೆ.

1500 ಮೀ ಓಟದಲ್ಲಿ 10ನೇ ತರಗತಿ ವಿದ್ಯಾರ್ಥಿನಿ ಅಭಿನಯ ಪ್ರಥಮ, 3000 ಓಟ ಸ್ಪರ್ಧೆಯಲ್ಲಿ 10ನೇ ತರಗತಿ ವಿದ್ಯಾರ್ಥಿನಿ ಶ್ವೇತಾ ತೃತೀಯ ಸ್ಥಾನ ಪಡೆದಿದ್ದಾರೆ. 3 ಕಿ.ಮೀ ನಡಿಗೆ ಸ್ಪರ್ಧೆಯಲ್ಲಿ 10ನೇ ತರಗತಿಯ ವಿದ್ಯಾರ್ಥಿನಿ ಶ್ವೇತಾ ದ್ವಿತೀಯ, 4,100 ಮೀ ರಿಲೇ ಸ್ಪರ್ಧೆಯಲ್ಲಿ ಅಭಿನಯ, ಅರ್ಚನಾ, ಗೌರಿ, ಅಂಜಲಿ ತಂಡಕ್ಕೆ ದ್ವಿತೀಯ ಸ್ಥಾನ ಪಡೆದು ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಲು ಆಯ್ಕೆಯಾಗಿದ್ದಾರೆ. ಈ ಕ್ರೀಡಾಪಟುಗಳಿಗೆ ಹಾಗೂ ತರಬೇತಿಗೊಳಿಸಿದ ದೈಹಿಕ ಶಿಕ್ಷಣ ಶಿಕ್ಷಕ ಬಿ.ಮಂಜುನಾಥ ರವರಿಗೆ ಮುಖ್ಯೋಪಾಧ್ಯಾಯ ಕೆ.ರವಿ, ಸಹೋದ್ಯೋಗಿಗಳು, ಎಸ್‌ಡಿಎಂಸಿ ಸದಸ್ಯರು, ಗ್ರಾಮಸ್ಥರು ಉಪಸ್ಥಿತರಿದ್ದು ಅಭಿನಂದಿಸಿದ್ದಾರೆ.

ಕಳೆದಿದೆ

ಮೈಸೂರು ನಗರ, ಚಾಮರಾಜ ಮೊಹಲ್ಲಾ, ಬೋಗಾದಿ ಉತ್ತರ, ಶಾರದದೇವಿನಗರ, 1ನೇಮುಖ್ಯ ರಸ್ತೆ, 1ನೇ ಅಡ್ಡ ರಸ್ತೆ ಮನೆ ನಂ. ಎಂಐಜಿ–48 ಇದರ ಅಳತೆ ಪೂರ್ವ ಪಶ್ಚಿಮ: 9.00 ಮೀಟರ್ ಮತ್ತು ಉತ್ತರ ದಕ್ಷಿಣ: 12.00 ಮೀಟರ್ ಉಳ್ಳ ಒಟ್ಟು 108 ಚದರ ಮೀಟರ್ ನಿವೇಶನ ಮತ್ತು ಇದರ ನೆಲ ಅಂತಸ್ತಿನಲ್ಲಿರುವ 550 ಚದರ ಅಡಿ ಮತ್ತು ಒಂದನೇ ಅಂತಸ್ತಿನಲ್ಲಿರುವ 700 ಚದರ ಅಡಿ ಆರ್.ಸಿ.ಸಿ ಮೇಲ್ಛಾವಣಿ, ವೆಟ್ರಿಫೈಡ್ ನೆಲಹಾಸುವುಳ್ಳ ಮನೆಯು ಶ್ರೀ ಈ ವಿನಯ್ ರವರಿಗೆ ದಿನಾಂಕ: 05.09.2019 ರಂದು ಮೈಸೂರು ದಕ್ಷಿಣ ಉಪನೋಂದಣಾಧಿಕಾರಿ ಕಛೇರಿಯ ಒಂದನೇ ಪುಸ್ತಕದ ದಸ್ತಾವೇಜು ಸಂಖ್ಯೆ: ಎಂ ವೈ ಎಸ್–1–04867–2019–20 ಆಗಿ ನೋಂದಾಯಿಸಿ, ಸಿ ಡಿ ಸಂಖ್ಯೆ: ಎಂ ವೈ ಎಸ್ ಡಿ–523 ರಲ್ಲಿ ಶೇಖರಿಸಿಟ್ಟಿರುವ ವಿಭಾಗ ಪತ್ರದ ಮೂಲಕ ಬಂದಿದ್ದು, ಸದರಿ ನೋಂದಾಯಿತ ವಿಭಾಗ ಪತ್ರದ ದ್ವಿಪ್ರತಿಯ ಮೂಲ ಪ್ರತಿಯು ಕಳೆದು ಹೋಗಿರುತ್ತದೆ,

ಈ ಸಂಬಂಧ ನಾನು ದಿನಾಂಕ: 20.11.25 ರಂದು ಮೈಸೂರು ನಗರ ಪೊಲೀಸ್ ರವರ ವರದಿ ಸಂಖ್ಯೆ: 1913253/2025 ರಂತೆ ದೂರನ್ನು ನೀಡಿದ್ದು, ವಿಭಾಗ ಪತ್ರದ ದ್ವಿಪ್ರತಿಯ ಮೂಲ ಪ್ರತಿಯು ಸಿಕ್ಕವರು/ ಆ ಸಂಬಂಧ ಯಾವುದೇ ವ್ಯವಹಾರಗಳು ಇದ್ದಲ್ಲಿ ಶ್ರೀ ಈ ವಿನಯ್ ದಿ॥ ಈಶ್ವರಶೆಟ್ಟಿ, ಮನೆ ನಂ. 48 ಎಂಐಜಿ, 1 ನೇ ಕ್ರಾಸ್, ಶಾರದದೇವಿನಗರ, ಮೈಸೂರು, (ಮೊ.ಸಂ. 9900011824) ರವರಿಗೆ ತಲುಪಿಸಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇವೆ.

(ಹೆಚ್.ಎಂ. ಸುಧಾಕರ)
ವಕೀಲರು, ಕೆಎಆರ್ 51/97
ನಂ. 23, ಪೆಟ್ರೋಲ್ ಬಂಕ್ ಹಿಂಭಾಗ,
ನಿವೇದಿತನಗರ, ಮೈಸೂರು Ph: 94485 58136
ದಿನಾಂಕ: 22–11–2025 ಸ್ಥಳ: ಮೈಸೂರು